# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಏಪ್ರಿಲ್, ೨೦೨೧ ಸಂಪಾದಕ : ಡಿ. ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ: ೩

ಚಂದಾ ರೂ. ೨೦೦/- (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-



ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕರ್ನಾಟಕದ ರಾಜಕಾರಣ ಅಧೋಗತಿಗೆ ಇಳಿದಿದೆ. ಇಂದು ಇಡೀ ರಾಷ್ಟ್ರದಲ್ಲೇ ನಮ್ಮ ರಾಜ್ಯದ ರಾಜಕಾರಣ ಅತ್ಯಂತ ಕೊಳಕಾದದ್ದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಮತದಾರರು ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ನೀಡದಿದ್ದ ಕಳೆದ ಚುನಾವಣೆಗಳ ನಂತರ ಆರಂಭವಾದ ಈ ವಶೀಲಿಬಾಜಿ ಮತ್ತು ದಗಲ್‌ಬಾಜಿ ರಾಜಕಾರಣ ಮೊದಲ ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ತನ್ನೆಲ್ಲ ಕುರೂಪವನ್ನು ತೋರಿಸಲಾರಂಭಿಸಿತ್ತಾದರೂ , ಆ ಸರ್ಕಾರವನ್ನು ಉರುಳಿಸಿ ಹೊಸ ಬಿಜೆಪಿ ಸರ್ಕಾರ ರಚನೆಯಾದ ರೀತಿ ನೀತಿಗಳು ಅದನ್ನು ಪಾತಾಳಕ್ಕೆ ತಳ್ಳಿದ ಪರಿಣಾಮಗಳನ್ನು ನಾವಿಂದು ನೋಡುತ್ತಿದ್ದೇವೆ ಇದರಲ್ಲಿ ರಾಜ್ಯದ ಎಲ್ಲ ಪಕ್ಷಗಳದ್ದಷ್ಟೇ ಅಲ್ಲ, ಮತದಾರ ಸಮುದಾಯದ ಪಾಲೂ ಇದೆ ಎಂದು ಹೇಳಬೇಕು. ಹಣ-ಅಧಿಕಾರಗಳಿಗಾಗಿ ತಮ್ಮನ್ನು ಮಾರಿಕೊಂಡ ಜನ ಪ್ರತಿನಿಧಿಗಳನ್ನು ಉಪಚುನಾವಣೆಗಳಲ್ಲಿ ಮತ್ತೆ ಗೆಲ್ಲಿಸಿ ಶಾಸನ ಸಭೆಗೆ ಕಳಿಸಿದ ಮತದಾರರರನ್ನು ಏನೆಂದು ಕರೆಯಬೇಕು?. ಇಡೀ ರಾಷ್ಟ್ರದಲ್ಲಿ ತನ್ನ 'ಆಪರೇಷನ್; ಕಮಲ'ದ ಮೂಲಕ ರಾಜಕಾರಣದ ತಾತ್ವಿಕ ತಳಹದಿಯನ್ನೇ ಬುಡಮೇಲುಗೊಳಿಸಿರುವ ಬಿಜೆಪಿಯ ದುರ್ವತನೆಗೆ ಹೀಗೆ ಪ್ರಜಾ ಪ್ರಭುವೇ ಮಾನ್ಯತೆ ನೀಡಿದ ಮೇಲೆ ಮುಂದೆ ಮಾತಾಡುವುದೇನಿದೆ? ದುಷ್ಟ ರಾಜಕಾರಣಿಗಳು ಸಾಕಷ್ಟು ಜಾಣ್ಮೆಯಿಂದ ಕಾನೂನುಗಳ ಹಿಡಿತಕ್ಕೆ ಸಿಗದಂತೆ ರೂಪಿಸುವ ಇಂತಹ ತಂತ್ರಗಳನ್ನು ಮತ್ತು ಅದರ ಫಲಾನುಭವಿಗಳನ್ನು ಅಮಾನ್ಯ ಮಾಡುವ ಅಂತಿಮ ಹೊಣೆ ಮತದಾರದ್ದೇ ಆಗಿರುತ್ತದೆ, ನಮ್ಮ ಮತದಾರರು ಅದನ್ನು ಎಚ್ಚರದಿಂದ ನಿರ್ವಹಿಸದಿರುವುದೇ ಇಂದಿನ ರಾಜಕಾರಣದ ಈ ದುಃಸ್ಥಿತಿ-ದುರಂತಕ್ಕೆ ಕಾರಣವಾಗಿದೆ

ಈ ದುರಂತದ ಎಲ್ಲ ದುಷ್ಟ ಲಕ್ಷಣಗಳೂ ಇಂದು ಕರ್ನಾಟಕದ ರಾಜಕಾರಣದ ಅಧೋಗತಿಗೆ ಪ್ರತೀಕಗಳಂತೆ ಕಾಣುತ್ತಿರುವ ರಮೇಶ ಜಾರಕಿಹೊಳಿ ಸಿಡಿ ಪ್ರಕರಣ ಮತ್ತು ಮೀಸಲಾತಿಗಾಗಿ ನಡೆದಿರುವ ಜಾತಿ ಬಲ ಪ್ರದರ್ಶನಗಳಲ್ಲಿ ಎದ್ದುಕಾಣುತ್ತಿವೆ. ಸಿಡಿ ಪ್ರಕರಣದ ಸಂಬಂಧ ನಡೆದಿರುವ ವಾಕ್ಸಮರ ಮತ್ತು ಚರ್ಚೆಗಳು ಇಂದಿನ ಈ ರಾಜಕಾರಣದ ಅನೈತಿಕತೆಯ ಮೂಲಕ್ಕೆ ತಾಗದಂತೆ, ಹೋಗದಂತೆ ಈ ಅನೈತಿಕತೆಯನ್ನು ಸೃಷ್ಟಿಸಿದ ಹೊಣೆಯಿಂದ ತಾವು ತಪ್ಪಿಸಿಕೊಳ್ಳುವ ರೀತಿಯಲ್ಲೇ ಎಚ್ಚರದಿಂದ ನಡೆಸಲಾಗುತ್ತಿದೆ. ಇಂದಿನ ಯಡಿಯೂರಪ್ಪನವರ ಸರ್ಕಾರವು ಸಕ್ರಮ ಸರ್ಕಾರವೇ ಆಗಿದ್ದರೂ ಅದು ನೈತಿಕವಾಗಿ ರಚನೆಯಾದ ಸರ್ಕಾರವೇ ಎಂಬ ಕಾನೂನಿನ ಎದುರಿನ ನೈತಿಕತೆಯ ಪ್ರಶ್ನೆಯಲ್ಲಿರುವ ದ್ವಂದ್ವವೇ ಮುಖ್ಯವಾಗಿ ಇಂದಿನ ಈ ಕೊಳಕು ರಾಜಕಾರಣಕ್ಕೆ ಕಾರಣವಾಗಿದೆ ಎನ್ನಬಹುದು. ಈ ಕೊಳಕಿಗೆ ಯಾವುದೇ ಒಂದು ಪಕ್ಷವನ್ನು ದೂರುವಂತಿಲ್ಲ. ಮೊದಲ ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷಗಳ ನಾಯಕರು ರಾಜ್ಯದ ಸೂಕ್ಷ್ಮ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿ ಹೆಚ್ಚಿನ ಮುತ್ಸದ್ದಿತನದಿಂದ ನಡೆದುಕೊಂಡಿದ್ದರೆ ಈ 'ಆಪರೇಷನ್ ಕಮಲ'ದ ಮೊದಲ ಪ್ರಯತ್ನದ ಸಾಕ್ಷಿಯಾಗಿ ದೊರೆತಿದ್ದ ಸಿಡಿಯಲ್ಲಿ ಕೇಳಿಬರುವ ದನಿ ತಮ್ಮದೇ ಎಂದು ಯಡಿಯೂರಪ್ಪನವರೇ ಒಪ್ಪಿಕೊಂಡಿದ್ದಾಗ ಆ ಸಿಡಿಯ ಹಿಂದಿನ ರಾಜಕೀಯ ಪಿತೂರಿಯನ್ನು ತನಿಖೆಗೆ ಒಳಪಡಿಸದ ಉದ್ದೇಶವಾದರೂ ಏನು ಎಂದು ಇಲ್ಲಿ ಕೇಳಬೇಕಾಗುತ್ತದೆ. ಈ ಸಿಡಿಯಲ್ಲಿ ತಮ್ಮ ಹೆಸರೂ ಪ್ರಸ್ತಾಪಿತವಾಗಿರುವ ಬಗ್ಗೆ ನೈತಿಕತೆಯ ದೊಡ್ಡ ಮಾತುಗಳ ಹಾರಾಟ ನಡೆಸಿದ್ದ ಅಂದಿನ ಸಭಾಧ್ಯಕ್ಷ ರಮೇಶ್‌ಕುಮಾರ್ ಇದರ ಬಗೆಗಿನ ತನಿಖೆಗಾಗಿ ವಿಶೇಷ ತನಿಖಾ ದಳ ರಚಿಸಬೇಕೆಂದು ಹಿಡಿದಿದ್ದ ಪಟ್ಟು ಏಕೆ ಕ್ರಮೇಣ ಸಡಿಲಾಗಿ ಕಾಣೆಯಾಯಿತು? ಎಂದು ಕೇಳುವ ಸಂದರ್ಭವೂ ಇದಾಗಿದೆ.

ಹೀಗೆ ಇಂದು ರಾಜ್ಯದ ರಾಜಕಾರಣವನ್ನು ಅಧೋಗತಿಗೆ ತಳ್ಳಿರುವ ರಾಜ್ಯದ ಇಂದಿನ ಅಲಿಬಾಬಾ ಮತ್ತು ಅವನ (ನಲವತ್ತು ಮಂದಿ) ಕಳ್ಳರ ತಂಡದಲ್ಲಿ ಎಲ್ಲ ಪಕ್ಷದವರೂ ಇದ್ದಾರೆ. ಕೆಲವರು ಮಾರುವೇಷದಲ್ಲಿ. ಹಾಗಾಗಿ ಇದಕ್ಕಾಗಿ ಯೋಗೀಶ್ವರ ಅಥವಾ ರಮೇಶರಂತಹ ದಲ್ಲಾಳಿಗಳನ್ನು ಮತ್ತು ಅವರ ದಲ್ಲಾಳಿತನದ ಅನೈತಿಕತೆಗಳನ್ನು ದೂಷಿಸಿ ಫಲವಿಲ್ಲ. ರಾಜಕಾರಣವನ್ನು ದಲ್ಲಾಳಿ ವ್ಯಾಪಾರ ಮತ್ತು ಲೂಟಿಯ ವ್ಯವಹಾರವನ್ನಾಗಿ ಮಾಡಿರುವ ಎಲ್ಲರನ್ನೂ-ಜನರನ್ನೂ ಸೇರಿಸಿ-ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ. ಆಗ ಈ ಹೊಲಸಿನ ಸ್ವಚ್ಛೀಕರಣ ಮತದಾರರ ಮನೆಗಳಿಂದಲೇ ಆರಂಭವಾಗುತ್ತದೆ. ಇಂತಹ ಪ್ರಯತ್ನಗಳನ್ನು ಸಂಘಟಿಸುವ ಕೆಲಸ ಕೆಲ ಉತ್ಸಾಹಿ ಯುವ ತಂಡಗಳಿಂದ ಹೊಸ ರಾಜಕೀಯ ಸಂಸ್ಕೃತಿಯನ್ನು ಬಿತ್ತಿಬೆಳೆಯುವ ಪ್ರಯತ್ನಗಳ ಮೂಲಕ ಆರಂಭವಾಗಿದೆ. ಅದಕ್ಕೆ ಜನರ ಸಹಕಾರ ಮತ್ತು ನಿಗಾ ಎರಡೂ ಬೇಕಾಗಿದೆ.

ಇನ್ನು ಮೇಲಿನ ರಂಪಾಟವೆಲ್ಲ ಹಣ ಮತ್ತು ಅಧಿಕಾರದ ಪರಸ್ಪರ ಜೂಟಾಟದ ವ್ಯವಹಾರವಾದರೆ, ಇತ್ತೀಚಿನವರೆಗೆ ರಾಜ್ಯಾದ್ಯಂತ ನಡೆದು ಈಗ 'ಅಧ್ಯಯನ ಸಮಿತಿ ರಚನೆ' ಎಂಬ ಸರ್ವರೋಗಗಳ ತಾತ್ಕಾಲಿಕ ಶಮನಕಾರಿ ಚುಚ್ಚುಮದ್ದಿನ ಪ್ರಯೋಗದಿಂದಾಗಿ ಸ್ಥಗಿತಗೊಂಡಿರುವ ವಿವಿಧ ತೆರನ ಮೀಸಲಾತಿ ಬೇಡಿಕೆಯ ಬೀದಿ ಹೋರಾಟ-ಪ್ರದರ್ಶನಗಳು ರಾಷ್ಟ್ರ ಮತ್ತು ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ರಾಜಕೀಯ ಸಮೀಕರಣಗಳಿಂದಾಗಿ ಈ ವ್ಯವಹಾರದ ಭಾಗೀದಾರಿಕೆಯಲ್ಲಿ ಆಗುತ್ತಿರುವ ಏರುಪೇರುಗಳನ್ನು ಜನ ಜಾತಿ ಸಮೂಹಗಳಾಗಿ ತಮ್ಮ ಪರವಾಗಿ ನಿರ್ವಹಿಸಿಕೊಳ್ಳಲು ನಡೆಸಿರುವ ಪ್ರಯತ್ನಗಳೇ ಆಗಿವೆ. ಏಕೆಂದರ ಇಂದು ಜಾತಿ ಎಂಬುದು ಕೇವಲ ಕಾಯಕ ಅಥವಾ ಸಾಂಸ್ಕತಿಕ ವಿಂಗಡಣೆಯ ಗುಂಪುಗಳಾಗಿ ಉಳಿದಿಲ್ಲ. ವಿಶೇಷವಾಗಿ, ಸಾಮಾಜಿಕ ನ್ಯಾಯ ಎಂಬ ಸಾಮಾಜಿಕ-ರಾಜಕೀಯ ಪರಿಕಲ್ಪನೆ ಬಲಗೊಂಡು ಅದು ಒಂದು ರಾಜಕೀಯ ಚಳುವಳಿಯಾಗಿ ಚಾಲೂ ಆದ ನಂತರ ನಮ್ಮ ಜಾತಿ ವ್ಯವಸ್ಥೆ ಎಂಬುದು ನಮ್ಮ ರಾಜಕೀಯ ವ್ಯವಸ್ಥೆಯ ಒಂದು ವಿನ್ಯಾಸವೇ ಆಗಿ ಹೋಯಿತು. ಜಾತಿಗಳು ರಾಜಕೀಯ ಅಧಿಕಾರದ ಕೇಂದ್ರಗಳಾಗಿ ಪರಿವರ್ತಿತವಾದವು ಇದರಿಂದಾಗಿ ಜಾತಿ ವ್ಯವಸ್ಥೆಯಲ್ಲಿನ ಶ್ರೇಣೀಕರಣ ಬದಲಾಗುತ್ತಾ ಹೊಸ ಶ್ರೇಣೀಕರಣ ಆರಂಭವಾಗಿ ಹಳೆಯ ಶ್ರೇಣೀಕರಣದ ಫಲಾನುಭವಿಗಳಲ್ಲಿ ಹೊಸ ಆತಂಕಗಳೂ ಹೊಸ ಶ್ರೇಣೀಕರಣದ ಫಲನಾಭವಿಗಳಲ್ಲಿ ಹೊಸ ಆಸೆಗಳು ಸೃಷ್ಟಿಯಾಗಿ ರಾಜ್ಯ ಒಂದು ರೀತಿಯ ಜಾತಿ ರಣರಂಗವಾಗಲು ಕಾರಣವಾಗಿದೆ.

ಈ ರಣರಗದಲ್ಲಿ ಗೆಲ್ಲುವ ಗುರಿ ಜಾತಿ ಮೀಸಲಾತಿ ಎಂಬುದಾಗಿದೆ, ಇಂದಿನ ಆರ್ಥಿಕ ರಾಜಕೀಯ ಪರಿಸ್ಥಿತಿಯಲ್ಲಿ ಈ ಗುರಿ ಸಾಧಿಸಿ ಲೌಕಿಕವಾದ ಹೆಚ್ಚಿನದೇನನ್ನೂ ಪಡೆಯುವ ಅವಕಾಶವಿಲ್ಲವಾದರೂ ಈ ರಣರಂಗದ ಹಿಂದಿನ ಬಿಗುವು ಹೆಚ್ಚು ಮಾನಸಿಕವಾದದ್ದಾಗಿದೆ,. ಇದಕ್ಕೆ ಕಾರಣ ಜಾತಿ ಮೀಸಲಾತಿಯನ್ನು ಎಲ್ಲರ ಸಹಾನುಭೂತಿ ಇರುವ ನ್ಯಾಯ ವಿತರಣೆಯ ರೂಪದಲ್ಲಿ ನಿರ್ವಹಿಸದೆ ರಾಜಕೀಯ ಉದ್ದೇಶಗಳಿಗಾಗಿ ಜಾತಿಗಳನ್ನು ಪರಸ್ಪರ ಎತ್ತಿಕಟ್ಟುವ ರೀತಿಯಲ್ಲಿ ಮಂಡಿಸಿ ಜಾರಿಗೊಳಿಸಿದ್ದೇ ಆಗಿದೆ. ಜಾತಿ ಎನ್ನುವುದನ್ನು ಒಂದು ವಿಶಿಷ್ಟ ಅಹಂಕಾರವನ್ನಾಗಿ ಪರಿವರ್ತಿಸಿದ ದುಷ್ಟ ರಾಜಕಾರಣ ಇದು. ಇದು ಹುಲಿ ಸವಾರಿಯಂತೆ. ಕೂರಲೂ ಆಗದು; ಇಳಿಯಲೂ ಆಗದರ.

ಇದಕ್ಕೆ ಪರಿಹಾರ ಖಂಡಿತ ಜಾತಿ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವುದೂ ಅಲ್ಲ ಅಥವಾ ಇತರ ಕೆಲವರು ಹೇಳುವಂತೆ ಜಾತಿ ಸಂಖ್ಯಾಧಾರಿತ ಮೀಸಲಾತಿಯೂ ಅಲ್ಲ. ಮೊದಲನೆಯ ಆಯ್ಕೆ ಹುಲಿ ಸವಾರಿಯ ಅವಧಿ ಮತ್ತು ಕಷ್ಟವನ್ನು ಹೆಚ್ಚಿಸುತ್ತದೆಯಾದರೆ, ಎರಡನೆಯ ಆಯ್ಕೆ ಹುಲಿಯನ್ನು ನರಭಕ್ಷಕನನ್ನಾಗಿ ಮಾಡಿ ಬೇಟೆಗೆ ಬಿಟ್ಟ ಹಾಗೆ. ಏಕೆಂದರೆ ನಮ್ಮ ಜಾತಿ ವ್ಯವಸ್ಥೆ ಈಗ ಹೆಚ್ಚು ಚಲನಶೀಲವಾಗಿ ಸ್ಪರ್ಧೆ ಬಿರುಸಾಗಿದ್ದು, ಇಂತಹ ಪರಿಸ್ಥಿತಿಯಲ್ಲಿ ಒಟ್ಟು ಸಮಾಜದ ಹಿತ ಕಾಯುವ ದಾತರೇ ಇಲ್ಲವಾದರೆ ದುರ್ಬಲರ-ಲೆಕ್ಕಕ್ಕೇ ಸಿಗದ ಜಾತಿ ಜನರ ಪಾಡೇನಾಗಬೇಕು? ಸಮಾಜವೆನ್ನುವುದು ಜಾತಿ ಬಲಿಷ್ಠರ ಆಡೊಂಬಲವಾದೀತು.

ಹಾಗಾಯೇ ಹಿಂದೊಮ್ಮೆ ನಾನು ಹೇಳಿದ್ದು: 'ಸಾಮಾಜಿಕ ನ್ಯಾಯ' ಎಂಬುದು ಒಟ್ಟು ಸಮಾಜಕ್ಕೆ ಸಂದ ನ್ಯಾಯವೇ ಆಗಿರಬೇಕೇ ಹೊರತು ಯಾವುದೇ ಜಾತಿಗೆ ಸಂದ ನ್ಯಾಯದಂತಿರಬಾರದು. ಇದು ಸಾಧ್ಯವಾಗಲು ನಮ್ಮ ಜಾತಿ ಸಂಕಥನದ ಲಂಗರುಗಳನ್ನು ಬದಲಾಯಿಸಿಕೊಳ್ಳಬೇಕಿದೆ. ಸಾಮಾಜಿಕ ನ್ಯಾಯ ಚಳುವಳಿಯ ಗುರಿ ಅದೆಷ್ಟೇ ಸಂಕಷ್ಟದ ಮತ್ತು ದೂರದ ಗುರಿಯಾದರೂ ಅದು ಜಾತಿರಹಿತ ಸಮಾಜದ ಗುರಿಯೇ ಆಗಬೇಕು, ಈ ಹಿಂದೆ ಈ ಗುರಿಯತ್ತ ನಡೆದ ಇತಿಹಾಸದ ಹೆಜ್ಜೆಗುರುತುಗಳು ಇನ್ನೂ ಹಸಿಯಾಗಿವೆ. ಆದರೆ ದಾರಿ ಮಧ್ಯದಲ್ಲಿ ನಾವು ರಾಜಕಾರಣದ ದುಷ್ಟ ವಾಸ್ತವಗಳಿಗೆ ಬಲಿಯಾಗಿ ಆದರ್ಶ ಮರೆತು ದಾರಿ ತಪ್ಪಿದೆವು. ಇದರ ಅನಾಹುತಗಳನ್ನು ಕಣ್ಣಾರೆ ಕಾಣುತ್ತಿರುವೆವು. ಹಾಗಾಗಿ ದಾರಿ ತಪ್ಪಿದ ನಾವೇ ಹೊಸ ಪಯಣವನ್ನು ಆರಂಭಿಸಬೇಕಿದೆ. ಇದು ಬಸವಣ್ಣ, ಕುವೆಂಪು, ಶಿವರಾಮ ಕಾರಂತರ ಕರ್ನಾಟಕ ಎಂಬುದು ಸದಾ ನೆನಪಿರಲಿ.

-ಸಂಪಾದಕ

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಪ್ರತಿ ತಿಂಗಳ ಮೊದಲ ವಾರ ನಾನು 'ಹೊಸ ಮನುಷ್ಯ' ಪತ್ರಿಕೆಗಾಗಿ ಕಾತರದಿಂದ ಕಾಯುತ್ತಿರುತ್ತೇನೆ. ಕಾರಣ, ಪತ್ರಿಕೆಯ ಅತ್ಯಂತ ಪರಿಣಾಮಕಾರಿ ಸಂಪಾದಕೀಯ. ಇವೊತ್ತಿನ ರಾಷ್ಟ್ರ ಮತ್ತು ಸಮಾಜದ ವಿಷಯದಲ್ಲಿ ನಮ್ಮ ಚಿಂತನೆಗೆ ಮಾರ್ಗದರ್ಶಿಯಂತಿರುವ ಈ ಬರಹ ಈ ಕಾಲದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅತ್ಯಂತ ಮೌಲಿಕವಾದದ್ದು. ಹಾಗಾಗಿಯೇ ನಾನು ನಮ್ಮ ಮನೆಗೆ ಬರುವ ತೇಜಸ್ವಿಯವರ ಎಲ್ಲ ಯುವ ಅಭಿಮಾನಿಗಳಿಗೆ ನಿಮ್ಮ ಪತ್ರಿಕೆಯನ್ನು ಓದಲು ಕೊಟ್ಟು ಪತ್ರಿಕೆಯ ಬಗ್ಗೆ ಅವರ ಗಮನ ಸೆಳೆಯುವ ಪ್ರಯತ್ನವನ್ನೂ ಮಾಡುತ್ತಿರುವೆ.

ಮಾರ್ಚ್ ಸಂಚಿಕೆಯ ಮಹಿಳಾ ವಿಶೇಷ ಪುಟಗಳಲ್ಲಿ ನನಗೆ ಪದ್ಮಾ ಶ್ರೀರಾಂ ಅವರ ಬರಹ ಇಷ್ಟವಾಯಿತು, ಅವರ ಅಭಿಪ್ರಾಯಗಳೊಂದಿಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಕಾಲಕ್ಕೆ ತಕ್ಕಂತೆ ಹೊಸ ಸವಾಲುಗಳನ್ನೆದುರಿಸಲು ಸ್ತ್ರೀ ಯೋಚನಾಪರರಾಗುವಂತೆ ಪುರುಷನೂ ಯೋಚನಾಪರನಾಗಬೇಕೆಂಬುದು ನನ್ನ ಅನಿಸಿಕೆ.

**–ರಾಜೇಶ್ವರಿ ತೇಜಸ್ವಿ,** ಮೂಡಿಗೆರೆ

ಈ ವರ್ಷದ ಮೊದಲ ಮೂರೂ ಸಂಚಿಕೆಗಳು ಹೊಸತದಿಂದ ಕೂಡಿದ ಬರಹಗಳಿಂದಾಗಿ ಅತ್ಯುತ್ತಮವಾಗಿವೆ. ನಿಮ್ಮ ಸಮಕಾಲೀನ, ಪ್ರಚಲಿತ ಅಂಕಣಗಳ ಬರಹಗಳು ಸರಳವೂ, ವೈವಿಧ್ಯಮಯವೂ ಆಗಿದ್ದು ಸಾಮಾನ್ಯ ಓದುಗರಿಗೂ ಆಪ್ತವಾಗುವಂತಿವೆ. ಇನ್ನು ಹೊಸ ಒಳನೋಟಗಳಿಂದ ಕೂಡಿದ ನಿಮ್ಮ ಸಂಪಾಕೀಯ ಬರಹಗಳ ಬಗ್ಗೆ ಹೇಳುವಂತೆಯೇ ಇಲ್ಲ.

ಮಾರ್ಚ್ ಮಹಿಳಾ ಸಂಚಿಕೆಯ ವಿಚಾರ ವೈವಿಧ್ಯ, ಧರ್ಮಪುಟ, 'ನವಿಲುಗರಿ'ಯ ಪದ್ಯಗಳು, ಮಾಸ್ತಿ ಕಥೆಗಳನ್ನು ಕುರಿತ ಲೇಖನ, ನಿಮ್ಮ ಪ್ರವಾಸ ಕಥನ ಎಲ್ಲವೂ ಗುಣಮಟ್ಟದಲ್ಲಿ ಒಂದನ್ನೊಂದು ಮೀರಿಸುವಂತಿವೆ. ಅಭಿನಂದನೆಗಳು

**–ಕೆ.ಟಿ. ಮೋಹನ್,** ಬೆಂಗಳೂರು

ಮಾರ್ಚ್ ಸಂಚಿಕೆ ಪ್ರತಿ ಸಂಚಿಕೆಯಂತೆ ಅಮೂಲ್ಯ, ಉದ್ಬೋದಕ ಬರಹಗಳಿಂದ ಕೂಡಿ ಗಮನ ಸೆಳೆಯುವಂತಿದೆ, ನಿಮ್ಮ ವಿಚಾರ ಪ್ರಚೋದಕ ಸಂಪಾದಕೀಯದಲ್ಲಿ ದಿಶಾ ರವಿ ಮತ್ತು ಕವಿ ವರವರ ರಾವ್ ಅವರಿಗೆ ನ್ಯಾಯಾಲಯ ಜಾಮೀನು ನೀಡಿರುವ ಬಗ್ಗೆ ನೀವು ವ್ಯಕ್ತಪಡಿಸಿರುವ ಸಮಾಧಾನ–ಸಂತೋಷಗಳಲ್ಲಿ ನಾನೂ ಭಾಗಿಯಾಗಿದ್ದೇನೆ. ಇನ್ನು ಮಹಿಳಾ ವಿಶೇಷ ಪುಟಗಳಲ್ಲಿನ ಪ್ರಶ್ನೋತ್ತರಗಳು ಇಂದಿನ ಮಹಿಳೆಯ ಧೀಶಕ್ತಿ ಮತ್ತು ಅನನ್ಯತೆಗಳಿಗೆ ಕುರುಹುಗಳಾಗಿವೆ. ಸಬಿತಾ ಬನ್ನಾಡಿಯವರ ಬರಹ ಮತ್ತು ವಿಜಯಶ್ರೀ ಹಾಲಾಡಿಯವರ ಲಲಿತ ಪ್ರಬಂಧ ಗಮನ ಸೆಳೆಯುವಂತಿವೆ. ಹಾಗೇ 'ನವಿಲುಗರಿ'ಯ ಪದ್ಯಗಳು ಮತ್ತು ಪುಸ್ತಕ ವಿಮರ್ಶೆಗಳು ಕೂಡ,

**–ಕಮಲಾ ಹಂಪನಾ,** ಬೆಂಗಳೂರು

ಮಾರ್ಚ್ ಸಂಚಿಕೆಯ ಸಂಪಾದಕೀಯದಲ್ಲಿ ಇವತ್ತಿನ ಅನ್ಯಾಯದ ರಾಜಕೀಯವನ್ನು ಖಂಡಿಸಿರುವುದು ಸಮಯೋಚಿತವಾಗಿದೆ. ಸರ್ಕಾರ ದಿಶಾ ರವಿ ಮತ್ತು ಗ್ರೇಟಾ ಥನ್‌ಬರ್ಗ್ ಕುರಿತು ತಾಳಿದ ನಿಲುವು ಜಾಗತಿಕವಾಗಿ ಭಾರತವನ್ನು ತಲೆತಗ್ಗಿಸುವಂತೆ ಮಾಡಿತು. ಹೊಸ ಮನುಷ್ಯ ಎಂದರೆ 'ಆಂತರಿಕ ಪ್ರಶಾಂತಿ ಬಾಹ್ಯ ಬಂಧುತ್ವ' ಎನ್ನುತ್ತಾ ಲೋಹಿಯಾರ ಮಿತಿಯುಳ್ಳ ಬದುಕಿನ ಆದರ್ಶದ ಬಗೆಗೆ ಹೇಳಿ ಅವರನ್ನು ನೆನಪಿಸಿಕೊಂಡದ್ದು ಅರ್ಥಪೂರ್ಣವಾಗಿತ್ತು. ಮಹಿಳಾ ವಿಶೇಷಾಂಕದ ನವಿಲುಗರಿಯ ಪದ್ಯಗಳೆಲ್ಲವೂ ಆಪ್ತವಾಗಿವೆ.

**–ಅಪೂರ್ವ ಡಿಸಿಲ್ವ,** ಮೈಸೂರು

ಮಹಿಳಾ ವಿಶೇಷಾಂಕ –ನಾಡಿನ ಹಿರಿಯ ಕಿರಿಯ, ವಿಭಿನ್ನ ವಯೋಮಾನದ ಮತ್ತು ಮನೋಭಾವದ ಲೇಖಕಿಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಗಂಭೀರ ಮತ್ತು ಅರ್ಥಪೂರ್ಣವಾಗಿವೆ.

ನಿಮ್ಮ ಸಂಪಾದಕೀಯ ನೇರವಾಗಿ ಸಮಸ್ಯೆಯ ಆಳಕ್ಕೆ ಇಳಿದು ಹೇಳಲೇಬೇಕಾದ ಅಭಿಪ್ರಾಯವನ್ನು ಬಲತ್ಕಾರದ ಶೈಲಿಯಲ್ಲಿಹೇಳುತ್ತದೆ. ಉತ್ತಮ ಕವಿತೆ ಎಚ್ಚೆಸ್ಸಾರ್ ಅವರ ' ಮಾಸ್ತಿ ಕಥಾಲೋಕದ ಸ್ತ್ರೀದರ್ಶನ', ವಿಜಯಶ್ರೀ ಹಾಲಾಡಿ ಅವರ 'ಜೀವಮಿಡಿತದ ಸದ್ದು' ಪ್ರಬಂಧ ಮತ್ತು ನಿಮ್ಮ ಕಾಳಿ ಕಣಿವೆಯ ಪ್ರವಾಸ ಕಥನ" ಇತ್ಯಾದಿ ಲೇಖನಗಳಿಂದ ಸಂಚಿಕೆ ಅದ್ಭುತವಾಗಿ ಮೂಡಿಬಂದಿದೆ.

**–ಟಿ. ಎಸ್.ದಕ್ಷಿಣಾಮೂರ್ತಿ,** ಬೆಂಗಳೂರು.

೧೯೭೨–೭೩ರಲ್ಲಿ ಕೊಡಸಳ್ಳಿ ಕದ್ರಾ,ಮತ್ತು ಕೆಲವು ಮಟ್ಟಿಗೆ ಕೈಗಾ ಯೋಜನೆಗಳ ಭೂಸ್ವಾಧೀನ ಮತ್ತು ಪುನರ್ವಸತಿ ಕೆಲಸದಲ್ಲಿ ಕಾರ್ಯ ನಿರ್ವಹಿಸುತ್ತ ಕಾಳಿ ಕಣಿವೆ,ಕಾರವಾರ ಮತ್ತು ಘಟ್ಟದ ಮೇಲೆ ಓಡಾಡಿ ಆ ಭೂರಮೆಯನ್ನು ನೋಡಿ ಆನಂದಿಸಿದ್ದು ನಿಮ್ಮ ಲೇಖನ ಓದುತ್ತ ಹೋದಂತೆ ಎಲ್ಲ ನೆನಪು ಮರುಕಳಿಸಿದಂತಾಯ್ತು. ಉ ಕ ಜಿಲ್ಲೆಯಲ್ಲಿ ಇನ್ನೂ ಅಷ್ಟು ಒಳ್ಳೆಯ ಅರಣ್ಯ ಪ್ರದೇಶ ಇದೆ. ಕೊಂಕಣ ರೈಲು ಯೋಜನೆಯಂತಹ ಅರಣ್ಯ ಕಬಳಿಸುವ, ಅಥವಾ ಅದಕ್ಕೆ ಘಾಸಿ ಉಂಟು ಮಾಡುವ ಹುಬ್ಬಳ್ಳಿ–ಕಾರವಾರ ರೈಲ್ವೇ ಯೋಜನೆಯಂತಹ ಯಾವುದೇ ಹಸ್ತಕ್ಷೇಪಗಳು ನಡೆಯದಿದ್ದಲ್ಲಿ ಉ ಕ ಜಿಲ್ಲೆ ಹಸಿರಾಗಿಯೇ ಉಳಿಯಬಹುದು.

**–ವೆಂಕಟೇಶ ಮಾಚಕನೂರ,** ಧಾರವಾಡ

ಮಾರ್ಚ್ ಸಂಚಿಕೆಯಲ್ಲಿ ನೀವು ಗೆಳೆಯರ ಸಂಗಡ ಕಾಳಿ ನದಿಯ ಕಣಿವೆಯಲ್ಲಿ ನಾಲ್ಕು ದಿನ ಕಳೆದುದರ ರಂಜನೀಯ ಬರಹವನ್ನು ಓದುತ್ತಾ ನನ್ನ ನೆನಪುಗಳು ದಶಕಗಳ ಹಿಂದಕ್ಕೆ ಜಾರಿತು.

ಕೈಗಾ ಅಣುಸ್ಥಾವರ ಈ ಕಣಿವೆಯಲ್ಲಿ ನೆಲೆಗೊಳ್ಳಬಾರದೆಂಬ ಕೂಗನ್ನು ನಾವು ಮೊಳಗಿಸುತ್ತಿದ್ದ ಕಾಲವದು. ನಮ್ಮ ಆಕ್ರಂದನ ಅರಣ್ಯ ರೋದನವೇ ಆಯಿತು. ಮೂಕ ಸಹ್ಯಾದ್ರಿಗೆ ಧ್ವನಿ ಕೊಟ್ಟವರು ಎಂದು ಬಣ್ಣಿತರಾಗಿದ್ದ ಡಾ. ಕುಸುಮಾ ಸೊರಬ ಅವರನ್ನು ಒಂದು ಒಳಸಂಚಿನಿಂದ ಬಲಿತೆಗೆದುಕೊಂಡದ್ದು ನೆನಪಿಗೆ ಮರಳಿ ಬಂತು. ೧೯೯೨ರಲ್ಲಿ ಸಂಭವಿಸಿದ ಅಪಘಾತದಲ್ಲಿ ಅವರ ನಿಧನವಾಯಿತು. ಜಿಲ್ಲಾ ಪರಿಸರ ಸಂರಕ್ಷಣಾ ಸಮಿತಿಯ ಅಧ್ಯಕ್ಷರಾಗಿದ್ದ ಆ ಸ್ಥಾನವನ್ನು ವಹಿಸಿ ನಾನು ಐದು ವರ್ಷಗಳ ಕಾಲ ದುಡಿದು ಕಾರಣಾಂತರದಿಂದ ನನ್ನ ಜಿಲ್ಲೆಗೆ ೨೦೦೩ರಲ್ಲಿ ಮರಳಿ ಬಂದೆ..

ನಿಮ್ಮ ಪ್ರವಾಸದಲ್ಲಿ ನೀವು ವಜ್ರಳ್ಳಿಗೂ ಹೋಗಿದ್ದಿರಿ. ಅದೇ ವಜ್ರಳ್ಳಿಯಲ್ಲಿ ನಾವು ಸ್ಥಾವರ ಪೂರ್ವದ ಕೈಗಾ ಪ್ರದೇಶದಲ್ಲಿ ಜನರ ಆರೋಗ್ಯ ಸ್ಥಿತಿಯನ್ನು ತಿಳಿಯಲು ಸುಮಾರು ೧೦೦ ಜನ ಸ್ವಯಂ ಸೇವಕರಿಗೆ ಎರಡು ದಿನಗಳ ತರಬೇತಿ ನೀಡಿದ್ದು ಉಂಟು. ಅಂತೂ ಅಣುಸ್ಥಾವರದ ಮೊದಲ ಘಟಕವು ಪ್ರಾರಂಭವಾಗಿಬಿಟ್ಟಿತು. ಅದನ್ನು ನಿಷೇಧಿಸಲು ಆ ವರ್ಷದ ನವೆಂಬರ್ ೧ ರಾಜ್ಯೋತ್ಸವ ದಿನವನ್ನು ಪರಿಸರವಾದಿಗಳು ಕಪ್ಪು ದಿನವನ್ನಾಗಿ ಆಚರಿಸಿದ್ದು ನೆನಪಿಗೆ ಬಂತು.

ನೀವು ಶಿವಮೊಗ್ಗಕ್ಕೆ ಹಿಂದಿರುಗುವ ಹಾದಿಯಲ್ಲಿ ಮಂಚಿಕೇರಿ ಬಳಿಯ ಹಾಸಣಗಿಯಲ್ಲಿ ವಸಂತ ಭಟ್ಟರ ಆತಿಥ್ಯ ಪಡೆದ ಬಗ್ಗೆ ಬರೆದಿರುವಿರಿ. ಮಂಚಿಕೇರಿ ನಿರಂತರ ಸಾಹಿತ್ಯ ಚಟುವಟಿಕೆಗಳ ಕೇಂದ್ರವಾಗಿದ್ದು ನನ್ನಂತಹ ಸಮಾಜವಾದಿ ಗೆಳೆಯರಿಗೆ ಬಹು ಆತ್ಮೀಯವಾದದ್ದು. ಹಾಸಣಗಿಯಲ್ಲಿ ವಸಂತರ ತಂದೆಯಾದ ಖ್ಯಾತ ಸಂಗೀತಗಾರ ಗಣಪತಿ ಭಟ್ಟರಿಗೆ ಹಿರಿಯರಾದ ಇನ್ನೋರ್ವ ಗಣಪತಿ ಭಟ್ಟರಿದ್ದರು, ಅವರ ಮನೆಯಲ್ಲಿ ಶಿವರಾಮ ಕಾರಂತರು ಹಲವು ಬಾರಿ ತಂಗಿ ಕಾದಂಬರಿಗಳನ್ನು ಬರೆದುದ್ದುಂಟು.

ಗೀತಾ–ವಸಂತ ನನಗೆ ಬಹು ಪ್ರಿಯರಾದ ಲವಲವಿಕೆಯ ತರುಣ ದಂಪತಿಗಳಾಗಿದ್ದು, ಗೀತಾ 'ಹೊಸ ಮನುಷ್ಯ'ದ ಲೇಖಕಿಯಾಗಿರುವುದು ನನಗೆ ಹೆಮ್ಮೆಯ ಸಂಗತಿಯಾಗಿದೆ.

**–ಅಮ್ಮೆಂಬಳ ಆನಂದ,** ಉಡುಪಿ


Statement about Ownership and other particulars about News paper 'Hosa Manushya'

FORM 1V

| | |
|---|---|
| 1. Place of Publication : | Shimoga |
| 2. Printers name : | D.S. Nagabhushana |
| Nationality : | Indian |
| Address : | HIG-5, 'Nudi', Kallalli Extn, Vinoba Nagara Shimoga-577204 |
| 3. Publishers Name: | D.S.Nagabhushana |
| Nationality : | Indian |
| Address : | Same as above |
| 4. Editor's name : | D.S.Nagabhushana |
| Nationality : | Indian |
| Adddress : | Same as above |
| 5. Name of Individuals who own the News paper : | D.S.Nagabhushana, |
| Address : | Same as above |

I, D.S.Nagabhushana hereby declare that the particulars given above are true to the best of my knowledge and belief.

Shimoga
31.3.2021

Sd/-
D.S.Nagabhushana

ಏಪ್ರಿಲ್, ೧೪" ಅಂಬೇಡ್ಕರ್ ಜಯಂತಿ

ವಿಶೇಷ ಲೇಖನ-೧

# ಬಾಬಾಸಾಹೇಬರ ರಾಜಕೀಯ-ಸಾಮಾಜಿಕ ಚಿಂತನೆಗಳು ಒಂದು ಅವಲೋಕನ

-ಜೆ.ಎಸ್. ಸದಾನಂದ



ಇಂದು ಭಾರತಾದ್ಯಂತ ಸಮಕಾಲೀನ ರಾಜಕೀಯ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಅತ್ಯಂತ ಪ್ರಭಾವ ಬೀರುತ್ತಿರುವ ಚಿಂತಕರಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅತ್ಯಂತ ಪ್ರಮುಖರಾಗಿದ್ದಾರೆ. ಆದರೆ ಇಂದಿನ ಬದಲಾದ ರಾಜಕೀಯ, ಸಾಮಾಜಿಕ ಪರಿಸ್ಥಿತಿಯಲ್ಲಿ ಅವರ ಚಿಂತನೆಯ ಅಳವಡಿಕೆಯ ಪರಿಣಾಮಗಳು ಅವರ ಮೂಲ ಉದ್ದೇಶಗಳಿಗೆ ಪೂರಕವಾಗಿವೆಯೆ ಎಂದು ನೋಡುವ ಅಗತ್ಯವೂ ಇಂದು ಇದೆ. ಅಂತಹ ನಮ್ಮ ಒಂದು ವಸ್ತುನಿಷ್ಠ ಪ್ರಯತ್ನವಿದು. ಇದು ಅಂಬೇಡ್ಕರ್‌ರ ವ್ಯಕ್ತಿತ್ವವನ್ನಾಗಲೀ, ಅವರ ಚಿಂತನೆಗಳ ಮೂಲ ಉದ್ದೇಶಗಳನ್ನಾಗಲೀ ಪ್ರಶ್ನಿಸುವ ಪ್ರಯತ್ನವಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಹಾಗಾಗಿ ಇಲ್ಲಿ ಪೂರ್ವಾಗ್ರಹ ಅಥವಾ ಅಂಧಾಭಿಮಾನಗಳಿಗೆ ಜಾಗವಿಲ್ಲ.

ಅಂಬೇಡ್ಕರ್‌ರವರ ಚಿಂತನೆಗಳ ಮೂಲ ಆಶಯವನ್ನು ಹೀಗೆ ಗುರುತಿಸಬಹುದು: ಭಾರತವನ್ನು ಒಂದು ಬಲಿಷ್ಠ ರಾಷ್ಟ್ರವನ್ನಾಗಿ ಮಾಡುವುದು ಮತ್ತು ಹಾಗೆ ಮಾಡಲು ಅತ್ಯಂತ ತುರ್ತಾಗಿ ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಮತ್ತು ಧಾರ್ಮಿಕ ವ್ಯವಸ್ಥೆಗಳಲ್ಲಿ ಅಂತರ್ಗತವಾಗಿರುವ ಶೋಷಣೆ, ಅನ್ಯಾಯ, ಮತ್ತು ದಬ್ಬಾಳಿಕೆಗಳನ್ನು ಕೊನೆಗೊಳಿಸಿ ನ್ಯಾಯ ಮತ್ತು ಸಮಾನತೆಯ ತಳಹದಿಯ ಮೇಲೆ ರಾಷ್ಟ್ರ ನಿರ್ಮಾಣ ಮಾಡುವುದು. ಇದಕ್ಕೆ ಸಂಬಂಧಿಸಿದಂತೆ ಅವರ ಚಿಂತನೆಗೆ ಹಲವು ಎಳೆಗಳಿದ್ದು, ಅವೆಲ್ಲವನ್ನೂ ಇಲ್ಲಿ ಚರ್ಚಿಸುವುದು ಅಸಾಧ್ಯವೇ ಸರಿ. ಹಾಗಾಗಿ, ಈ ಲೇಖನದ ಪರಿಮಿತಿಯಲ್ಲಿ ಪ್ರಸ್ತುತ ಸಂದರ್ಭದಲ್ಲಿ ಬಹಳ ಚರ್ಚೆಗೊಳಪಡುತ್ತಿರುವ ಮೂರು ವಿಷಯಗಳನ್ನು ಮಾತ್ರ ತೆಗೆದುಕೊಳ್ಳಲಾಗಿದೆ.

### ೧. ಪಂಚಾಯತ್ ರಾಜ್ ಬಲವರ್ಧನೆಯ ಕುರಿತು

ಅಂಬೇಡ್ಕರ್‌ರವರ ರಾಜಕೀಯ ಚಿಂತನೆಯು ರಾಷ್ಟ್ರದ ಸಂಯುಕ್ತ ವ್ಯವಸ್ಥೆಯ ಪರವಾಗಿತ್ತಾದರೂ ಭಾರತದ ಸಂದರ್ಭದಲ್ಲಿ ಅವರು ಸಾಂವಿಧಾನಿಕವಾಗಿ ಆಯ್ಕೆ ಮಾಡಿಕೊಂಡಿದ್ದು ಒಂದು ಬಲಿಷ್ಠವಾದ ಕೇಂದ್ರ ಸರಕಾರವನ್ನು. ಪಾಶ್ಚಾತ್ಯ ಮಾದರಿಯ ಏಕಾತ್ಮಕ ರಾಷ್ಟ್ರದ ಪರಿಕಲ್ಪನೆಯಿಂದ ಅವರು ಪ್ರಭಾವಿತರಾದದ್ದು ನಮಗಿಲ್ಲಿ ಕಂಡುಬರುತ್ತದೆ. ಸ್ಥಳೀಯ ಮಟ್ಟದಲ್ಲಿದ್ದ ಜಾತಿ ಅಸಮಾನತೆ ಮತ್ತು ಧಾರ್ಮಿಕ ಶೋಷಣೆಗಳನ್ನು ಬಗ್ಗುಬಡಿಯಲು ಒಂದು ಬಲಿಷ್ಠ ಕೇಂದ್ರ ಸರಕಾರದ ಅಗತ್ಯವಿದೆಯೆಂದು ಅವರು ಭಾವಿಸಿದ್ದರು. ಭಾರತದಲ್ಲಿ ಪರಂಪರಾನುಗತವಾಗಿ ಉಳಿದುಕೊಂಡು ಬಂದಿದ್ದ ಪಂಚಾಯತ್ ವ್ಯವಸ್ಥೆಯ ಬಲವರ್ಧನೆ ಮಾಡಲು ಸಾಂವಿಧಾನಿಕ ಕ್ರಮಕೈಗೊಳ್ಳಲು ಅವರು ಹಿಂಜರಿದಿದ್ದು ಈ ಕಾರಣದಿಂದಲೇ. ಕರಡು ಸಂವಿಧಾನದಲ್ಲಿ ಗ್ರಾಮ ಪಂಚಾಯತಿಗಳನ್ನು ಬಲಿಷ್ಠಗೊಳಿಸಲು ಯಾವುದೇ ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲ ಎನ್ನುವ ಟೀಕೆಗೆ ಅವರು ಉತ್ತರಿಸಿದ್ದು ಹೀಗೆ: "ಭಾರತದ ಚರಿತ್ರೆಯಲ್ಲಿ ಏನೆಲ್ಲ ಅಡೆತಡೆಗಳನ್ನೆದುರಿಸಿಯೂ ಗ್ರಾಮಗಳು ಸ್ವಾಯತ್ತ ಆಡಳಿತ ಘಟಕಗಳಾಗಿ ಉಳಿದುಕೊಂಡು ಬಂದಿವೆ ಎಂದು ಹೇಳಲಾಗುತ್ತದೆ, ಆದರೆ ಅವು ಉಳಿದಿರುವುದಾದರೂ ಯಾವ ಸ್ಥಿತಿಯಲ್ಲಿ ಎನ್ನುವುದೂ ಬಹಳ ಮುಖ್ಯ. ಭಾರತದ ಹೆಗ್ಗಳಿಕೆಯಾಗಿ ಅವು ಉಳಿದಿಲ್ಲ, ಬದಲಿಗೆ ಭಾರತದ ಅವನತಿಗೆ ಅವು ಕಾರಣವಾಗಿವೆ. ಪ್ರಾಂತೀಯತೆ ಮತ್ತು ಕೋಮುವಾದವನ್ನು ಖಂಡಿಸುವವರೂ ಕೂಡ ಗ್ರಾಮಗಳ ಹೆಗ್ಗಳಿಕೆಯ ಬಗ್ಗೆ ಮಾತನಾಡುತ್ತಿರುವುದು ನನಗೆ ಆಶ್ಚರ್ಯವಾಗುತ್ತಿದೆ". ಅಂಬೇಡ್ಕರ್ ಪ್ರಕಾರ ಭಾರತದ ಹಳ್ಳಿಗಳು "...ಸ್ಥಳೀಯ ಕೊಚ್ಚೆಗುಂಡಿಗಳು, ಅಜ್ಞಾನದ ಕೂಪಗಳು, ಸಂಕುಚಿತ ಮನಸ್ಸುಗಳು ಮತ್ತು ಕೋಮುವಾದಿ ನೆಲೆಗಳು". ಆದರೆ. ಅಂಬೇಡ್ಕರ್‌ರವರ ಈ ನಿಲುವಿಗೆ, ದಾಮೋದರ ಸ್ವರೂಪ್ ಸೇಠ್, ಬಾಲಕೃಷ್ಣ ಶರ್ಮ, ಶಿಬ್ಬನ್‌ಲಾಲ್ ಸಕ್ಸೇನ, ಹೆಚ್. ವಿ. ಕಾಮತ್, ಲೋಕನಾಥ್ ಮಿಶ್ರ, ಪಿ.ಎಸ್. ದೇಶ್‌ಮುಖ್, ಅರುಣ್‌ಚಂದ್ರಗುಹಾ, ಟಿ. ಪ್ರಕಾಶಮ್, ಸಂತಾನಮ್ ಮುಂತಾದ ಸಂವಿಧಾನ ರಚನಾ ಸಮಿತಿಯ ಸದಸ್ಯರುಗಳಿಂದ ಭಾರಿ ಪ್ರತಿರೋಧ ಬಂದಿತು. ಬಹಳಷ್ಟು ಸದಸ್ಯರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಳ್ಳಿಗಳು ವಹಿಸಿದ ಮಹತ್ವದ ಪಾತ್ರವನ್ನು ಸಭೆಯ ಗಮನಕ್ಕೆ ತಂದರು. ಮತ್ತೆ ಕೆಲವರು ತಾವು ಕಾಂಗ್ರೆಸ್ ಕಾರ್ಯಕರ್ತರಾಗಿ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲೇ ಕಾರ್ಯನಿರ್ವಹಿಸಿದ್ದು ಭಾರತದ ಗ್ರಾಮಗಳ ಪರಿಸ್ಥಿತಿ ಅಂಬೇಡ್ಕರ್ ಕೊಟ್ಟ ಚಿತ್ರಣಕ್ಕಿಂತ ಅತ್ಯಂತ ಭಿನ್ನವಾಗಿದೆ, ಅವುಗಳು ಕೊಳೆತು ನಾರುತ್ತಿರುವ ಅಜ್ಞಾನದ ಕೂಪಗಳಲ್ಲ. ಬದಲಿಗೆ ಅವು ಭಾರತದ ಚಲನಶೀಲ ಜೀವನಾಡಿಗಳು. ಅವುಗಳಿಂದ ನಾವು ಕಲಿಯಬೇಕಾದ್ದು ಬಹಳಷ್ಟಿದೆ ಎಂದು ವಾದಿಸಿದರು. ಇನ್ನು ಕೆಲವರು ನಮ್ಮ ದೇಶದ ಗ್ರಾಮಗಳಲ್ಲಿ ವಾಸಿಸುತ್ತಿರುವ ಸುಮಾರು ಶೇ. ಎಪ್ಪತ್ತಕ್ಕೂ ಹೆಚ್ಚು ಜನರ ಧ್ವನಿಗೆ ಪ್ರಾತಿನಿಧ್ಯವೇ ಇಲ್ಲದೆ ನಡೆಯುತ್ತಿರುವ ಸಂವಿಧಾನ ರಚನೆಯು ಪ್ರಜಾಪ್ರಭುತ್ವದ ಸತ್ವವನ್ನು ಒಳಗೊಳ್ಳುವುದು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು. ಅಂತಿಮವಾಗಿ, (ಈ ವಿಷಯದಲ್ಲಿ ನೆಹರೂರವರೂ ಸಹ ಅಂಬೇಡ್ಕರ್ ನಿಲುವಿನ ಪರವಾಗಿದ್ದರು) ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಂವಿಧಾನದ ಹಲ್ಲು ಕಿತ್ತ ಭಾಗವೆಂದೇ ಕರೆಯಲಾಗಿರುವ ನಾಲ್ಕನೆ ಶೆಡ್ಯೂಲ್‌ನ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಒಂದನ್ನಾಗಿ ಸೇರಿಸಲಾಯಿತು. ಇದರ ಪರಿಣಾಮವಾಗಿ ಬೆಳೆದು ಬಂದ ಕೇಂದ್ರೀಕೃತ ರಾಜಕೀಯ ಪ್ರಭುತ್ವ ಮಾಡಿರುವ ಅವಾಂತರಗಳನ್ನು ನಾವು ಇಂದಿಗೂ ಕಾಣುತ್ತಿದ್ದೇವೆ.

ಪಂಚಾಯತ್ ರಾಜ್ ವ್ಯವಸ್ಥೆಯನ್ನು ಭಾರತದ ಸಂಯುಕ್ತ ವ್ಯವಸ್ಥೆಯ ಚಲನಶೀಲ ಘಟಕಗಳಾಗಿ ಮಾಡುವ ಮೊದಲ ಪ್ರಯತ್ನವೇ ಸುಮಾರು ನಾಲ್ಕು ದಶಕಗಳಷ್ಟು ಕಾಲ ತೆಗೆದುಕೊಂಡಿತು. ಆದರೆ ಅದು ಇನ್ನೂ ಸಂಪೂರ್ಣ ಯಶಸ್ವಿಯಾಗಿಲ್ಲ. ಸುದೀರ್ಘ ಕಾಲದವರೆಗೆ ಕೇಂದ್ರೀಕೃತ ಆಡಳಿತ ವೈಖರಿಗೆ ಒಗ್ಗಿಕೊಂಡ ಚಿಂತನೆಗಳ ವಿಮರ್ಶೆ ಎಂದರೆ ಚಿಂತಕನ ವ್ಯಕ್ತಿತ್ವದ ವಿಮರ್ಶೆಯಲ್ಲ ಮತ್ತು ಅಂಬೇಡ್ಕರ್‌ರವರ ಮೂಲ ಉದ್ದೇಶವನ್ನು ಪ್ರಶ್ನಿಸುವ ಕೆಲಸವೂ ಇದಲ್ಲ. ಹಾಗಾಗಿ (ಆಳುವ ಮತ್ತು ಆಳಲ್ಪಡುವ) ಜನರನ್ನು ನಿಜವಾದ ವಿಕೇಂದ್ರೀಕರಣ ರಾಜಕೀಯ ವ್ಯವಸ್ಥೆಗೆ ಒಗ್ಗಿಸುವ ಪ್ರಯತ್ನ ಇನ್ನೂ ನಡೆಯುತ್ತಲೇ ಇದೆ. ಯಾವುದೇ ರಾಜಕೀಯ ಸಿದ್ಧಾಂತದ ಹಿನ್ನೆಲೆಯಿಂದ ಅಧಿಕಾರಕ್ಕೆ ಬರುವ ಯಾವುದೇ ಪಕ್ಷವೂ ಅಧಿಕಾರ ವಿಕೇಂದ್ರೀಕರಣಕ್ಕೆ ಮನಸಾರೆ ಪ್ರಯತ್ನಿಸುತ್ತಿಲ್ಲ. ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ ಬಲಿಷ್ಠ ಕೇಂದ್ರ ಸರ್ಕಾರವಿರುವ ವ್ಯವಸ್ಥೆ ಅದಕ್ಕೆ ಆಪ್ಯಾಯಮಾನವಾಗಿರುತ್ತದೆ. ಇಂದಿನ ಸಂದರ್ಭದಲ್ಲಿ ಗ್ರಾಮಗಳ ಕುರಿತು ಅಂಬೇಡ್ಕರ್ ತೆಗೆದುಕೊಂಡ ನಿಲುವನ್ನು ಗಾಂಧಿ ಹಾಗೂ ಲೋಹಿಯಾರವರ ನಿಲುವಿಗೆ ಹೋಲಿಸಿ ನೋಡಿದಾಗ ಯಾರು ವಾಸ್ತವಕ್ಕೆ ಹತ್ತಿರವಿದ್ದವರು ಎನ್ನುವುದು ನಮಗೆ ಸ್ಪಷ್ಟವಾಗುತ್ತದೆ.

### ೨. ಪ್ರಾದೇಶಿಕ ಭಾಷೆಗಳ ಕುರಿತು

ಅಂಬೇಡ್ಕರ್‌ರವರು ಭಾಷೆಯ ಬಗೆಗೆ ತಳೆದ ನಿಲುವು, ಅವರು ಪಾಶ್ಚಾತ್ಯ ಚಿಂತನೆಯ ರಾಷ್ಟ್ರದ ಪರಿಕಲ್ಪನೆಯನ್ನು ಆಧರಿಸಿದ ಕೇಂದ್ರೀಕೃತ ಪ್ರಭುತ್ವದ ಪರವಾಗಿದ್ದರು ಎನ್ನುವುದಕ್ಕೆ ಮತ್ತೊಂದು ಉದಾಹರಣೆಯಾಗಿದೆ. ಅವರ ಪ್ರಕಾರ ಬಹುಭಾಷೆಗಳಿಗಿಂತ ಏಕ ಭಾಷೆಯನ್ನು ಹೊಂದಿದ ರಾಜ್ಯವ್ಯವಸ್ಥೆ ಹೆಚ್ಚು ಸ್ಥಿರವಾಗಿರುತ್ತದೆ ಮತ್ತು ಭಾಷಾವಾರು ಪ್ರಾಂತ್ಯಗಳ ರಚನೆಯು ದೇಶದ ವಿಭಜನೆಗೆ ದಾರಿ ಮಾಡಿಕೊಡುತ್ತದೆ, ಬಹುಭಾಷೆಗೆ ಆಸ್ಪದ ನೀಡಿದರೆ ಭಾರತವು ಮತ್ತೊಂದು ವಿಚ್ಛಿದ್ರ ಯುರೋಪ್ ಆಗುತ್ತದೆ ಎಂದು ಅವರು ಭಾವಿಸಿದ್ದರು. ಭಾಷಾವಾರು ಪ್ರಾಂತ್ಯದ ರಚನೆಗೆ ಅವರ ವಿರೋಧವಿರಲಿಲ್ಲವಾದರೂ ಇದಕ್ಕೆ ಅವರ ಎರಡು ನಿಬಂಧನೆಗಳಿದ್ದವು: ೧. ಕೇಂದ್ರದಲ್ಲಿರುವ ಆಡಳಿತ ಭಾಷೆಯೇ ಎಲ್ಲ ಪ್ರಾಂತ್ಯಗಳ ಆಡಳಿತ ಭಾಷೆಯಾಗಿರಬೇಕು. ೨. ಕೇಂದ್ರದ ಭಾಷೆ ಮತ್ತು ಪ್ರಾಂತ್ಯದ ಭಾಷೆ ಭಿನ್ನವಾಗಿದ್ದಲ್ಲಿ ಪ್ರಾಂತ್ಯದ ಭಾಷೆ ಆಡಳಿತ ಭಾಷೆ ಆಗಕೂಡದು. ಅಂಬೇಡ್ಕರ್ ಪ್ರಕಾರ 'ಒಂದು ಪ್ರಭುತ್ವ ಒಂದು ಭಾಷೆ' ಎನ್ನುವ ನಿಯಮ ಎಲ್ಲೆಲ್ಲಿ ಉಲ್ಲಂಘನೆಯಾಗಿದೆಯೊ ಅಲ್ಲೆಲ್ಲಾ ಪ್ರಭುತ್ವಕ್ಕೆ ಅಪಾಯ ಒದಗಿದೆ. ಭಾರತೀಯರು ಒಂದುಗೂಡಿ ಒಂದು ಸಾಮಾನ್ಯ ಸಂಸ್ಕೃತಿಯನ್ನು ಬೆಳೆಸುವ ಆಶಯ ಹೊಂದಿರುವುದರಿಂದ, ಹಿಂದಿಯನ್ನು ತಮ್ಮ ಭಾಷೆಯನ್ನಾಗಿ ಸ್ವೀಕರಿಸುವುದು ಎಲ್ಲ ಭಾರತೀಯರ ಆದ್ಯ ಕರ್ತವ್ಯ.(ಅಂಬೇಡ್ಕರ್ ಬರಹಗಳು, ಭಾಷಣಗಳು; ೨೦೧೫, ಸಂಪುಟ:೧, ಪುಟ: ೧೧೫, ೧೨೨, ೧೬೫,೧೬೭)

ಭಾಷೆಯ ಮತ್ತು ಪಂಚಾಯತಿಗಳ ರಚನೆ ಮತ್ತು ಸಬಲೀಕರಣಗಳ ಬಗೆಗೆ ಅಂಬೇಡ್ಕರ್ ತಳೆಯುವ ಈ ನಿಲುವು ಮತ್ತು ಅದೇ ಸಮಯದಲ್ಲಿ ಭಾರತವು ಸಂಯುಕ್ತ ವ್ಯವಸ್ಥೆಯಾಗಿರಬೇಕು ಎನ್ನುವ ಅವರ ಪ್ರತಿಪಾದನೆಗಳ ನಡುವಿನ ಅಂತರ್‌ವೈರುಧ್ಯವನ್ನು ಅವರು ಗಮನಿಸಲಿಲ್ಲವೆ? ಅಥವಾ ಅವರು ಪ್ರತಿಪಾದಿಸಿದ ಸಂಯುಕ್ತ ವ್ಯವಸ್ಥೆ ರಾಜಕೀಯ ಅಂತಃಸತ್ವವಿಲ್ಲದ ಆಡಳಿತದ ರಚನೆ ಮಾತ್ರವಾಗಿತ್ತೆ? ಎಂಬುದು ಚರ್ಚಾರ್ಹ ವಿಷಯವೇ ಆಗಿದೆ.

### ೩. ಜಾತಿ ವಿನಾಶದ ಕುರಿತು

ಮೂರನೆಯದಾಗಿ, ಜಾತಿ ವಿನಾಶದ ವಿಷಯದಲ್ಲಿ ಅಂಬೇಡ್ಕರ್‌ರವರು ತೆಗೆದುಕೊಂಡ ನಿಲುವಿನ ಪರಿಣಾಮಗಳನ್ನು ಕುರಿತು ಗಂಭೀರವಾಗಿ ಪರ್ಯಾಲೋಚಿಸಬೇಕಾದ ಅಗತ್ಯವಿದೆ. ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಮಾತನಾಡುವಾಗ ಅವರು ಗ್ರಾಮಗಳನ್ನು ಪ್ರಭುತ್ವದ ಘಟಕಗಳಾಗಿ ಸ್ವೀಕರಿಸುವ ಬದಲು (೫ನೇ ಪುಟಕ್ಕೆ

# ಶಿವಮೊಗ್ಗದಲ್ಲಿ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ದಶಮಾತೋತ್ಸವ ಸಂಭ್ರಮ: ಒಂದು ವರದಿ




**ಲೋ**ಹಿಯಾ ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಸಮಾಜವಾದಿ ಪಕ್ಷ ಅವರಿಗೆ ರಾಜಭವನದ ಕೊಠಡಿಯಲ್ಲಿ ವಸತಿ ವ್ಯವಸ್ಥೆ ಮಾಡಿತ್ತು. ಆ ಕೊಠದಿಯ ವೈಭವವನ್ನು ನೋಡಿ ಹೌಹಾರಿದ ಅವರು ಗೋಪಾಲಗೌಡರನ್ನು ಕರೆದು ಅದರ ಬಾಡಿಗೆ ಎಷ್ಟೆಂದು ವಿಚಾರಿಸಿದರು. ಗೌಡರ ಉತ್ತರ ಕೇಳಿದ ಕೂಡಲೇ ಅವರು ತಮ್ಮ ವಸತಿಯನ್ನು ಅಲ್ಲಿಂದ ಬದಲಿಸಲು ಸೂಚಿಸಿದರು. ಅಂದಿನಿಂದ ಅವರ ಬೆಂಗಳೂರಿಗೆ ಬಂದಾಗಲೆಲ್ಲ ಇರುತ್ತಿದ್ದುದು ಸುಲಭ ದರದ ಬಾಡಿಗೆಯ ಎಂಎಲ್ಎ ಹಾಸ್ಟೆಲ್‌ನಲ್ಲಿಯೇ. ಲೋಹಿಯಾ ಕರ್ನಾಟಕ ಪ್ರವಾಸದ ಸಮಯದಲ್ಲಿ ಎರಡು ಮೂರು ದಿನ ಪ್ರಯಾಣ ಮಾಡುತ್ತಾ ಕೋಣಂದೂರಿಗೆ ಬಂದಾಗ ಸರಿ ರಾತ್ರಿ. ಆದರೂ ಅಲ್ಲಿ ಸೇರಿದ್ದ ಜನರನ್ನು ಉದ್ದೇಶಿಸಿ ಅವರು ನೊಂದು ಆಡಿದ ಮಾತುಗಳಿವು: 'ಪಕ್ಷದ ಗೆಳೆಯರು ನನ್ನ ಸುಖ-ಸೌಕರ್ಯಗಳ ಕಡೆ ಗಮನ ಕೊಡುತ್ತಿದ್ದಾರೆಯೇ ಹೊರತು ನನ್ನ ಕಾರ್ ಚಾಲನನ್ನು ವಿಚಾರಿಸುವವರೇ ಇಲ್ಲ'. ಇನ್ನು ಹೀಗೇ ಒಮ್ಮೆ ಬೆಂಗಳೂರಿನಲ್ಲಿ ಅವರಿಗಾಗಿ ಒಂದು ಔತಣಕೂಟ ಏರ್ಪಡಿಸಲಾಗಿತ್ತು. ಊಟದ ವೈವಿಧ್ಯ ನೋಡಿ ಕುತೂಹಲಿತರಾದ ಲೋಹಿಯಾ ಬಡಿಸುವವನನ್ನು ಈ ಒಂದು ಊಟದ ಬೆಲೆ ಎಷ್ಟೆಂದು ಕೇಳೀದರು. ಆತ ಕೊಟ್ಟ ಉತ್ತರದಿಂದ ಸ್ತಂಭಿತರಾದ ಅವರು ಸಾವರಿಸಿಕೊಂಡು ಅಲ್ಲಿದ್ದ ತಮ್ಮ ಪಕ್ಷದ ಗೆಳೆಯರಿಗೆಲ್ಲ, ' ಇದು ದುಬಾರಿ ಊಟ, ಎನನ್ನೂ ಬಿಡದೆ ಚೆನ್ನಾಗಿ, ಹೊಟ್ಟೆ ತುಂಬಾ ಊಟ ಮಾಡಬೇಕು' ಎಂದು ತಾಕೀತು ಮಾಡಿದರು.

ಇದು ಲೋಹಿಯಾ ಅವರಲ್ಲಿ ತಾವು ಕಂಡ ಸಮಾಜವಾದಿ ವ್ಯಕ್ತಿತ್ವದ ಚಹರೆಗಳು ಎಂದು ಹಿರಿಯ ಸಮಾಜವಾದಿ ಮತ್ತು ಮಾಜಿ ಶಾಸಕ ಕೋಣಂದೂರು ಲಿಂಗಪ್ಪ ಹೇಳಿದರು. ಅವರು ಮಾಚ್ ೨೮ರಂದು ಶಿವಮೊಗ್ಗದ ಪತ್ರಿಕಾ ಭವನದಲ್ಲಿ ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ದಶಮಾನೋತ್ಸವ ಸಮಾರಂಭದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ ಲೋಹಿಯಾ-ಕುವೆಂಪು ಭೇಟಿಯನ್ನು ನೆನಪಿಸಿಕೊಂಡ ಅವರು ಲೋಹಿಯಾ ಅವರ ವ್ಯಕ್ತಿತ್ವದ ಸಾಂಸ್ಕೃತಿಕ ಆಯಾಮವನ್ನು ಪ್ರಸ್ತಾಪಿಸುತ್ತಾ, ಅವರು ರಾಮಾಯಣವನ್ನು ಭಾರತದ ಉತ್ತರ-ದಕ್ಷಿಣಗಳನ್ನು ಜೋಡಿಸಿದ ಮತ್ತು ಮಹಾಭಾರತವನ್ನು ಪೂರ್ವ-ಪಶ್ಚಿಮಗಳನ್ನು(ದ್ವಾರಕೆ-ಮಣಿಪುರ) ಜೋಡಿಸಿದ ಮಹಾಕಾವ್ಯಗಳೆಂದು ನಿರೂಪಿಸಿರುವುದನ್ನು ವಿವರಿಸಿದರು.

ಇದಕ್ಕೆ ಮುನ್ನ ಹಿರಿಯ ಸಮಾಜವಾದಿ ಮತ್ತು ರೈತ ಮುಂಡ ಕಡಿದಾಳು ಶಾಮಣ್ಣನವರು ದೀಪ ಬೆಳಗಿಸಿ ದಶಮಾನೋತ್ಸವ ಸಂಭ್ರಮವನ್ನು ಉದ್ಘಾಟಿಸಿದರು. ಆರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್, ನಾಗಭೂಷಣ ಅವರು, ಸಮಾಜವಾದವನ್ನು ನಿಜವಾಗಿ ಅರ್ಥ ಮಾಡಿಕೊಂಡವರಿಗೆ ಅದಕ್ಕೆ ಸಾವಿಲ್ಲ ಎಂಬುದು ಗೊತ್ತಿರುತ್ತದೆ ಮತ್ತು ಆ ಅರಿವಿನಲ್ಲೇ ಸಮಾಜವಾದದ ಕಾಲ ಮುಗಿಯಿತೆಂಬ ಮಾತುಗಳ ನಡುವೆಯೇ ಸಮಾಜವಾದದ ಪುನರಧ್ಯಯನ, ಪುನರ್‌ಶೋಧಕ್ಕಾಗಿ ಈ ಪ್ರತಿಷ್ಠಾನವನ್ನು ಸ್ಥಾಪಿಸಲಾಯಿತು ಎಂದರು.

ಸಮಾರಂಭದಲ್ಲಿ ಬಿಡುಗಡೆಯಾದ ಡಿ.ಎಸ್. ನಾಗಭೂಣ ಅವರು ಸಂಪಾದಿಸಿರುವ 'ರಸಿಕ ರುದ್ರತಪಸ್ವಿ ಲೋಹಿಯಾ' ಮತ್ತು 'ಸಮಾಜವಾದದ ಸಾಲುದೀಪಗಳು' ಪುಸ್ತಕಗಳನ್ನು ಪರಿಚಯಿಸಿದ ಕವಿ ಮತ್ತು ಸಾಹಿತ್ಯ ಚಿಂತಕಿ ತಾರಿಣಿ ಶುಭದಾಯಿನಿ, ಈ ಎರಡೂ ಪುಸ್ತಕಗಳು ಲೋಹಿಯಾ ಅವರ ವ್ಯಕ್ತಿತ್ವ ಮತ್ತು ಸಮಾಜವಾದಿ ಚಳುವಳಿಯ ಇತಿಹಾಸವನ್ನು ಅರಿಯಲು ಹೇಗೆ ಸಹಾಯವಾಗುತ್ತವೆ ಎಂದು ವಿವರಿಸಿದರು.ನಂತರ 'ದಶಮಾನೋತ್ಸವದ ಹಿನ್ನೋಟ' ಎಂಬ ಕಿರು ಪರಿಚಯ ಪುಸ್ತಿಕೆಯನ್ನು ಬಿಡುಗಡೆ ಮಾಡಿದ ರೈತ ನಾಯಕಿ ಅನಸೂಮ್ಮನವರು ಸಮಾಜವಾದಿ ಚಳುವಳಿಯ ತೌರು ಜಿಲ್ಲೆಯಲ್ಲಿ ಈ ಪ್ರತಿಷ್ಠಾನದ ಮೂಲಕ ಸಮಾಜವಾದಿ ವಿಚಾರಗಳ ಪುನರುಜ್ಜೀವನದ ಕೆಲಸಗಳ ನಡೆಯುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಪ್ರತಿಷ್ಠಾನದ ಕೆಲಸ ಕಾರ್ಯಗಳಿಗೆ ಹಲವು ರೀತಿಯಲ್ಲಿ ನೆರವಾಗಿರುವ ಕಡಿದಾಳ್ ಪ್ರಕಾಶ್, ಎಂ.ಸಿ. ನರೇಂದ್ರ, ಜಿ.ಬಿ. ಶಿವರಾಜು ಮತ್ತು ಮಾಜಿ ಟ್ರಸ್ಟಿ ದಿ. ದೊಗ್ಗಳ್ಳಿ, ಪುಟ್ಟರಾಜು ಅವರ ಪತ್ನಿ ಪ್ರತಿಭಾ ಅವರನ್ನು ಸನ್ಮಾನಿಸಲಾಯಿತು. ಹಾಗೇ ಮಾಜಿ ಟ್ರಸ್ಟೀಗಳಾದ ಬಿ.ಪಿ. ವೀರೇಂದ್ರಕುಮಾರ್, ಎಂ. ರಾಘವೇಂದ್ರ ಮತ್ತು ಬಿ.. ಶಿವಕುಮಾರ್ ಅವರಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸದ್ದ ಹಿರಿಯ ಸಮಾಜವಾದಿ ಮತ್ತು ಬಳ್ಳಾರಿ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣ ಅವರು ತಮ್ಮ ಹಳೆಯ ನೆನಪುಗಳನ್ನು ಸಭಿಕರೊಂದಿಗೆ ಹಂಚಿಕೊಳ್ಳುತ್ತಾ ಲೋಹಿಯಾ ಅವರ ಸಾವು ತಮ್ಮ ಸನಿಹದ ಸಾಮಾನ್ಯರಲ್ಲೂ ಹೇಗೆ ತಲ್ಲಣವನ್ನುಂಟು ಮಾಡಿತೆಂಬುದನ್ನೂ, ಎಪ್ಪತ್ತರ ದಶಕದಲ್ಲಿ ರಾಜ್ಯ ವಿಧಾನಸಭೆಯಲ್ಲಿ ಮೂರೇ ಜನ ಸಮಾಜವಾದಿ ಶಾಸಕರಿದ್ದರೂ ಅವರೇ ಹೇಗೆ ತಮ್ಮ ಪರಿಣಾಮಕಾರಿ  ಮಾತುಗಾರಿಕೆಯ ಮೂಲಕ ಸಭೆಯ ಚರ್ಚೆಯನ್ನು ಪ್ರಭಾವಿಸುತ್ತಿದ್ದರು ಎಂಬುದನ್ನೂ ವಿವರಿಸಿದರು.

ಮಧ್ಯಾಹ್ನದ ಊಟದ ನಂತರ  ಸಮಾಜವಾದಿ ರಾಜಕಾರಣದ ಅವಲೋಕನ ಕುರಿತ 'ಸಮಾಜವಾದಿ ಸಂಗಮ' ಕಾರ್ಯಕ್ರಮದಲ್ಲಿ ಆಶಯ ನುಡಿಗಳನ್ನಾಡಿದ ಮಾಜಿ ಶಾಸಕ ವೈಎಸ್‌ವಿ ದತ್ತ ಅವರು ಇಂದಿನ ವಿಷಮಯ ರಾಜಕಾರಣಕ್ಕೆ ಸಮಾಜವಾದಿ ತತ್ವವೇ ಪರಿಹಾರವೆಂಬುದು ನಿಜವಾದರೂ ಆ ತತ್ವವನ್ನಾದರಿಸಿದ ಹೋರಾಟ ಕಾಣೆಯಾಗಿದ್ದು ರೈತ, ದಲಿತ ಮತ್ತು ಮಹಿಳಾ ಚಳುವಳಿಗಳೊಂದಿಗೆ ಸೇರಿ ಅಂತಹ ಹೋರಾಟ ರೂಪಿಸುವ ತುರ್ತು ಅಗತ್ಯವಿದೆ ಎಂದು ಸಲಹೆ ಮಾಡಿದರು.

'ಸಮಾಜವಾದಿ ರಾಜಕಾರಣದ ಮುಂದಿರುವ ಸವಾಲುಗಳು' ವಿಷಯದ ಬಗ್ಗೆ ಮಾತನಾಡಿದ ಚಿಂತಕ ರಾಜೇಂದ್ರ ಚೆನ್ನಿಯವರು ಸಮಾಜವಾದ ಎನ್ನುವುದು ಮನುಕುಲವನ್ನು ಬಂಡವಾಳಶಾಹಿ ಕೌರ್ಯದಿಂದ ಬಿಡುಗಡೆಗೊಳಿಸಿದ ಒಂದು ಚಾರಿತ್ರಿಕ ವಿದ್ಯಮಾನವಾಗಿದ್ದು, ನವ ಉದಾರವಾದಿ ಆರ್ಥಿಕತೆ  ಸೃಷ್ಟಿರುವ ಇಂದಿನ ರಾಜಕೀಯ ವಾತಾವರಣ ಸಮಾಜವಾದ ಕಾಣೆಯಾಗಿರುವ ಹುಸಿ ಚಿತ್ರವನ್ನು ಬಿಂಬಿಸುತ್ತಿದೆ ಎಂದರು. ಆದರೆ ಇಂದು ಜಗತ್ತಿನಲ್ಲಿ ನವ ಉದಾರವಾದಿ ಆರ್ಥಿಕತೆಯ ಬಲಿಪಶುಗಳಾದ ಕೋಟಿಗಟ್ಟಲೆ ಜನ ವಿವಿಧ ರೂಪಗಳಲ್ಲಿ ಹೋರಾಟ ನಡೆಸಿದ್ದು ಇದು ಸಮಾಜವಾದಿ ಚಳುವಳಿಯ ಮುಂದುವರಿಕೆಯೇ ಆಗಿದೆ ಎಂಬುದನ್ನು ನಾವು ಗುರುತಿಸಬೇಕೆಂದು ಸೂಚಿಸಿದರು. ನಮ್ಮ ದೇಶದ ಇಂದಿನ ರೈತ ಚಳುವಳಿಯೂ ಅಂತಹಹ ಒಂದು ಚಳುವಳಿಯಾಗಿದ್ದು, ಅದರ ಸೋಲು ಗೆಲುವುಗಳು ನಮ್ಮ ನಾಗರೀಕತೆಯ ಅಳಿವು ಉಳಿವುಗಳ ದೃಷ್ಟಿಯಿಂದ ನಿರ್ಣಾಯಕ ಎಂದರು.

ನಂತರ ಮಾತನಾಡಿದ ಬಿಹಾರ ಸಂಯುಕ್ತ ಜನತಾದಳದ ಮಾಜಿ ಉಪಾಧ್ಯಕ್ಷರೂ ಹಿರಿಯ ಸಮಾಜವಾದಿ ನಾಯಕ ಜಾರ್ಜ್ ಫರ್ನಾಂಡೀಸ್ ಅವರ ಆಪ್ತರೂ ಆಗಿದ್ದ ಕನ್ನಡಿಗ ಅನಿಲ್ ಹೆಗ್ಡೆಯವರು, 'ನಾನು ಕಂಡ ಸಮಾಜವಾದಿ ರಾಜಕಾರಣ' ಎಂಬ ವಿಷಯದ ಬಗ್ಗೆ ಮಾತನಾಡುತ್ತಾ, ಲೋಹಿಯಾ ಅವರು ಸಮಾಜವಾದಿ ರಾಜಕಾರಣ ಮೂರು ಮಾರ್ಗದರ್ಶಕ ಸೂತ್ರಗಳೆಂದು ಹೇಳುತ್ತಿದ್ದ ಗುದ್ದಲಿ(ಕ್ಷೇತ್ರ ಕಾರ್ಯ) ಸೆರೆಮನೆ(ಹೋರಾಟ) ಮತ್ತು ಮತಪತ್ರ(ಚುನಾವಣಾ ಸ್ಪರ್ಧೆ) ಇವನ್ನು ತಾವು ಫರ್ನಾಂಡೀಸರ ರಾಜಕೀಯ ಬಾಳಿನುದ್ದಕ್ಕೂ ಕಂಡ ಬಗೆಯನ್ನು ವಿವರವಾಗಿ ಪರಿಚಯಿಸಿದರು,

ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ತಿನ ಮಾಜಿ ಉಪಸಭಾಪತಿ ಬಿ.ಆರ್. ಪಾಟೀಲರು ಮಾತನಾಡಿ ಚಳುವಳಿಗಳ ಮೂಲಕವೇ ಸಮಾಜವಾದಿ ರಾಜಕಾರಣವನ್ನು ಪ್ರವೇಶಿದ ತಮಗೆ ಇಂದು ಸರ್ವಾಧಿಕಾರಿ ಪ್ರಭುತ್ವದ ವಿರುದ್ಧ ಹಲವು ಪಕ್ಷಗಳಲ್ಲಿ ಹರಿದು ಹಂಚಿಹೋಗಿರುವ ಸಮಾಜವಾದಿ ಶಕ್ತಿಗಳು ಒಗ್ಗೂಡಿ ಚಳುವಳಿಯನ್ನು ಸಂಘಟಿಸಲಾಗುತ್ತಿಲ್ಲವೇಕೆ ಎಂಬ ಪ್ರಶ್ನೆ  ಕಾಡುತ್ತಿದೆ ಎಂದರು.

ಕಾರ್ಯಕ್ರಮದ ಸಮಾರೋಪ ಭಾಷಣ ಮಾಡಿದ ಮಾಜಿ ಅಡ್ವೋಕೇಟ್ ಜನರಲ್ ಹಾಗೂ ಹಿರಿಯ ಸಮಾಜವಾದಿ ರವಿವರ್ಮಕುಮಾರ್, ವಿಷಯ ಪರಿಣತರ ಯಾವ ಸಲಹೆಯನ್ನೂ ಪಡೆಯದೆ, ನೋಟು ರದ್ದತಿ, ಜಿಎಸ್‌ಟಿ, ಲಾಕ್‌ಡೌನ್‌ನಂಯಹ ನಿರ್ಣಾಯಕ ನಿರ್ಧಾರಗಳನ್ನು ಕೈಗೊಂಡು ಅನಾಹುತ ಸೃಷ್ಟಿಸಿರುವ ಇಂದಿನ ಪ್ರಧಾನಿ ತಮ್ಮ ಅಧಿಕಾರ ಕೇಂದ್ರೀಕರಣದ ರಾಜಕಾರಣದ ಮೂಲಕ ನಮ್ಮ ಒಕ್ಕೂಟ ವ್ಯವಸ್ಥೆಯನ್ನೇ ಛಿದ್ರಗೊಳಿಸುಇತ್ತಾ ಎಂದು ಹೇಳಿದರು ಇಂತಹ ಅಪಾಯಕಾರಿ ಸಂದರ್ಭದಲ್ಲಿ ನಮಗೆ ಲೋಹಿಯಾ ದಾರಿ ತೋರಿಸಬಲ್ಲರು ಎಂದು ಅವರು ಅಭಿಪ್ರಾಯಪಟ್ಟರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಿ.ಎಸ್. ನಾಗಭೂಷಣ ಅವರು ಜಾಗತೀಕರಣದ ಮುಕ್ತ ಮಾರುಕಟ್ಟೆ ನಮ್ಮ ಎಲ್ಲ ಹೋರಾಟಗಳ ಬೀಜ ಬಿತ್ತುತ್ತಿದ್ದ ಮಧ್ಯಮ ವರ್ಗವನ್ನು ಅಸಭ್ಯ ಪ್ರಮಾಣದ ಸಂಪತ್ತಿನ ಮೂಲಕ ಅರೆಪ್ರಜ್ಞಾವಸ್ಥೆಗೆ ತಳ್ಳಿರುವುದೇ ಇಂದಿನ ಇಂದಿನ ಎಲ್ಲ ರೀತಿಯ ದುರಂತಗಳಿಗೆ ಕಾರಣವಾಗಿದ್ದು, ಈ ಅಸಭ್ಯ ಸಂಪತ್ತಿನ ರೋಗದ ವಿರುದ್ಧದ ರಾಜಕಾರಣವೊಂದೇ ಇಂದಿನ ನಿಜವಾದ ಸಮಾಜವಾದಿ ರಾಜಕಾರಣವಾದಿತು ಎಂದು ಅಭಿಪ್ರಾಯಪಟ್ಟರು.

ಟ್ರಸ್ಟಿಗಳಾದ ಎನ್, ಎಂ. ಕುಲಕರ್ಣಿ, ಎಂ. ರಾಜು, ಹೊನ್ನಾಳಿ ಚಂದ್ರು, ಸವಿತಾನಾಗಭೂಷಣ ಮತ್ತು ಪ್ರತಿಷ್ಠಾನದ ಹಿತೈಷಿಗಳಾದ ರೇಖಾಂಬ, ಮಂಜುಳಾ ರಾಜು ಮತ್ತು ಶೃಂಗೇಶ್ ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ರಾಜ್ಯದ ವಿವಿಧ ಭಾಗಗಳಿಂದ ಬಂದ ಸಮಾಜವಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವರದಿ: **ಅಪೂರ್ವ ಡಿಸಿಲ್ವ)**

# ಹೆಗ್ಗೋಡಿನಲ್ಲಿ 'ಲೋಹಿಯಾ ಸ್ಮರಣೆ' : ವಿಶೇಷ ಉಪನ್ಯಾಸ ಮತ್ತು ನಾಟಕ ಪ್ರದರ್ಶನ



**ಭಾ**ರತದಲ್ಲಿ ಇಂದು ದೇಶಭಕ್ತಿ, ರಾಷ್ಟ್ರವಾದ ಇತ್ಯಾದಿ ರಾಜಕೀಯ ಕಾರ್ಯಸೂಚಿಗಳ ಹೆಸರಿನಲ್ಲಿ ವ್ಯಕ್ತಿಯ ಆರತರಿಕ ಲೋಕದ ಮೇಲೆ ಹಲ್ಲೆ ನಡೆಯುತ್ತಿರುವ ಬಗ್ಗೆ ನಾವೆಲ್ಲ ಎಚ್ಚರದಿಂದ ನಮ್ಮ ಚಿಂತನೆಗಳನ್ನು ಕಾಪಾಡಿಕೊಳ್ಳಬೇಕಾಗಿದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ನೆಹರೂ ಚಿಂತನ ಕೇಂದ್ರದ ನಿರ್ದೇಶಕ ಡಾ, ರಾಜಾರಾಮ್ ತೋಳ್ಪಾಡಿ ಹೇಳಿದರು. ಅವರು ಮಾರ್ಚ್ ೨೩ರಂದು ಲೋಹಿಯಾ ಜನ್ಮದಿನಾಚರಣೆಯ ಅಂಗವಾಗಿ ಪುರಪ್ಪೆಮನೆಯ ಸಮುರಾಯ್ ಥಿಯೇಟರ್‌ನವರು ಹೆಗ್ಗೋಡಿನ ನೀನಾಸಂನ ಸಹಯೋಗದೊಂದಿಗೆ ಹೆಗ್ಗೋಡಿನಲ್ಲಿ ಆಯೋಜಿಸಿದ್ದ 'ಲೋಹಿಯಾ ಸ್ಮರಣೆ' ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು. ಈ ಎಚ್ಚರದಿಂದ ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ಲೋಹಿಯಾ ಅವರ ವಿಚಾರಗಳು ನಮಗೆ ನೆರವಿಗೆ ಬರಬಲ್ಲವು ಎಂದು ಅವರು ಹೇಳೀದರು.

ಲೋಹಿಯಾ ಅವರ ಚಿಂತನೆಗಳು ಅವರದೇ ವಿಶಿಷ್ಟವಾದ ರಾಷ್ಟ್ರವಾದ, ಪ್ರಜಾತಂತ್ರ ಮತ್ತು ಸಪ್ತಕ್ರಾಂತಿಯ ಆಧಾರ ಸ್ತಂಭಗಳ ಮೇಲೆ ನಿಂತಿದ್ದು, ಅವರ ರಾಷ್ಟ್ರವಾದ ಮತೀಯ ರಾಷ್ಟ್ರವಾದವಾಗಿರದೆ ಬಹುತ್ವವನ್ನು ಗೌರವಿಸುವ ರಾಷ್ಟ್ರವಾದವಾಗಿದ್ದು, ಅದು ಸಮಾನತೆಯೊಂದಿಗೇ ವ್ಯಕ್ತಿಯ ನಾಗರಿಕ ಹಕ್ಕುಗಳನ್ನೂ ಭಿನ್ನಾಭಿಪ್ರಾಯದ ಸ್ವಾತಂತ್ರ್ಯವನ್ನೂ ಒಳಗೊಂಡಿದೆ ಎಂದರು.

ಇದಕ್ಕೆ ಮುನ್ನ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಹಿರಿಯ ರಂಗಕರ್ಮಿ ಮತ್ತು ನೀನಾಸಂ ರಂಗಶಿಕ್ಷಣ ಕೇಂದ್ರದ ಪ್ರಾಂಶುಪಾಲ ಎಂ ಗಣೇಶ್ ಅವರು ಮಾತನಾಡಿ ಇಂದಿನ ರಾಷ್ಟ್ರದ ರಾಜಕೀಯ ಪರಿಸ್ಥಿತಿಯಲ್ಲಿ ಗಾಂಧಿ, ಲೋಹಿಯಾ ಮತ್ತು ಅಂಬೇಡ್ಕರ್ ಅವರ ಚಿಂತನೆಗಳು ನಮ್ಮನ್ನು ಕಾಯಬಲ್ಲವು ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಸ್ತಾವಿಕ ಮಾತುಗಳನ್ನಾಡಿದ ಸಮಾಜವಾದಿ ಚಿಂತಕ ಡಿ.ಎಸ್, ನಾಗಭೂಷಣ ಅವರು ಸಮುರಾಯ್ ಥಿಯೇಟರ್ ಸಂಸ್ಥೆಯು ಪ್ರತಿ ವರ್ಷ ಮಾರ್ಚ್ ೨೩ರಂದು ವಿಶೇಷ ಉಪನ್ಯಾಸ ಮತ್ತು ನಾಟಕ ಪ್ರದರ್ಶನವನ್ನೊಳಗೊಂಡ 'ಲೋಹಿಯಾ ಸ್ಮರಣ' ಕಾರ್ಯಕ್ರಮವನ್ನು ರಾಜ್ಯದ ವಿವಿಧೆಡೆ ಆಯೋಜಿಸುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಕಟಿಸಿದರು

ಸಮಾರಂಭದ ಆಧ್ಯಕ್ಷತೆ ವಹಿಸಿದ್ದ ಹಿರಿಯ ರಂಗ ನಿರ್ದೇಶಕ ವೆಂಕಟರಮಣ ಐತಾಳರು ದೇಶದಲ್ಲಿ ಸರ್ವಾಧಿಕಾರ ತಲೆ ಎತ್ತುತ್ತಿರುವ ಈ ದಿನಗಳಲ್ಲಿ ಲೋಹಿಯಾ ಸ್ಮರಣೆ ನಮಗೆ ನೈತಿಕ ಸ್ಥೈರ್ಯವನ್ನು ತುಂಬಬಲ್ಲುದು ಎಂದರು.

ಸಮುರಾಯ್ ಥಿಯೇಟರ್‌ನ ಉಮೇಶ್ ಸಾಲಿಯಾನ ನಾರಾಯಣ ಕಾರ್ಯಕ್ರಮವನ್ನು ,ನ್ರೂಪಿಸಿದರು.ಸಂಜೆ ೭.೦೦ ಗಂಟೆಗೆ ಶಿವರಾಮ ಕಾರಂತ ರಂಗಮಂದಿರದಲ್ಲಿ ಸಮುರಾಯ್ ಥಿಯೇಟರ್‌ನವರು ನಿರ್ಮಿಸಿದ 'ಮಹಾಭಾರತ ಪದ್ಮವ್ಯೂಹ' ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

(ವರದಿ: **ಸವಿತಾ ನಾಗಭೂಷಣ**)

---

**೩ನೇ ಪುಟದಿಂದ)**


ವ್ಯಕ್ತಿಯನ್ನು ಮೂಲ ಘಟಕವಾಗಿ ಸ್ವೀಕರಿಸಬೇಕು ಎಂದು ಹೇಳುತ್ತಾರೆ. ಆದರೆ ಜಾತಿಯ ವಿಷಯಕ್ಕೆ ಬಂದಾಗ ಅಸ್ಪೃಶ್ಯತೆ ಮತ್ತು ಇತರ ಸಾಮಾಜಿಕ, ಸಾಂಸ್ಕೃತಿಕ ಶೋಷಣೆಗೆ ಒಳಗಾದ ಜನರಿಗೆ ಸಂವಿಧಾನಾತ್ಮಕ ಪರಿಹಾರವನ್ನು (ಮೀಸಲಾತಿಯಂತಹ) ಒದಗಿಸುವ ಪ್ರಸ್ತಾಪ ಮಾಡುತ್ತಾ ಜಾತಿಯನ್ನು ಮೂಲ ಘಟಕಗಳನ್ನಾಗಿ ಗುರುತಿಸಬೇಕೆಂದು ಹೇಳುತ್ತಾರೆ. ಇದರಿಂದ ಶೋಷಿತ ಜಾತಿಗಳ ಬಲವರ್ಧನೆಗೆ ಒಂದು ಹಂತದವರಿಗೆ ಅನುಕೂಲವಾಗಿದೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ, ಈ ಚಿಂತನೆಯ ಪ್ರಭಾವ ಕ್ರಮೇಣ ದಟ್ಟವಾಗುತ್ತಾ ಹೋದಂತೆಲ್ಲ ಅದರ ಸಾಮಾಜಿಕ, ರಾಜಕೀಯ ಪರಿಣಾಮಗಳು ಅವರ ಮೂಲ ಆಶಯದ ವಿರುದ್ಧವಾಗಿರುವಂತೆ ಗೋಚರಿಸುತ್ತದೆ.

ಜಾತಿಯ ಆಧಾರದಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಒಟ್ಟಾಗಿ ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳುವುದು ಅನಿವಾರ್ಯ ಎನ್ನುವ ಭಾವನೆ ದಲಿತರಲ್ಲಿ ಬಲವಾಗಿ ಬೆಳೆಯುತೊಡಗಿದೆ. ಜಾತಿ ಅಸ್ಮಿತೆಗಳ ರಾಜಕೀಯ ಎಂತಹ ಅಪಾಯಕಾರಿಯಾದುದು ಎನ್ನುವುದರ ಬಗ್ಗೆ ಸಾಕಷ್ಟು ಜನರಿಗೆ ಅರಿವಿದ್ದಂತೆ ಕಾಣುವುದಿಲ್ಲ. ದಲಿತರು ಜಾತಿ ಆಧಾರಿತ ಸಂಘಟನೆಗಳನ್ನು ಕಟ್ಟಿಕೊಳ್ಳುವುದು ಪ್ರಗತಿಪರವಾದುದೆಂದೂ ಮೇಲ್ಜಾತಿಯವರು ಅಂತಹ ಸಂಘಟನೆಯನ್ನು ಮಾಡಿಕೊಳ್ಳುವುದು ಪ್ರತಿಗಾಮಿತನವಾಗುತ್ತದೆಂದೂ ಬಹಳಷ್ಟು ಅಂಬೇಡ್ಕರ್‌ವಾದಿಗಳು ಮತ್ತು 'ಪ್ರಗತಿಪರ'ರು ಪ್ರತಿಪಾದಿಸಿದರು ಮತ್ತು ಈಗಲೂ ಪ್ರತಿಪಾದಿಸುತ್ತಿದ್ದಾರೆ. ಆದರೆ ಇದು ನಿಜವೆ ಅಥವಾ ಅಲ್ಲವೆ ಎನ್ನುವುದನ್ನು ಸ್ಪಷ್ಟವಾಗಿ ನಮ್ಮ ಮುಂದಿಡುವ ಸಂಶೋಧನೆಗಳು, ನನಗೆ ತಿಳಿದಿರುವಂತೆ, ಸಾಕಷ್ಟು ನಡೆದಿಲ್ಲವೆಂದೇ ಹೇಳಬಹುದು. ಆದರೆ ಕ್ರಮೇಣ ಅಂತಹ ಚಿಂತನೆಗಳಿಂದ ಉಂಟಾದ ಅಪಾಯಕಾರಿ ಎನಿಸುವಂತಹ ಬೆಳವಣಿಗೆಗಳು ಮೇಲ್ನೋಟಕ್ಕೆ ಕಾಣಿಸುತ್ತಿವೆ. ಉದಾಹರಣೆಗೆ, ದಲಿತರ ಜಾತಿ ಸಂಘಟನೆಗಳು ಇತರ ಹಿಂದುಳಿದ ಜಾತಿಗಳ ಸಂಘಟನೆಗಳಿಗೆ, ಮತ್ತು ತಾರ್ಕಿಕವಾಗಿ (ಅದರಲ್ಲೂ ಮುಖ್ಯವಾಗಿ ಸಂಸದೀಯ ಪ್ರಜಾಪ್ರಭುತ್ವದ ಚುನಾವಣೆಯ ತರ್ಕದಲ್ಲಿ) ಇದು ಮೇಲ್ಜಾತಿಯವರ ಜಾತಿ ಸಂಘಟನೆಗಳಿಗೆ ಪ್ರಬಲ ಸಮರ್ಥನೆಯನ್ನು ಒದಗಿಸತೊಡಗಿದೆ. ಮೀಸಲಾತಿಗಾಗಿ ಮತ್ತು ಪರಿಶಿಷ್ಟ ಜಾತಿ, ಬುಡಕಟ್ಟುಗಳ ಪಟ್ಟಿಯಲ್ಲಿ ಸ್ಥಾನ ಪಡೆಯಲು ಪ್ರಭುತ್ವದ ಮೇಲೆ ಒತ್ತಡ ಹೇರುತ್ತಿರುವ ಜಾತಿಗಳ ಸಂಖ್ಯೆ ಎಷ್ಟು ಹೆಚ್ಚಾಗುತ್ತಿದೆಯೆಂದರೆ ಅದರಿಂದಾಗಿ ಮೀಸಲಾತಿಯ ಮೂಲ ಉದ್ದೇಶವೇ ಅರ್ಥಹೀನವಾಗುತ್ತಿದೆ.

ಇಂತಹ ಬದಲಾದ ಸಂದರ್ಭದಲ್ಲಿ ನಮ್ಮ ನಿಲುವೇನಾಗಿರಬೇಕು ಎಂದು ಯೋಚಿಸುವ ಅಗತ್ಯವಿದೆ. ಅಧಿಕಾರ ಲಾಲಸೆಯ ರಾಜಕಾರಣಿಗಳ ಕೈವಾಡದಿಂದ ಇಂತಹ ಬೆಳವಣಿಗೆಗಳಾಗುತ್ತಿವೆ ಎನ್ನುವ ಅಭಿಪ್ರಾಯವೇ ಬಹಳ ಪ್ರಬಲವಾಗಿರುವಂತೆ ಕಾಣಿಸುತ್ತಿದೆ. ಅದು ಹೌದೆ? ಅಥವಾ ಈ ಬೆಳವಣಿಗೆಯು ಪ್ರಗತಿಪರವೆಂದು ಗುರುತಿಸಲಾದ ದಲಿತ ಮತ್ತು ಹಿಂದುಳಿದ ಜಾತಿಗಳ ಸಂಘಟನೆಯ ತಾರ್ಕಿಕ ಮುಂದುವರಿಕೆಯಾಗಿದೆಯೆ? ಎನ್ನುವುದಕ್ಕೆ ನಾವು ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಯಾವ ಶೋಷಿತ ಜಾತಿಗಳ ದೃಷ್ಟಿಯಿಂದ ಜಾತಿಗಳೇ ಇಲ್ಲದಂತಾಗಬೇಕು ಎಂದು ವಾದಿಸಲಾಗಿತ್ತೊ ಅಂತಹ ಜಾತಿಗಳ ಅಸ್ಮಿತೆಗಳನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳದಿದ್ದರೆ ಆ ಜಾತಿಗಳ ರಾಜಕೀಯ ಅಸ್ತಿತ್ವವೇ ಕುಸಿದು ಬೀಳುವ ವಿಚಿತ್ರ ಪರಿಸ್ಥಿತಿಯನ್ನು ನಾವೀಗ ಎದುರಿಸುತ್ತಿದ್ದೇವೆ. ಎಲ್ಲ ಜಾತಿಗಳಲ್ಲೂ ಜಾತಿ ಅಸ್ಮಿತೆಯನ್ನು ಉಳಿಸಿಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳು ಪ್ರಬಲವಾಗುತ್ತಿವೆ. ಇಂದು ನಾವು ದುಷ್ಟ ಮತ್ತು ಭ್ರಷ್ಟ ಎಂದು ಗುರುತಿಸುತ್ತಿರುವ ರಾಜಕೀಯ ಅಧಿಕಾರದ ನಿರ್ಮಾಣಕ್ಕೆ ಇಂತಹ ಶಕ್ತಿಗಳೇ ಆಧಾರ ಸ್ತಂಭವಾಗಿವೆ. ಇದು ದಲಿತರೂ ಸೇರಿದಂತೆ ಎಲ್ಲ ಜಾತಿಗಳ ಜನರ ಆತಂಕದ ವಿಷಯವಾಗಬೇಕು. ಹಾಗಾಗಿ ಇದೆಲ್ಲ ಅಂಬೇಡ್ಕರ್‌ರವರ ಮೂಲ ಚಿಂತನೆಗಳ ಪರಿಣಾಮವೊ ಅಥವಾ ದಲಿತ ರಾಜಕೀಯವು ಅವರು ಹಾಕಿಕೊಟ್ಟ ಚೌಕಟ್ಟನ್ನು ದಾಟಿ ನಡೆಯುತ್ತಿರುವುದರ ಪರಿಣಾಮವೋ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಂತಹ ಶುದ್ಧ ಶಾಸ್ತ್ರೀಯ ಚರ್ಚೆಯ ಅಗತ್ಯವಿದೆ.

ಅಂತಿಮವಾಗಿ, ಅಂಬೇಡ್ಕರ್ ಪರಂಪರೆಗೆ ಇರುವ ವಾರಸುದಾರರು ಯಾರು ಎಂಬುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಸೆಕ್ಯುಲರ್ ಸಂಘಟನೆಗಳಿಂದ ಹಿಡಿದು ಸಂಘಪರಿವಾರದವರೆಗೆ, ಅರುಂಧತಿರಾಯ್‌ರವರಿಂದ ದೇವೇಂದ್ರ ಫಡ್ನವಿಸ್‌ವರೆಗೆ ಎಲ್ಲರೂ ಅಂಬೇಡ್ಕರ್‌ರವರಿಗೆ ಜೈಕಾರ ಹಾಕುತ್ತಿದ್ದಾರೆ. ಎಡಪಂಥೀಯ, ಬಲಪಂಥೀಯರಿಬ್ಬರಿಗೂ ಅಂಬೇಡ್ಕರ್ ಬೇಕು. ಪ್ರತಿಯೊಂದು ರಾಜಕೀಯ ಪಕ್ಷವೂ ಅಂಬೇಡ್ಕರ್ ಚಿಂತನೆಗಳು ತನ್ನ ಪ್ರಣಾಳಿಕೆಗೆ ತಳಹದಿಯಾಗಿದೆ ಎಂದೂ ಘೋಷಿಸುತ್ತದೆ. ಸಿ.ಪಿ.ಐ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಅಂಬೇಡ್ಕರ್‌ರವರನ್ನು ನಮ್ಮ ದೇಶಕ್ಕೆ ಸೆಕ್ಯುಲರ್ ಬುನಾದಿಯನ್ನು ಹಾಕಿಕೊಟ್ಟ ಮಹಾನ್ ವ್ಯಕ್ತಿ ಎಂದು ಕರೆದರೆ, ಹಿಂದುತ್ವವಾದಿಗಳ ಪ್ರಕಾರ ಅವರು ಸಾಂಸ್ಕೃತಿಕ ರಾಷ್ಟ್ರೀಯವಾದಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿರುವವರಾಗಿದ್ದು ಸಹಜವಾಗಿಯೇ ಅವರು ಹಿಂದುತ್ವ ಚಳುವಳಿಯ ಆತ್ಮಬಂಧುವಾಗಿದ್ದಾರೆ.

ಏನಿದರ ಅರ್ಥ? ಅಂಬೇಡ್ಕರ್‌ರವರ ಚಿಂತನೆಯ ಸ್ವರೂಪವೇ ಇದಕ್ಕೆ ಆಸ್ಪದ ಕೊಡುತ್ತಿದೆಯೆ? ಅಥವಾ, ಪರಸ್ಪರ ವಿರೋಧಿ ರಾಜಕೀಯ ಸಿದ್ಧಾಂತಗಳ ನಡುವೆ ವಾಸ್ತವದಲ್ಲಿ ಅಂತಹ ಯಾವುದೇ ವಿರೋಧವಿಲ್ಲವೆಂದೆ? ಎಲ್ಲ ರಾಜಕೀಯ ಸಿದ್ಧಾಂತಿಗಳೂ ಅವಕಾಶವಾದಿಗಳಾಗಿ ಅಂಬೇಡ್ಕರ್‌ರವರನ್ನು ಬಳಸಿಕೊಳ್ಳುತ್ತಿದ್ದಾರೆ ಎನ್ನೋಣವೆ? ಅಥವಾ ಇವೆಲ್ಲವೂ ಒಟ್ಟಿಗೆ ನಿಜವೋ? ಈ ಪ್ರಶ್ನೆಗಳು ಸಮಯಸಾಧಕ ವಾದಗಳಿಗೆ ಹೊರತಾದ ಗಂಭೀರ ಚರ್ಚೆಗೆ ಒಳಗಾಗಲೇಬೇಕಾದ ಕಾಲವೀಗ ಬಂದಿದೆ ಎನಿಸುತ್ತದಲ್ಲವೆ?




**(ಲೇಖಕರು ನಿವೃತ್ತ ರಾಜಕೀಯಶಾಸ್ತ್ರ ಪ್ರಾಧ್ಯಾಪಕರು ಮತ್ತು ಹಿರಿಯ ರಾಜಕೀಯ ಚಿಂತಕರು)**

ವಿಶೇಷ ಲೇಖನ-೨

# ಸಮಾಜವಾದಿ ರಾಜಕಾರಣ: ಒಂದು ಹಿನ್ನೋಟ

-ದಿನೇಶ್ ಅಮೀನ್‌ಮಟ್ಟು

**ಚುನಾವಣಾ ರಾಜಕಾರಣದಲ್ಲಿನ ಸಮಾಜವಾದಿಗಳ ವೈಫಲ್ಯಗಳನ್ನು ಗುಡ್ಡೆಹಾಕಿ ನೋಡಿದರೆ ಸಮಾಜವಾದಿ ರಾಜಕಾರಣ ಘೋರ ದುರಂತದಲ್ಲಿ ಅಂತ್ಯವಾದಂತೆ ಕಾಣುತ್ತದೆ. ವಿಚಿತ್ರವೆಂದರೆ ಸಮಾಜವಾದಿ ರಾಜಕಾರಣ ವಿಫಲಗೊಂಡ ಮಾತ್ರಕ್ಕೆ ಸಮಾಜವಾದ ಸಿದ್ಧಾಂತ ಮತ್ತು ಸಿದ್ಧಾಂತದಿಂದಲೇ ರೂಪುಗೊಂಡ ಕಾರ್ಯಕ್ರಮಗಳೆಲ್ಲ ಅಪ್ರಸ್ತುತವಾಗಿ ಹೋಗಿದೆ ಎಂದು ಷರಾ ಬರೆಯಲಾಗದು. ಇಂದು ನಮ್ಮ ನಡುವೆ ನಾವು ತಲೆ ಎತ್ತಿ ನೋಡುವಂತಹ ಸಮಾಜವಾದಿ ರಾಜಕಾರಣಿಗಳು ಇಲ್ಲದೆ ಇರಬಹುದು, ಆದರೆ ಅದೇ ಸಮಾಜವಾದಿ ಸಿದ್ಧಾಂತದ ಕಾರ್ಯಕ್ರಮಗಳ ಫಲಾನುಭವಿಗಳು ಕೋಟ್ಯಂತರ ಸಂಖ್ಯೆಯಲ್ಲಿದ್ದಾರೆ.**



**ಭಾ**ರತದಲ್ಲಿ ಸಮಾಜವಾದದ ಹೆಜ್ಜೆಗುರುತುಗಳನ್ನು ಎಲ್ಲಿ ಹುಡುಕೋಣ? ರಾಜಕಾರಣದ ಅಂಗಳದಲ್ಲಿಯೇ? ಸಮಾಜದ ಮೈದಾನದಲ್ಲಿಯೇ? ಭಾರತೀಯ ಸಮಾಜವಾದ ಎಷ್ಟು ರಾಜಕೀಯ ಸಿದ್ಧಾಂತವೋ, ಅಷ್ಟೇ ಸಾಮಾಜಿಕ ಸಿದ್ಧಾಂತವೂ ಹೌದು. ಡಾ.ರಾಮಮನೋಹರ ಲೋಹಿಯಾ ಪ್ರಣೀತ ಭಾರತೀಯ ಸಮಾಜವಾದಿ ಸಿದ್ಧಾಂತ, ಪಕ್ಷ ರಾಜಕಾರಣಕ್ಕಷ್ಟೇ ಸೀಮಿತವಾಗದೆ ಒಂದು ಚಳುವಳಿ ರೂಪದಲ್ಲಿ ದೇಶದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ಪ್ರಭಾವಿಸುತ್ತಾ ಬಂದಿರುವುದನ್ನು ಹೇಳದೆ ಇದ್ದರೆ ಸಮಾಜವಾದದ ಪಯಣದ ಪೂರ್ಣನೋಟ ಸಿಗಲಾರದು. ಆದರೆ ಈ ಲೇಖನದ ಉದ್ದೇಶದ ಹರಹು ಅಷ್ಟು ವಿಶಾಲವಾದುದಲ್ಲ.

ಒಂದು ಪಕ್ಷದ ಎಷ್ಟು ಮಂದಿ ಶಾಸಕ-ಸಂಸದರಿದ್ದಾರೆ? ಆ ಪಕ್ಷ ಎಷ್ಟು ಬಾರಿ ಅಧಿಕಾರ ಹಿಡಿದಿದೆ? ಎನ್ನುವುದರ ಮೇಲೆಯೇ ಒಂದು ರಾಜಕೀಯ ಸಿದ್ಧಾಂತದ ಯಶಸ್ಸು-ವೈಫಲ್ಯಗಳನ್ನು ಅಳೆಯುವುದಾದರೆ ಭಾರತೀಯ ಸಮಾಜವಾದಿ ಸಿದ್ಧಾಂತ ಮಾತ್ರವಲ್ಲ, ಮಾರ್ಕ್ಸ್ ವಾದ ಸಿದ್ಧಾಂತ ಕೂಡಾ ವಿಫಲ ಸಿದ್ಧಾಂತಗಳೇ ಆಗಿವೆ.

ಕಾಂಗ್ರೆಸ್ ಕಾರ್ಯಕ್ರಮಗಳಿಗೆ ಸಮಾಜವಾದಿ ಸಿದ್ಧಾಂತದ ಸಾರವನ್ನು ತುಂಬುವ ಪ್ರಯತ್ನವಾಗಿ ಆ ಪಕ್ಷದೊಳಗಿಂದಲೇ ೧೯೩೪ರಲ್ಲಿ ಹುಟ್ಟಿಕೊಂಡ 'ಕಾಂಗ್ರೆಸ್ ಸಮಾಜವಾದಿ ಪಕ್ಷ' ನಂತರದ ದಿನಗಳಲ್ಲಿ 'ಸಮಾಜವಾದಿ ಪಕ್ಷ (೧೯೪೮), ಪ್ರಜಾ ಸಮಾಜವಾದಿ ಪಕ್ಷ (೧೯೫೨), ಸಮಾಜವಾದಿ ಪಕ್ಷ(೧೯೫೫), ಸಂಯುಕ್ತ ಸಮಾಜವಾದಿ ಪಕ್ಷ (೧೯೬೪) ಸಮಾಜವಾದಿ ಪಕ್ಷ (೧೯೭೧) ಹೀಗೆ ರೂಪಾಂತರಗೊಳ್ಳುತ್ತಾ ಕೊನೆಗೆ ೧೯೭೭ರಲ್ಲಿ ಜನತಾ ಪಕ್ಷದೊಂದಿಗೆ ವಿಲೀನವಾಗುವುದರೊಂದಿಗೆ 'ಮೂಲ ಸಮಾಜವಾದಿ' ಪಕ್ಷದ ರಾಜಕೀಯ ಯಾತ್ರೆ ಕೊನೆಗೊಂಡಿತ್ತು. ಕರ್ನಾಟಕದಲ್ಲಿ ಅದು ಪ್ರಜಾಸೋಷಲಿಸ್ಟ್ ಪಕ್ಷ ಕಾಂಗ್ರೆಸ್ ಪಕ್ಷದೊಂದಿಗೆ ವಿಲೀನಗೊಳ್ಳುವುರ ಮೂಲಕ ಯಾತ್ರೆ ಮುಗಿಸಿತ್ತು. ಇದರ ನಂತರ ಅಳಿದುಳಿದವರಲ್ಲಿ ಕೆಲವು ಸಮಾಜವಾದಿಗಳು ಸಮಾಜವಾದಿ ಹೆಸರಲ್ಲಿ, ಇನ್ನು ಕೆಲವರು ಸಮಾಜವಾದಿ ಪಕ್ಷದ ಹೊಸ ಹೆಸರಾದ 'ಜನತಾ' ಹೆಸರಲ್ಲಿ ರಾಜಕೀಯ ಚಟುವಟಿಕೆಯನ್ನು ಮುಂದುವರಿಸಿದರೂ ಅವೆಲ್ಲದ್ದಕ್ಕೂ ಸಮಾಜವಾದ ಸಿದ್ಧಾಂತ ಎನ್ನುವುದು ಆವರಣವಾಗಿತ್ತೇ ಹೊರತು ಹೂರಣಯಾಗಿ ಇರಲಿಲ್ಲ.

ಉತ್ತರಭಾರತದಲ್ಲಿ ಸಮಾಜವಾದಿ ಚಳುವಳಿಯನ್ನು ರಾಜಕೀಯವಾಗಿ ಮಾತ್ರವಲ್ಲ, ಸಾಮಾಜಿಕವಾಗಿಯೂ ಮುನ್ನಡೆಸಬಲ್ಲ ಶಕ್ತಿ ಮತ್ತು ಅವಕಾಶ ಹೊಂದಿದ್ದ ಮುಲಾಯಂಸಿಂಗ್, ಲಾಲುಪ್ರಸಾದ್ ಮತ್ತು ನಿತೀಶ್ ಕುಮಾರ್ ಎಂಬ ತ್ರಿಮೂರ್ತಿಗಳಲ್ಲಿ ಮೊದಲ ಇಬ್ಬರು ಸಮಾಜವಾದಿ ಸಿದ್ಧಾಂತದ ಜಾತ್ಯತೀತತೆಯ ಭಾಗವನ್ನು ಭ್ರಷ್ಟಾಚಾರದ ರಾಜಕೀಯಕ್ಕೆ ಗುರಾಣಿಯಾಗಿ ಬಳಸಿಕೊಂಡರೆ, ನಿತೀಶ್ ಕುಮಾರ್ ತಮ್ಮ ಅವಕಾಶವಾದಿ ರಾಜಕಾರಣವನ್ನು ಮುಚ್ಚಿಕೊಳ್ಳಲು ಲೋಹಿಯಾರ ಕಾಂಗ್ರೆಸ್ ವಿರೋಧದ ಮುಸುಕು ಹಾಕಿಕೊಂಡು ಅಧಿಕಾರದಲ್ಲಿ ಉಳಿದಿದ್ದಾರೆ.

ಇವರೆಲ್ಲರಿಗೆ ಹೋಲಿಸಿದರೆ ಲೋಹಿಯಾ ಸಮಾಜವಾದಿ ರಾಜಕಾರಣವನ್ನು ಮುನ್ನಡೆಸಬಲ್ಲ ಬೌದ್ಧಿಕ ಮತ್ತು ನೈತಿಕ ಗಟ್ಟಿತನ ಹೊಂದಿದ್ದವರು ಜಾರ್ಜ್ ಫರ್ನಾಂಡಿಸ್. ಅವರು ತಮ್ಮ ಗುರುವಿನ ಕಾಂಗ್ರೆಸ್ ವಿರುದ್ಧದ ಕಟುನಿಲುವು, ಮತ್ತು ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಬಗ್ಗೆ 'ವ್ಯಸನ'ದ ರೀತಿಯಲ್ಲಿ ಬೆಳೆಸಿಕೊಂಡ ವಿರೋಧವನ್ನು ಇಂದಿರಾಗಾಂಧಿ ಮತ್ತು ಅವರ ಪಕ್ಷದ ಬಗ್ಗೆಯೂ ಮುಂದುವರಿಸಿದ ಕಾರಣದಿಂದಾಗಿಯೇ ದಾರಿ ತಪ್ಪಿ ಬಿಟ್ಟರು. ಕೊನೆ ದಿನಗಳಲ್ಲಿ 'ಯೋಚಿಸುವುದನ್ನೇ ನಿಲ್ಲಿಸಿ' ಗೋಧ್ರಾ ಹತ್ಯಾಕಾಂಡದ ಆರೋಪಿಗಳನ್ನು ಸಂಸತ್ ನಲ್ಲಿ ನಿಂತು ಸಮರ್ಥಿಸುವ ಹಂತಕ್ಕೆ ಹೋಗಿ ಕೋಮುವಾದಿ ರಾಜಕಾರಣದ ಜೊತೆ ಐಕ್ಯರಾಗಿ ಹೋದರು. ಅಲ್ಲಿಗೆ ಲೋಹಿಯಾ ಸಮಾಜವಾದದ ರಾಜಕಾರಣ ಅಂತ್ಯವಾಗಿದೆ.

ಕರ್ನಾಟಕದಲ್ಲಿ ಕಾಗೋಡು ಸತ್ಯಾಗ್ರಹಕ್ಕೆ ಲೋಹಿಯಾ ಪ್ರವೇಶದೊಂದಿಗೆ ಪ್ರಾರಂಭವಾದ ಸಮಾಜವಾದಿ ಚಳುವಳಿ, ಗೋಪಾಲಗೌಡರ ಸ್ಪರ್ಧೆಯಿಂದಾಗಿ ಚುನಾವಣಾ ರಾಜಕಾರಣದ ತಿರುವು ಪಡೆದರೂ ಅಂತಿಮವಾಗಿ ಅದು ಗೌಡರ ಏಕಾಂಗಿ ಹೋರಾಟವಾಗಿಯೇ ಮುಗಿದುಹೋಯಿತು. ಸಮಾಜವಾದಿ ಚಳುವಳಿ ಮೂಲಕವೇ ರಾಜಕಾರಣ ಪ್ರವೇಶ ಮಾಡಿದ್ದ ಜೆ.ಎಚ್. ಪಟೇಲ್, ಕಾಗೋಡು ತಿಮ್ಮಪ್ಪ, ಎಸ್.ಬಂಗಾರಪ್ಪ, ಕೋಣಂದೂರು ಲಿಂಗಪ್ಪ ಮೊದಲಾದವರೆಲ್ಲ ಅಧಿಕಾರ ರಾಜಕಾರಣದ ಬೆನ್ನತ್ತಿ ಕಾಂಗ್ರೆಸ್ ಪಕ್ಷ ಸೇರಿಕೊಂಡರು. ಹೀಗೆ ಸಮಾಜವಾದಿ ರಾಜಕಾರಣ ಕರ್ನಾಟಕದಲ್ಲಿ ನೆಲೆ ಊರಲಾಗದೆ ಸೋತಿದ್ದಕ್ಕೆ ಉಳಿದೆಲ್ಲ ಕಾರಣಗಳ ಜೊತೆ ದೇವರಾಜ ಅರಸು ಎಂಬ 'ಸಮಾಜವಾದಿ'ಯೂ ಕಾರಣವಾಗಿರಬಹುದು. ಭೂಸುಧಾರಣೆ, ಮೀಸಲಾತಿ, ಋಣಪರಿಹಾರ, ಇನಾಂ ಪದ್ಧತಿಯ ರದ್ಧತಿಯೂ ಸೇರಿದಂತೆ ಸಮಾಜವಾದಿ ಪಕ್ಷದ ಯೋಜನೆಗಳನ್ನೆಲ್ಲ ಕಾಂಗ್ರೆಸ್ ಪಕ್ಷದಿಂದಲೇ ಅರಸು ಜಾರಿಗೊಳಿಸಲು ಹೊರಟಾಗ ಸಮಾಜವಾದಿ ಪಕ್ಷವೇ ಅಪ್ರಸ್ತುತವಾಗಿ ಹೋಯಿತು.

ಈ ರೀತಿ ಚುನಾವಣಾ ರಾಜಕಾರಣದಲ್ಲಿನ ಸಮಾಜವಾದಿಗಳ ವೈಫಲ್ಯಗಳನ್ನು ಗುಡ್ಡೆಹಾಕಿ ನೋಡಿದರೆ ಸಮಾಜವಾದಿ ರಾಜಕಾರಣ ಘೋರ ದುರಂತದಲ್ಲಿ ಅಂತ್ಯವಾದಂತೆ ಕಾಣುತ್ತದೆ. ವಿಚಿತ್ರವೆಂದರೆ ಸಮಾಜವಾದಿ ರಾಜಕಾರಣ ವಿಫಲಗೊಂಡ ಮಾತ್ರಕ್ಕೆ ಸಮಾಜವಾದ ಸಿದ್ಧಾಂತ ಮತ್ತು ಸಿದ್ಧಾಂತದಿಂದಲೇ ರೂಪುಗೊಂಡ ಕಾರ್ಯಕ್ರಮಗಳೆಲ್ಲ ಅಪ್ರಸ್ತುತವಾಗಿ ಹೋಗಿದೆ ಎಂದು ಷರಾ ಬರೆಯಲಾಗದು. ಇಂದು ನಮ್ಮ ನಡುವೆ ನಾವು ತಲೆ ಎತ್ತಿ ನೋಡುವಂತಹ ಸಮಾಜವಾದಿ ರಾಜಕಾರಣಿಗಳು ಇಲ್ಲದೆ ಇರಬಹುದು, ಆದರೆ ಅದೇ ಸಮಾಜವಾದಿ ಸಿದ್ಧಾಂತದ ಕಾರ್ಯಕ್ರಮಗಳ ಫಲಾನುಭವಿಗಳು ಕೋಟ್ಯಂತರ ಸಂಖ್ಯೆಯಲ್ಲಿದ್ದಾರೆ. ಇದರ ಪರೀಕ್ಷೆಗೆ ಕರ್ನಾಟಕಕ್ಕಿಂತ ಉತ್ತಮ ಪ್ರಯೋಗಶಾಲೆ ಬೇರೊಂದು ಸಿಗಲಾರದು.

ಚತುಸ್ತಂಭ ರಾಜ್ಯ ವ್ಯವಸ್ತೆಯ ಮೂಲಕ ಕೇಂದ್ರ, ರಾಜ್ಯ, ಜಿಲ್ಲೆ ಮತ್ತು ಗ್ರಾಮಗಳಲ್ಲಿ ಅಧಿಕಾರ ವಿಕೇಂದ್ರಿಕರಣ, ಆರ್ಥಿಕ ವಿಕೇಂದ್ರೀಕರಣಕ್ಕಾಗಿ ಕೇಂದ್ರೀಕೃತ ದೊಡ್ಡ ಉದ್ಯಮಗಳ ಉತ್ಪಾದನಾ ವ್ಯವಸ್ಥೆಗೆ ಪರ್ಯಾಯವಾಗಿ ಸಣ್ಣ ಘಟಕ ಯಂತ್ರ ವ್ಯವಸ್ಥೆ, ರಾಜಕೀಯ, ಆರ್ಥಿಕ ,ಸಾಂಸ್ಕೃತಿಕ ಮತ್ತು ಲಿಂಗ ಸಮಾನತೆಗಾಗಿ ಸಪ್ತಕ್ರಾಂತಿ. ಇದನ್ನು ಸಾಧಿಸಲು ಚುನಾವಣೆ, ಹೋರಾಟ ಮತ್ತು ರಚನಾತ್ಮಕ ಕಾರ್ಯಕ್ರಮಗಳ ಮಾರ್ಗ-ಇದು ಸ್ಥೂಲವಾಗಿ ಲೋಹಿಯಾ ಪ್ರಣೀತ ಭಾರತೀಯ ಸಮಾಜವಾದದ ಪರಿಕಲ್ಪನೆ. ಈ ಪರಿಕಲ್ಪನೆಯನ್ನೇ ಲೋಹಿಯಾ ಇನ್ನಷ್ಟು ವಿಸ್ತರಿಸಿ, ಕುಟುಂಬಗಳ ವರಮಾನದ ಅಂತರ ಹತ್ತುಪಟ್ಟಿಗಿಂತ ಹೆಚ್ಚಿರಬಾರದು, ದೇಶದ ಪ್ರತಿಯೊಬ್ಬರಿಗೂ ಕನಿಷ್ಠ ಆರು ಎಕರೆ ಜಮೀನು ನೀಡಬೇಕು ಹಾಗೂ ಅವರಿಗೆ ಭೂಕಂದಾಯ ಮಾಫಿ ಮಾಡಬೇಕು. ಆರ್ಥಿಕ ಕ್ಷೇತ್ರವನ್ನು ನಿಧಾನವಾಗಿ ರಾಷ್ಟ್ರೀಕರಣ ಮಾಡಬೇಕು, ಯಾವುದೇ ಉತ್ಪಾದಿತ ಸರಕಿನ ಬೆಲೆ ಉತ್ಪಾದನಾ ವೆಚ್ಚಕ್ಕಿಂತ ಒಂದುವರೆ ಪಟ್ಟಿಗಿಂತ ಹೆಚ್ಚಿರಬಾರದು. ಇಂಗ್ಲೀಷ್ ಭಾಷೆಗಿಂಗತ ಜನಭಾಷೆಗೆ ಮನ್ನಣೆ ನೀಡಬೇಕು, ಶಿಕ್ಷಣ, ಉದ್ಯೋಗ ಮತ್ತು ರಾಜಕಾರಣದಲ್ಲಿ ಆದ್ಯತೆಯ ಮೇರೆಗೆ ಶೂದ್ರ, ದಲಿತ, ಆದಿವಾಸಿ, ಅಲ್ಪಸಂಖ್ಯಾತ ಹಾಗೂ ಮಹಿಳೆಯರಿಗೆ ಸ್ಥಾನ ನೀಡಬೇಕು ಎಂದು ಲೋಹಿಯಾ ಬಂಡವಾಳ ಷಾಹಿ ನಾಗರಿಕತೆಗೆ ಪರ್ಯಾಯವಾದ ನಾಗರೀಕತೆಯ ನೀಲಿನಕ್ಷೆಯನ್ನು ಮುಂದಿಟ್ಟಿದ್ದರು.

ಒಂದೆಡೆ ಮಾರ್ಕ್ಸ್ ವಾದದ ಪ್ರೇರಣೆ, ಇನ್ನೊಂದಡೆ ಗಾಂಧೀಜಿಯ ಆಕರ್ಷಣೆ-ಈ ತೊಳಲಾಟದಲ್ಲಿಯೇ ತಮ್ಮದೇ ಸಮಾಜವಾದದ ದಾರಿಯನ್ನು ಕಂಡುಕೊಂಡ ಲೋಹಿಯಾ ತನ್ನ ಚಿಂತನೆಗೆ ಭಾರತದ ಗಡಿಯನ್ನೂ ಹಾಕಿಕೊಳ್ಳದೆ ವಿಶ್ವಸರ್ಕಾರದ ಕನಸು ಕಂಡವರು. ಇವೆಲ್ಲದರ ನಡುವೆ ಲೋಹಿಯಾ ಅವರಿಗೆ ಕೊನೆವರೆಗೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೊತೆ ಗಂಭೀರ ಸ್ವರೂಪದ ಚರ್ಚೆ ಸಾಧ್ಯವಾಗದೆ ಇರುವುದು ಅಳಿಸಲಾಗದ ಕೊರತೆ. ಆ ಅನುಸಂಧಾನ ನಡೆದುಹೋಗಿದ್ದರೆ ಭಾರತದ ರಾಜಕೀಯ ಇತಿಹಾಸದ ಚಕ್ರ ಬೇರೆ ದಾರಿ ಹಿಡಿಯುತ್ತಿತ್ತೋ ಏನೋ!

ರಾಜಕೀಯ ಸಿದ್ಧಾಂತವನ್ನು ಸಾಮಾಜಿಕ, ಸಾಹಿತ್ಯ, ಸಾಂಸ್ಕೃತಿಕ ನೆಲೆಗಳಿಗೆ ವಿಸ್ತರಿಸಿ ನಿರ್ವಚಿಸುವ ಶಕ್ತಿ ಲೋಹಿಯಾಯವರಿಗೆ ಇದ್ದ ಕಾರಣದಿಂದಾಗಿಯೇ ಇಂದಿಗೂ ರಾಜಕೀಯ ಮಾತ್ರವಲ್ಲ ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟುಗಳು ಎದುರಾದಾಗ ಲೋಹಿಯಾ ಸಮಾಜವಾದಕ್ಕೆ ಮೊರೆಹೋಗುವುದು ಅನಿವಾರ್ಯವಾಗಿದೆ. ನಮ್ಮ ರಾಜಕಾರಣ ಮಾತ್ರವಲ್ಲ, ನಮ್ಮ ,ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು ಕೂಡಾ ಇಂದು ಜಾತಿ, ಧರ್ಮ,ಸಂಸ್ಕೃತಿಯ ಸುತ್ತ ಗಿರಕಿ ಹೊಡೆಯುತ್ತಲೇ ಇದೆ. ಇವುಗಳ ಬಗ್ಗೆ ಒಂದು ಹದದ ಸ್ಪಷ್ಟತೆ ಇಲ್ಲದೆ ಹೋದರೆ ಈ ಗಿರಕಿಯಾಟಕ್ಕೆ ಸಿಕ್ಕಿ ದಾರಿ ತಪ್ಪಬಹುದೇ ಹೊರತು ಪರಿವರ್ತನೆಯ ಹಾದಿಯಲ್ಲಿ ಮುಂದಡಿ ಇಡಲು ಸಾಧ್ಯವಾಗಲಾರದು. ಈ ವಿಷಯಗಳ ಬಗ್ಗೆ ಲೋಹಿಯಾ



ಜಾರ್ಜ್ ಫರ್ನಾಂಡೀಸ್ ಮುಲಾಯಂಸಿಂಗ್ ಲಾಲೂಪ್ರಸಾದ್ ನಿತೀಶ್‌ಕುಮಾರ್

ನೀಡಿದ ಸ್ಪಷ್ಟತೆಯೇ ದೇಶಕ್ಕೆ ಭಾರತೀಯ ಸಮಾಜವಾದ ನೀಡಿದ ಅತ್ಯಮೂಲ್ಯ ಕೊಡುಗೆ.

ಜಾತಿ ಎನ್ನುವುದು ಒಂದು ರೋಗ, ಅದನ್ನು ಬಚ್ಚಿಟ್ಟುಕೊಂಡರೆ ಇಲ್ಲವೆ ಉಡಾಫೆಯಿಂದ ನಿರಾಕರಿಸುತ್ತಾ ಹೋದರೆ ಆ ರೋಗ ಉಲ್ಬಣಗೊಳ್ಳುತ್ತಾ ಹೋಗುತ್ತದೆಯೇ ವಿನ: ನಾಶವಾಗುವುದಿಲ್ಲ. ಜಾತಿಯನ್ನು ಗುರುತಿಸಬೇಕು, ಒಪ್ಪಿಕೊಳ್ಳಬೇಕು,ಅರ್ಥ ಮಾಡಿಕೊಳ್ಳಬೇಕು ಮತ್ತು ಅದರ ನಾಶಕ್ಕೆ ಪ್ರಯತ್ನಮಾಡಬೇಕು. ಲೋಹಿಯಾ ಇದನ್ನೇ ಮಾಡಿದ್ದು. ಮಾನವನ ಇತಿಹಾಸವೆಂದರೆ ವರ್ಗ ಹೋರಾಟಗಳ ಇತಿಹಾಸ ಎಂದ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತವನ್ನೇ ಮುಂದುವರಿಸಿ ಮಾನವ ಇತಿಹಾಸ ಜಾತಿ ಮತ್ತು ವರ್ಗಗಳ ನಡುವಿನ ಆಂತರಿಕ ತುಯ್ದಾಟಗಳ ಮತ್ತು ಅಧಿಕಾರ ಹಾಗೂ ಸಮೃದ್ಧಿಗಳಲ್ಲಿ ಬಾಹ್ಯಪಲ್ಲಟಗಳ ಇತಿಹಾಸ ಎಂದರು ಲೋಹಿಯಾ. ಅವರು ಜಾತಿಯನ್ನೇ ಪ್ರಧಾನವಾಗಿಟ್ಟುಕೊಂಡು ಚರ್ಚೆ ನಡೆಸಿಲ್ಲ ನಿಜ. ಪರಸ್ಪರ ಸಂಬಂಧಿಗಳಾದ ಜಾತಿ, ವರ್ಗ,ಲಿಂಗ ತಾರತಮ್ಯಗಳ ಬಗ್ಗೆ ಮಾತನಾಡುತ್ತಾ ಹೋದರು. ಜಾತಿ ವ್ಯವಸ್ಥೆಯ ಬಗ್ಗೆ ಅವರ ಅನನ್ಯವಾದ ಒಳನೋಟಗಳ ಹೊರತಾಗಿ ಭಾರತೀಯ ಸಮಾಜವನ್ನು ಅರ್ಥಮಾಡಿಕೊಳ್ಳಲು ನಮಗೆ ಬೇರೆ ದಾರಿ ಇದೆಯೇ? ಜಾತಿ ಕುರುಡಿನ ಆತ್ಮವಂಚನೆಯಿಂದ ಭಾರತೀಯ ಸಮಾಜವನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ?

ಜಾತಿ ಮತ್ತು ಧರ್ಮಗಳ ಅಕ್ರಮ ಶಿಶುವಾದ ಕೋಮುವಾದ ಇಂದಿನ ರಾಜಕಾರಣದ ದೊಡ್ಡ ಸವಾಲು. ಕೋಮುವಾದವನ್ನು ಜಾತ್ಯತೀತತೆಯ ಮೂಲಕ ಎದುರಿಸಬೇಕೆನ್ನುತ್ತಾರೆ ನಮ್ಮ ಚಿಂತಕರು. ಆದರೆ ಜಾತ್ಯತೀತತೆಯನ್ನು ಕಟ್ಟುವುದು ಹೇಗೆ? ಧರ್ಮವನ್ನು ನಿರಾಕರಿಸುವ ಮೂಲಕವೇ? ಧರ್ಮವನ್ನು ಹೊರಗಿಟ್ಟು ಜಾತ್ಯತೀತತೆಯನ್ನು ಕಟ್ಟಲು ಸಾಧ್ಯವಿಲ್ಲ ಎಂಬ ವಾಸ್ತವವನ್ನು ಅರಿಯದಷ್ಟು ದಿನ ಕೋಮುವಾದವನ್ನು ಎದುರಿಸಲು ಸಾಧ್ಯವಾಗದು. ಈ ಕೆಲಸದಲ್ಲಿ ನಮ್ಮ ನೆರವಿಗೆ ಬರುವವರು ರಾಮಮನೋಹರ ಲೋಹಿಯಾ ಮಾತ್ರ. ರಾಜಕೀಯ, ಧರ್ಮ ಮತ್ತು ಸಂಸ್ಕೃತಿಯ ಅಂತರ ಸಂಬಂಧವನ್ನು ಲೋಹಿಯಾ ಅವರಷ್ಟು ಸ್ಪಷ್ಟತೆಯಲ್ಲಿ ಹೇಳಿಕೊಟ್ಟವರು ಬೇರೆ ಇಲ್ಲ. ರಾಜಕೀಯ ಎನ್ನುವುದು ಅಲ್ಪಕಾಲೀನ ಧರ್ಮ ಮತ್ತು ಧರ್ಮ ಎನ್ನುವುದು ದೀರ್ಘಕಾಲೀನ ರಾಜಕೀಯ ಎಂದು ಲೋಹಿಯಾ ಹೇಳುತ್ತಿದ್ದರು.

ರಾಜಕೀಯಕ್ಕೂ ಸಂಸ್ಕೃತಿಗೂ ಇರುವ ಸಂಬಂಧವನ್ನು ಬಿಡಿಸಿ ಹೇಳುತ್ತಿದ್ದ ಲೋಹಿಯಾ "ಸಂಸ್ಕೃತಿ ಎನ್ನುವುದು ರಾಜಕೀಯದ ಕಾರ್ಯಸೂಚಿಯನ್ನು ಸಿದ್ಧಪಡಿಸಿದರೆ, ರಾಜಕೀಯವು ಸಂಸ್ಕೃತಿಯ ಮರುಹುಟ್ಟಿಗೆ ಕಾರಣವಾಗುತ್ತದೆ" ಎಂದು ಹೇಳುತ್ತಿದ್ದರು.. ಮಹಿಳೆಯರಿಗೆ ಮಾದರಿಯಾಗಿ ಮುಂದಿಡುತ್ತಿದ್ದ ಸತಿಸಾವಿತ್ರಿಯನ್ನು ಲೋಹಿಯಾ ವಿರೋಧಿಸಲು ಹೋಗಲಿಲ್ಲ. ಆ ಮಾದರಿಗೆ ಪ್ರತಿಯಾಗಿ ಬುದ್ಧಿವಂತೆ, ಧೈರ್ಯವಂತೆ ಮತ್ತು ಸ್ವತಂತ್ರ ಚಿಂತನೆಯ ಮಹಿಳೆಯಾದ ದ್ರೌಪದಿಯನ್ನು ಪ್ರತಿ ಮಾದರಿಯಾಗಿ ಎದುರು ತಂದು ನಿಲ್ಲಿಸಿದ್ದರು. ರಾಮನನ್ನು ವಿರೋಧಿಸಲಿಲ್ಲ, ಅವರ ದೃಷ್ಟಿಯಲ್ಲಿ ರಾಮ ಎನ್ನುವ ವ್ಯಕ್ತಿ ಉತ್ತರ ಮತ್ತು ದಕ್ಷಿಣದ ನಡುವಿನ ಮತ್ತು, ಕೃಷ್ಣ ಪೂರ್ವ ಮತ್ತು ಪಶ್ಚಿಮದ ನಡುವಿನ ಕೊಂಡಿಯಾಗಿದ್ದರುರಾಮಾಯಣವನ್ನು ಅದು ಒಳಗೊಂಡಿರುವ ಎಲ್ಲ ಧಾರ್ಮಿಕ ಸಂಕೇತಗಳೊಂದಿಗೆ ಯಾವುದೇ ರಾಜಕೀಯ ಸಂಬಂಧ ಇಲ್ಲದ ರೀತಿಯಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸಬೇಕೆಂಬುದು ಅವರ ಉದ್ದೇಶವಾಗಿತ್ತು. ಕೇವಲ ತುಳಸಿರಾಮಾಯಣ, ವಾಲ್ಮೀಕಿ ರಾಮಾಯಣ ಮಾತ್ರವಲ್ಲ, ಇಂಡಿಯಾದಿಂದ ಇಂಡೋನೇಷ್ಯಾದ ವರೆಗೆ ನೂರಾರು ರಾಮರನ್ನು ಪರಿಚಯಿಸಬೇಕೆಂಬುದು ಅವರ ಯೋಚನೆಯಾಗಿತ್ತು. ಇದಕ್ಕಾಗಿಯೇ ಅವರು ಉತ್ತರಪ್ರದೇಶದ ಚಿತ್ರಕೂಟದಲ್ಲಿ ರಾಮಾಯಣ ಮೇಳಗಳನ್ನು ಏರ್ಪಡಿಸಿದ್ದರು. ಇದು ಬಹುಷ: ಅವರು ಕನಸಿದ್ದ ಸಾಂಸ್ಕೃತಿಕ ರಾಜಕಾರಣದ ಒಂದು ಕಾರ್ಯಕ್ರಮವಾಗಿತ್ತು. ರಾಮಕಥಾ, ಕೃಷ್ಣಾ ಕಥಾ ಜತೆಯಲ್ಲಿ ಜೀಸಸ್ ಕಥಾ ಹಾಗೂ ಮಹಮ್ಮದ ಕಥಾಗಳನ್ನು ನಡೆಸಬೇಕೆಂಬುದು ಅವರ ಆಸೆ ಆಗಿತ್ತು.

ಇಂತಹ ರಾಮಕಥಾಗಳಲ್ಲಿ ಮಹಿಳೆಯರು ಮತ್ತು ದಲಿತರು ಸೇರಿದಂತೆ ಸಮಾಜದ ಎಲ್ಲವರ್ಗಗಳ ಜನರೂ ಭಾಗವಹಿಸುವಂತೆ ಮಾಡುವುದು ಅವರ ಉದ್ದೇಶವಾಗಿತ್ತು. ರಾಮಾಯಣ ಮತ್ತು ಮಹಾಭಾರತದಲ್ಲಿನ ಶೂದ್ರ ಮತ್ತು ಮಹಿಳಾ ವಿರೋಧಿ ಅಂಶಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂದು ಅವರು ಹೇಳುತ್ತಿದ್ದರು. ಇಂತಹ ಪ್ರಶ್ನೆಗಳು ಎದುರಾದಾಗ ' ಎಲ್ಲ ಮಹಾಕಾವ್ಯಗಳು ಜ್ಞಾನದ ಮುತ್ತುಗಳು ಮತ್ತು ಅಜ್ಞಾನದ ಕಸಗಳನ್ನು ಒಳಗೊಂಡಿರುತ್ತದೆ. ಮುತ್ತನ್ನು ಆಯ್ದುಕೊಳ್ಳಬೇಕೆಂದು ಯಾರೂ ಕಸವನ್ನೂ ಬಾಯಿಗೆ ಹಾಕಿಕೊಳ್ಳುವುದಿಲ್ಲ, ಅದೇ ರೀತಿ ಕಸ ಇದೆಯೆಂದು ಮುತ್ತುಗಳನ್ನು ಯಾರೂ ಬಿಸಾಕುವುದಿಲ್ಲ ಎಂದು ಹೇಳುತ್ತಿದ್ದರು.

ಲೋಹಿಯಾ ಅನುಯಾಯಿಗಳೆಂದು ಹೇಳಿಕೊಳ್ಳುತ್ತಿರುವ ತ್ರಿಮೂರ್ತಿಗಳಾದ ಮುಲಾಯಂ-ಲಾಲು-ನಿತೀಶ್ ಒಟ್ಟು ಸೇರಿ ಕನಿಷ್ಠ ಯುಪಿ-ಬಿಹಾರಗಳಲ್ಲಿಯಾದರೂ ರಾಮಜನ್ಮ ಚಳುವಳಿಯ ರಾಜಕೀಯಕ್ಕೆ ಪ್ರತಿಯಾಗಿ ಸಾಂಸ್ಕೃತಿಕ ಚಳುವಳಿಯ ರಾಜಕಾರಣವನ್ನು ಹುಟ್ಟುಹಾಕಿದ್ದರೆ ಭಾರತದ ರಾಜಕೀಯದ ದಿಕ್ಕು ದೆಸೆಯೇ ಬದಲಾಗಿ ಹೋಗುತ್ತಿತ್ತೋ ಏನೋ? ಆದರೆ ಇವರೆಲ್ಲರೂ ಉಳಿದುದೆಲ್ಲವನ್ನೂ ಬಿಟ್ಟು ಗಟ್ಟಿಯಾಗಿ ಹಿಡಿದುಕೊಂಡದ್ದು ಲೋಹಿಯಾ ಅವರ ಕಾಂಗ್ರೆಸೇತರ ವಾದವನ್ನು ಮಾತ್ರ.

ಲೋಹಿಯಾ ಬದುಕಿದ್ದಾಗ ಮಾತ್ರವಲ್ಲ ಅವರ ಸಾವಿನ ನಂತರವೂ ವ್ಯಾಪಕವಾದ ಚರ್ಚೆಗೆ ಗುರಿಯಾಗಿದ್ದು ಅವರ 'ಕಾಂಗ್ರೆಸೇತರವಾದ'. ಉತ್ತರಪ್ರದೇಶ ಮತ್ತು ಬಿಹಾರಗಳ ಹಿಂದುಳಿದ ಜಾತಿಗಳು ದೇಶದ ಇತರ ರಾಜ್ಯಗಳಂತೆ ಎಂದೂ ಕಾಂಗ್ರೆಸ್ ಪಕ್ಷದ ಮತಬ್ಯಾಂಕ್ ಆಗಿರಲಿಲ್ಲ. ಬ್ರಾಹ್ಮಣ-ಮುಸ್ಲಿಮ್ ಮತ್ತು ದಲಿತ ಮತಬ್ಯಾಂಕ್ ಮೂಲಕವೇ ಕಾಂಗ್ರೆಸ್ ಪಕ್ಷ ರಾಜಕೀಯ ಮಾಡಿಕೊಂಡು ಬಂದಿರುವುದು. ಈ ಮೂರು ಸಮುದಾಯಗಳು ಕ್ರಮವಾಗಿ ಬಿಜೆಪಿ, ಎಸ್ ಪಿ ಮತ್ತು ಬಿಎಸ್ ಪಿ ಕಡೆ ವಲಸೆ ಹೋಗಲು ಪ್ರಾರಂಭಿಸಿದ ನಂತರ ನಿಧಾನವಾಗಿ ನೆಲೆ ಕಳೆದುಕೊಳ್ಳರಾರಂಭಿಸಿದ ಕಾಂಗ್ರೆಸ್ ಸದ್ಯಕ್ಕೆ ಆ ರಾಜ್ಯದಲ್ಲಿ ಚೇತರಿಸಿಕೊಳ್ಳುವ ಲಕ್ಷಣ ಕಾಣುತ್ತಿಲ್ಲ

ಯುಪಿ-ಬಿಹಾರಗಳ ಯಾದವ,ಕುರ್ಮಿ,ಕೊಯಿರಿ ಮೊದಲಾದ ಹಿಂದುಳಿದ ಜಾತಿಗಳು ಪ್ರಾರಂಭದಿಂದಲೂ ಸಮಾಜವಾದಿ ಚಳುವಳಿ ಜೊತೆ ಗುರುತಿಸಿಕೊಂಡಿದ್ದವು. ಇದಕ್ಕೆ ಮುಲಾಯಂಸಿಂಗ್ ಯಾದವ್, ಕರ್ಪೂರಿ ಠಾಕೂರ್,ಲಾಲುಪ್ರಸಾದ್. ನಿತೀಶ್ ಕುಮಾರ್ ಮೊದಲಾದ ಹಿಂದುಳಿದ ಜಾತಿಗಳ ನಾಯಕರು ಲೋಹಿಯಾ ಅನುಯಾಯಿಗಳಾಗಿದ್ದದ್ದು ಕಾರಣ ಇದ್ದರೂ ಇರಬಹುದು. ಇವರೆಲ್ಲರೂ ಒಂದು ಹಂತದ ವರೆಗೆ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಸಮಾನ ಅಂತರದಲ್ಲಿಟ್ಟು ರಾಜಕೀಯ ಮಾಡಿದವರು. ಆದರೆ ಜಾರ್ಜ್ ಫರ್ನಾಂಡಿಸ್ ಮತ್ತು ನಿತೀಶ್ ಕುಮಾರ್ ಈ ಅಂತರವನ್ನು ಮುರಿದು ಬಿಜೆಪಿ ಜೊತೆ ಸೇರಿಕೊಂಡರು. ಈ ಅವಕಾಶವಾದದ ರಾಜಕಾರಣವನ್ನು ಸಮರ್ಥಿಸಿಕೊಳ್ಳಲು ಅವರು ಬಳಸಿಕೊಂಡದ್ದು ಲೋಹಿಯಾ ಅವರ 'ಕಾಂಗ್ರೆಸೇತರ' ನೀತಿಯನ್ನು.


೧೯೯೨ರ ಡಿಸೆಂಬರ್ ನಲ್ಲಿ ನಡೆದ ಬಾಬರಿ ಮಸೀದಿಯ ಧ್ವಂಸ ದೇಶದ ರಾಜಕೀಯ ಮಾತ್ರವಲ್ಲ ಸಾಮಾಜಿಕ,ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಚಿತ್ರವನ್ನು ಬದಲಾಯಿಸಿಬಿಟ್ಟಿತ್ತು. ಈ ಘಟನೆಯ ಪೂರ್ವದಲ್ಲಿ ಒಂದೆಡೆ ಮಂಡಲ್ ವರದಿಯ ಅನುಷ್ಠಾನದ ವಿರುದ್ಧ ಭುಗಿಲೆದ್ದ ಚಳುವಳಿ ಅಂತಿಮವಾಗಿ ರಾಮಜನ್ಮಭೂಮಿ ಚಳುವಳಿಯಲ್ಲಿ ಪರ್ಯಾವಸನಗೊಂಡರೆ, ಇನ್ನೊಂದೆಡೆ ಲೋಕಸಭೆಯಲ್ಲಿ ಒಂದಂಕಿಯಲ್ಲಿದ್ದ ಬಿಜೆಪಿಯ ಸದಸ್ಯರ ಸಂಖ್ಯೆ ಏರುತ್ತಾ ಹೋಗತೊಡಗಿತ್ತು. ಇದರ ಪರಿಣಾಮವಾಗಿ ಕಾಂಗ್ರೆಸ್ ಪಕ್ಷ ತನ್ನ ಏಕಚಕ್ರಾಧಿಪತ್ಯದ ಕೀರ್ತಿಕಿರೀಟವನ್ನು ಕಳೆದುಕೊಳ್ಳತೊಡಗಿತ್ತು.

ಈ ಸರಣಿ ಬೆಳವಣಿಗೆಗಳ ಕಾಲದಲ್ಲಿ ಡಾ.ರಾಮಮನೋಹರ ಲೋಹಿಯಾ ಬದುಕಿದ್ದರೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು? ಯಾವ ರಾಜಕೀಯ ನಿಲುವು ತೆಗೆದುಕೊಳ್ಳುತ್ತಿದ್ದರು? ತಮ್ಮ ನೆಹರೂ ಕಾಲದ 'ಕಾಂಗ್ರೆಸೇತರ' ವಾದಕ್ಕೆ ಅಂಟಿಕೊಂಡು ಕೂತಿರುತ್ತಿದ್ದರೇ? ಇಲ್ಲವೇ ಕಾಲದ ಕರೆಗೆ ಓಗೊಟ್ಟು ಜಾತ್ಯತೀತ ಶಕ್ತಿಗಳ ಬಲವರ್ಧನೆಯ ನೇತೃತ್ವ ವಹಿಸುತ್ತಿದ್ದರೇ? ಲೋಹಿಯಾನನ್ನು ಅರ್ಥಮಾಡಿಕೊಂಡ ಯಾರಿಗೂ ಈ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ ಅಲ್ಲ. ದೇಶ ವಿಭಜನೆಯನ್ನು ವಿರೋಧಿಸಿದ್ದ, ಭಾರತ-ಪಾಕಿಸ್ತಾನದ ಒಕ್ಕೂಟದ ಕನಸು ಕಾಣುತ್ತಿದ್ದ ತನ್ನ ಜೀವನದುದ್ದಕ್ಕೂ ಹಿಂದೂ-ಮುಸ್ಲಿಮರ ಐಕ್ಯತೆಯನ್ನು ಪ್ರತಿಪಾದಿಸುತ್ತಾ ಬಂದವರು ಲೋಹಿಯಾ ಎನ್ನುವುದನ್ನು ಮರೆಯಲಾದೀತೇ?

ಮೊದಲ ತಪ್ಪನ್ನು ಜಯಪ್ರಕಾಶ್ ನಾರಾಯಣ್ ಮಾಡಿದ್ದರು, ತುರ್ತುಪರಿಸ್ಥಿತಿಯ ನಂತರದ ದಿನಗಳಲ್ಲಿ ಕಾಂಗ್ರೆಸ್ ವಿರುದ್ಧ ವಿರೋಧಪಕ್ಷಗಳ ಕೂಟ ಕಟ್ಟುವ ಭರದಲ್ಲಿ ಕೋಮುವಾದಿ ಪಕ್ಷವಾಗಿ ನೇಪಥ್ಯದಲ್ಲಿದ್ದ ಬಿಜೆಪಿಯ ಪೂರ್ವಾಶ್ರಮದ ರೂಪವಾದ ಜನಸಂಘಕ್ಕೆ ಮಾನ್ಯತೆ ನೀಡಿ ಮುಖ್ಯವಾಹಿನಿಗೆ ತಂದುಬಿಟ್ಟರು. ಅವರು ಆರ್ ಎಸ್ ಎಸ್ ಮತ್ತು ಜನಸಂಘದ ನಿಜರೂಪವನ್ನು ಅರಿಯದಷ್ಟು ಅಮಾಯಕರಾಗಿರಲಿಲ್ಲ. ಅವರಿಗೆ ಗಾಂಧೀಜಿಯ ಹತ್ಯೆಯಲ್ಲಿ ಆ ಪಕ್ಷ ಮತ್ತು ಅದರ ಪರಿವಾರ ವಹಿಸಿದ್ದ ಪಾತ್ರದ ನೆನಪು ಕೂಡಾ ಆಗದೆ ಇದ್ದದ್ದು ಐತಿಹಾಸಿಕ ಮರೆವು.

ಬಂಡವಾಳವಾದ, ಸಾಮ್ರಾಜ್ಯವಾದ ಮತ್ತು ಫ್ಯಾಸಿಸಂ-ಒಂದೇ ವಿಚಾರಧಾರೆಯ ಮೂರು ಮುಖಗಳು, ಬಂಡವಾಳವಾದ ಸ್ವದೇಶದಲ್ಲಿ ಫ್ಯಾಸಿಸಮನ್ನು ಮತ್ತು ವಿದೇಶದಲ್ಲಿ ಸಾಮ್ರಾಜ್ಯವಾದವನ್ನು ಹುಟ್ಟುಹಾಕುತ್ತದೆ ಎಂಬ ಲೋಹಿಯಾ ಭವಿಷ್ಯ ನುಡಿ ಭಾರತದ ಇಂದಿನ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತಿದೆ.

ರಾಮಮನೋಹರ ಲೋಹಿಯಾ ಇಂದು ಬದುಕಿದ್ದರೆ ಎಲ್ಲಿರುತ್ತಿದ್ದರು? ಎಂಬ ಬಗ್ಗೆ ಅನುಮಾನವೇ ಬೇಡ. ಕಾಗೋಡಿನಲ್ಲಿ ಗೇಣಿದಾರರ ಹೋರಾಟಕ್ಕೆ ಬೆಂಬಲ ಸೂಚಿಸಲು ಧಾವಿಸಿ ಬಂದಿದ್ದ ಲೋಹಿಯಾ ಇಂದು ಬದುಕಿದ್ದರೆ ಖಂಡಿತವಾಗಿ ದೆಹಲಿಯಲ್ಲಿ ನಡೆಯುತ್ತಿರುವ ರೈತ ಹೋರಾಟದ ಶಿಬಿರದಲ್ಲಿರುತ್ತಿದ್ದರು.




**ಲೇಖಕರು ಕನ್ನಡದ ಹಿರಿಯ ಪತ್ರಕರ್ತರು ಮತ್ತು ಖ್ಯಾತ ಅಂಕಣಕಾರರು)**

ವಿಶೇಷ ಲೇಖನ-೩

# ಸಮಾಜವಾದಿ ರಾಜಕಾರಣದ ಮುಂದಿರುವ ಸವಾಲುಗಳು

-ರಾಜೇಂದ್ರ ಚೆನ್ನಿ

**ಭಾರತೀಯ ರಾಜಕೀಯ ಚಿಂತನೆಯಲ್ಲಿ ಬಲವಾಗಿ ಬೇರುಬಿಟ್ಟಿರುವ ಸಮಾಜವಾದಿ ನಂಬಿಕೆಗಳನ್ನು ನಾಶ ಮಾಡುವ ಪ್ರಯತ್ನದಲ್ಲಿದೆ. ಮೊದಲಿನಿಂದಲೂ ಸಾಂಸ್ಥಿಕ ರಾಜಕೀಯ, ಚುನಾವಣಾ ರಾಜಕೀಯಗಳಲ್ಲಿ ಅಷ್ಟೇನೂ ಪ್ರಬಲವಾಗಿರದಿದ್ದರೂ ರಾಜಕೀಯ, ಆರ್ಥಿಕ ನೀತಿಗಳನ್ನು ಪ್ರಭಾವಿಸುತ್ತ ಬಂದಿರುವ ಸಮಾಜವಾದವು ಈಗ ನೇರವಾಗಿ ಜನಪರ ಚಳುವಳಿಗಳ ಮೂಲಕ ಪರಿವರ್ತನಾ ರಾಜಕೀಯದಲ್ಲಿ ಭಾಗಿಯಾಗುವ ಸವಾಲನ್ನು ಎತ್ತಿಕೊಳ್ಳಬೇಕಿದೆ.**




ಚರಿತ್ರೆಯ ವಿಚಿತ್ರ ವ್ಯಂಗ್ಯಗಳಲ್ಲಿ ಒಂದೆಂದರೆ ಬಂಡವಾಳಶಾಹಿ ಮತ್ತು ಸಮಾಜವಾದಿಗಳು ಅವಳಿ-ಜವಳಿಗಳು. ಬಂಡವಾಳಶಾಹಿಯು ತನ್ನ ಒಡಲಲ್ಲೇ ಹೊಂದಿರುವ ವೈರುಧ್ಯಗಳಿಂದಾಗಿ ಆರ್ಥಿಕ "ಪ್ರಗತಿ"ಯೊಂದಿಗೆ ಅಪಾರವಾದ ಅಸಮಾನತೆ, ಅಮಾನವೀಯವಾದ ಶೋಷಣೆ, ಪರಿಸರ ನಾಶವನ್ನು ಅನಿವಾರ್ಯವಾಗಿ ತರುವುದರಿಂದಾಗಿ ಅದು ಪ್ರಬಲಗೊಂಡಾಗ ಸಮಾಜವಾದವು ತನ್ನ ಆದರ್ಶಪರತೆ, ಅಮೂರ್ತ ಚಿಂತನೆಗಳನ್ನು ಕಳಚಿಕೊಂಡು ಮೂರ್ತವಾದ ಸಾಮಾಜಿಕ ಚಳುವಳಿಯಾಗಿ ಮತ್ತು ಒಂದು ವಾಸ್ತವಿಕ ಪರ್ಯಾಯವಾಗಿ ಪ್ರಬಲಗೊಳ್ಳುತ್ತದೆ. ಹೀಗೆಂದ ಮಾತ್ರಕ್ಕೆ ಸಮಾಜವಾದವು ಬಂಡವಾಳಶಾಹಿಗೆ ಕೇವಲ ಪ್ರತಿಕ್ರಿಯಾತ್ಮಕವಾದ ಪ್ರತಿರೋಧವೆಂದಲ್ಲ, ಮೂಲತಃ ಸಮಾಜವಾದಿ ಎಂದು ಕರೆಯಬಹುದಾದ ಮನುಷ್ಯಪರ ಚಿಂತನೆಗಳಿಗೆ ನಾವು ಬಲ್ಲ ನಾಗರೀಕತೆಯ ಆರಂಭದ ಘಟ್ಟದಿಂದಲೇ ಇರುವ ಸುದೀರ್ಘವಾದ ಇತಿಹಾಸವಿದೆ. ಆದರೆ ಆಧುನಿಕ ಸಮಾಜಗಳಲ್ಲಿ ಔದ್ಯೋಗಿಕ ಕ್ರಾಂತಿ, ಯಂತ್ರ ನಾಗರೀಕತೆ, ನಗರೀಕರಣ, ವಸಾಹತುಶಾಹಿಯಿಂದಾಗಿ ಲಭ್ಯವಾದ ಜಾಗತಿಕ ಮಾರುಕಟ್ಟೆ ಇವೇ ಮುಂತಾದ ವಿದ್ಯಮಾನಗಳಿಂದಾಗಿ ಬಂಡವಾಳಶಾಹಿಯು ಪಡೆದುಕೊಂಡ ರಭಸ ಹಾಗೂ ಅಧಿಕಾರಗಳ ಸಂದರ್ಭದಲ್ಲಿ ಅದು ವಿಶಿಷ್ಟವಾದ ಅನೇಕ ರೂಪಗಳಲ್ಲಿ ಬೆಳೆದುಬಂದಿತು. ಜಾಗತಿಕ ಮಟ್ಟದಲ್ಲಿ ಸಮಾಜವಾದವು ಯಾವಾಗಲೂ ಒಂದು ಬಹುಮುಖಿಯಾದ ಸಂವಾದದ ಫಲವಾಗಿದೆಯೆ ಹೊರತು ಕರ್ಮಠ ರಾಜಕೀಯ ಪ್ರಣಾಳಿಕೆಯಾಗಿಲ್ಲ. ಸಿದ್ಧಾಂತಿಗಳು ಅನುಮಾನದಿಂದ ನೋಡುವ ಸಮಾಜವಾದದ ಅರಾಜಕತೆಗೆ ಇದೂ ಒಂದು ಕಾರಣವಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಸಮಾಜವಾದವು ಎದುರಿಸುತ್ತಿರುವ ಪ್ರಮುಖ ಸವಾಲುಗಳು ಹೀಗಿವೆ ಎಂದು ಸ್ಥೂಲವಾಗಿ ಪಟ್ಟಿ ಮಾಡುತ್ತಿದ್ದೇನೆ.

ಅ) ಪ್ರತಿ ಹಂತದಲ್ಲಿಯೂ ಬಂಡವಾಳಶಾಹಿಯು ತನ್ನ ಆಂತರಿಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಹೊಸ ತಂತ್ರವೊಂದನ್ನು ಹುಡುಕಿಕೊಳ್ಳುತ್ತದೆ. ಇವುಗಳಲ್ಲಿ ಪ್ರಮುಖವಾದದ್ದು ನವ ಉದಾರೀಕರಣ ಅಥವಾ ಜಾಗತೀಕರಣ. ೧೯೮೦ ಹಾಗೂ ೧೯೯೦ರ ದಶಕಗಳಲ್ಲಿ ಈ ನೀತಿಗಳಿಗೆ ವಿಶ್ವ ಬ್ಯಾಂಕ್, ಘಟಿಒ ಮುಂತಾದ ಸಂಸ್ಥೆಗಳು ಹಾಗೂ ಒಪ್ಪಂದಗಳಿಂದಾಗಿ ವಿಶೇಷವಾಗಿ ಮೂರನೇಯ ಜಗತ್ತಿನ ದೇಶಗಳ ಸ್ವೀಕೃತಿ ದೊರೆಯಿತು. ಜಾಗತೀಕರಣದ ಸಮರ್ಥಕರು (ವಿಶೇಷವಾಗಿ ಭಾರತೀಯ ತಜ್ಞರು) ಜಾಗತೀಕರಣಕ್ಕೆ ಯಾವುದೇ ಪರ್ಯಾಯವಿಲ್ಲದ್ದರಿಂದ ಮತ್ತು ಅದು ಚರಿತ್ರೆಯ ಅನಿವಾರ್ಯವಾದ, ತಾರ್ಕಿಕವಾದ ಬೆಳವಣಿಗೆಯಾಗಿದ್ದರಿಂದ ಈ ಸ್ವೀಕೃತಿ ದೊರೆಯಿತೆನ್ನುವ ಸುಳ್ಳು ಕಥಾನಕವನ್ನು ರಚಿಸಿದ್ದಾರೆ. ಆದರೆ ನೋಮ್ ಚಾಮ್‌ಸ್ಕಿ, ನಾವೋಮಿ ಕ್ಲೇನ್, ವಂದನಾ ಶಿವಾ ಮತ್ತು ಅನೇಕ ಲ್ಯಾಟಿನ್ ಅಮೇರಿಕನ್ ಚಿಂತಕರು ಆಖೈರಾಗಿ ಸಾಬೀತು ಮಾಡಿ ತೋರಿಸಿದಂಣಜ ಈ ಸ್ವೀಕೃತಿಯು ಅಪಾರವಾದ ರಾಜಕೀಯ ಹಿಂಸೆ, ಚಿತ್ರಹಿಂಸೆ, ಪ್ರಜಾಪ್ರಭುತ್ವ ವ್ಯವಸ್ಥೆಗಳ ನಿರ್ನಾಮ ಮುಂತಾದವುಗಳಿಂದ ಸಾಧ್ಯವಾಯಿತು. ಹೇಗೆ ೧೮ನೇ ಶತಮಾನದಿಂದೀಚೆಗೆ ಆಧುನಿಕ ಕಾಲದ ಬಂಡವಾಳಶಾಹಿ ಬೆಳೆಯುವ ಹಂತದಲ್ಲಿ ಅಪಾರ ಕ್ರೌರ್ಯವನ್ನು ಬಳಸಿಕೊಂಡಿತೋ, ಅದೇ ರೀತಿ ಉದಾರೀಕರಣದ ಹಂತದಲ್ಲಿಯೂ ಆಯಿತು. ಭಾರತದಂಥ ಪಾರಂಪರಿಕ ಗುಲಾಮಗಿರಿಯ ದೇಶದಲ್ಲಿ ಇದು ಹೆಚ್ಚಾಗಿ ಕಣ್ಣಿಗೆ ಕಾಣಲಿಲ್ಲ. ಆದರೆ ಭೂಮಿ, ಕೃಷಿ ಮತ್ತು ಕಾರ್ಮಿಕರಿಗೆ ಸಂಬಂಧಪಟ್ಟ ಕಾನೂನುಗಳನ್ನು, ಮಾರುಕಟ್ಟೆ ಹಾಗೂ ಆಮದು ರಫ್ತು ನೀತಿಗಳ ಬದಲಾವಣೆಯ ಮೂಲಕ ದುರ್ಬಲ ವರ್ಗಗಳ ಮೇಲೆ ಹೇರಲಾದ ಹಿಂಸೆಯು ಅಗೋಚರವಾಗಿದೆಯಷ್ಟೆ. ಇದರ ಮುಂದಿನ ಹಂತವಾಗಿ ಈಗ ಭಾರತದಲ್ಲಿ electoral dictatorship ಮಾದರಿಯ ವ್ಯವಸ್ಥೆಯನ್ನು ಜಾರಿಗೆ ತಂದು ಅಂತರ್‌ರಾಷ್ಟ್ರೀಯ ಬಂಡವಾಳಶಾಹಿಯು ಒಂದು ಕಡೆಗೆ ಪ್ರಜಾಪ್ರಭುತ್ವವನ್ನು ನಿರ್ನಾಮ ಮಾಡಿ ಇನ್ನೊಂದು ಕಡೆಗೆ ಆಧುನಿಕ ಭಾರತೀಯ ರಾಜಕೀಯ ಚಿಂತನೆಯಲ್ಲಿ ಬಲವಾಗಿ ಬೇರುಬಿಟ್ಟಿರುವ ಸಮಾಜವಾದಿ ನಂಬಿಕೆಗಳನ್ನು ನಾಶ ಮಾಡುವ ಪ್ರಯತ್ನದಲ್ಲಿದೆ. ಮೊದಲಿನಿಂದಲೂ ಸಾಂಸ್ಥಿಕ ರಾಜಕೀಯ, ಚುನಾವಣಾ ರಾಜಕೀಯಗಳಲ್ಲಿ ಅಷ್ಟೇನೂ ಪ್ರಬಲವಾಗಿರದಿದ್ದರೂ ರಾಜಕೀಯ, ಆರ್ಥಿಕ ನೀತಿಗಳನ್ನು ಪ್ರಭಾವಿಸುತ್ತ ಬಂದಿರುವ ಸಮಾಜವಾದವು ಈಗ ನೇರವಾಗಿ ಜನಪರ ಚಳುವಳಿಗಳ ಮೂಲಕ ಪರಿವರ್ತನಾ ರಾಜಕೀಯದಲ್ಲಿ ಭಾಗಿಯಾಗುವ ಸವಾಲನ್ನು ಎತ್ತಿಕೊಳ್ಳಬೇಕಿದೆ. ವಿಶ್ವದ ಮಹಾನ್ ಚಳುವಳಿಯಾಗಿ ರೂಪುಗೊಂಡಿರುವ ರೈತ ಚಳುವಳಿಯ ಪ್ರಮುಖ ಆಶಯಗಳು ಸಮಾಜವಾದಿ ಆಶಯಗಳೇ. ಈ ಚಳುವಳಿಯ ನಾಯಕತ್ವ, ಚರ್ಚಾವಿಧಾನ ಇತ್ಯಾದಿಗಳು World Social Forum ನ ಸಂಹಿತೆಯನ್ನು ಆಶ್ಚರ್ಯಕರವಾದ ರೀತಿಯಲ್ಲಿ ಹೋಲುತ್ತವೆ. ಅಲ್ಲದೆ ಈ ಚಳುವಳಿಯು ಜಾಗತಿಕವಾಗಿ ಅಂತರ್‌ರಾಷ್ಟ್ರೀಯ ಬಂಡವಾಳಶಾಹಿಯ ವಿರುದ್ಧದ ಅತಿ ಪ್ರಬಲ ಹೋರಾಟವಾಗಿದೆ. ಇನ್ನೊಂದು ರೀತಿಯಲ್ಲಿ ಬಂಡವಾಳಶಾಹಿಯ ವಿರುದ್ಧ ಸಮಾಜವಾದವು ಶತಮಾನಗಳಿಂದ ಹೂಡಿರುವ ಹೋರಾಟದ ಸಮಕಾಲೀನ ರೂಪವಾಗಿದೆ. ಹೀಗಾಗಿ ಸಮಾಜವಾದದ ಸವಾಲೆಂದರೆ ಈ ಚಳುವಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರವೇಶ ಮಾಡಿ, ವಿಶೇಷವಾಗಿ ಕರ್ನಾಟಕದಲ್ಲಿ ರೈತ ಚಳುವಳಿಯು ಸಮಾಜವಾದದಿಂದ ಪಡೆದ ತಾತ್ವಿಕ ಗಟ್ಟಿತನ ಹಾಗೂ ಖಚಿತತೆಯನ್ನು ಮರುಕಳಿಸುವಂತೆ ಮಾಡುವುದಾಗಿದೆ. ಇಲ್ಲದಿದ್ದರೆ ರೈತ ಚಳುವಳಿಯು ಟ್ರೇಡ್ ಯೂನಿಯನ್ ಮಾದರಿಯ ಬೇಡಿಕೆಗಳಿಗೆ ತನ್ನನ್ನು ಕುಬ್ಜಗೊಳಿಸುವ ದೌರ್ಬಲ್ಯವನ್ನು ಮತ್ತೆ ತೋರುವ ಅಪಾಯವಿದೆ. ಇದನ್ನು ಸಮಾಜವಾದವು ಗುರುವಾಗಿ ಅಲ್ಲ, ಸಹಚರನಾಗಿ ಮಾಡಬೇಕು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದುಕೊಂಡಿದ್ದೇನೆ.

ಈ ಚಳುವಳಿಯು ಮುನ್ನೆಲೆಗೆ ತಂದಿರುವ ಇನ್ನೊಂದು ಪ್ರಮುಖ ಅಂಶವೆಂದರೆ ಇಂದಿನ ಜಾಗತಿಕ ಸನ್ನಿವೇಷದಲ್ಲಿ ಬಂಡವಾಳಶಾಹಿಯು ಕ್ರಮೇಣವಾಗಿ ವಂದನಾ ಶಿವಾ ಅವರ ಮಾತಿನಲ್ಲಿ 1% against all ಎನ್ನುವ ಸ್ಥಿತಿಗೆ ತಲುಪಿದೆ. ಅಂದರೆ ಕಾರ್ಪೋರೇಟ್ ಬಂಡವಾಳವು ಮತ್ಸ್ಯ ನ್ಯಾಯವನ್ನು ಅನುಸರಿಸಿ ತನ್ನೊಳಗಿನ ಆಂತರಿಕ ಸ್ಪರ್ಧೆಯನ್ನು ಬಿಟ್ಟುಕೊಟ್ಟು ಏಕಸ್ವಾಮ್ಯತೆಯ ಕಡೆಗೆ ಚಲಿಸುತ್ತಿದೆ. ಭಾರತದಲ್ಲಿಯೇ ಅಂಬಾನಿ, ಅದಾನಿ ಇವರಿಬ್ಬರೇ ಸ್ಪರ್ಧೆಯಲ್ಲಿದ್ದಾರೆ. ಹೀಗಾಗಿ ಸಾಂಕೇತಿವಾಗಿ ಮತ್ತು ವಾಸ್ತವಿಕವಾಗಿ ಇವರನ್ನು ರೈತ ಚಳುವಳಿಯು ವಿರೋಧಿಸುವುದರ ಹಿಂದೆ ಇಂದಿನ ಬಂಡವಾಳಶಾಹಿಯ ಸ್ವರೂಪದ ಸ್ಪಷ್ಟವಾದ ತಿಳುವಳಿಕೆ ಇದೆ. ಇದು ಸಮಾಜವಾದದ ಇಂದಿನ ತಿಳುವಳಿಕೆಯು ಆಗಿರಬೇಕು. ಇಲ್ಲದಿದ್ದರೆ ಬಂಡವಾಳಶಾಹಿಯ ಪ್ರಾಬಲ್ಯದ ಸಮರ್ಪಕವಾದ ಅಂದಾಜು ಇಲ್ಲದಂತಾಗುತ್ತದೆ. ನನಗೆ ಗೊತ್ತು, ಅಂತರ್‌ರಾಷ್ಟ್ರೀಯವಾಗಿ ಸಮಾಜವಾದಿ ಸಂಘಟನೆಗಳು ಈ ಹೋರಾಟದಲ್ಲಿ ತೊಡಗಬೇಕು ಎಂದ ಕೂಡಲೇ ಇವರು ಮಾರ್ಕ್ಸ್‌ನ international ಗಳ ಮರು ಹಂಬಲದಲ್ಲಿ ಇದ್ದಾರೆ ಎನ್ನುವ ಟೀಕೆ ಬರುತ್ತದೆ. ಬಂಡವಾಳಶಾಹಿಯು ಇಂದು ವಾಸ್ತವಿಕವಾಗಿ ಒಂದು ಜಾಗತಿಕ ಶಕ್ತಿಯಾಗಿದೆ. ಜನಾಂಗೀಯವಾದ (ಅಮೇರಿಕ), ಕೋಮುವಾದ ಮತ್ತು ಹುಸಿ ರಾಷ್ಟ್ರವಾದ (ಭಾರತ) ಬಲಪಂಥೀಯ ಸಿದ್ಧಾಂತಗಳು (ವಿಶ್ವದ ಅನೇಕ ರಾಷ್ಟ್ರಗಳು) ಹೀಗೆ ಅನೇಕ ಶಕ್ತಿಗಳ ಬೆಂಬಲದೊಂದಿಗೆ ರಾಕ್ಷಸ ಸ್ವರೂಪವನ್ನು ಅದು ಪಡೆದುಕೊಂಡಿದೆ. ಹೀಗಾಗಿ ಒಂದು ಕಾಲದಲ್ಲಿ ತಕ್ಕಮಟ್ಟಿಗಿನ ಸಫಲತೆಯನ್ನು ಪಡೆದಿದ್ದ ಪ್ರಜಾಪ್ರಭುತ್ವವಾದಿ ಸಮಾಜವಾದ (democratic socialism) ಇದು ಹಿನ್ನೆಡೆ ಅನುಭವಿಸಿದೆ. ಈಗ ಉಳಿದಿರುವುದು ಜಾಗತಿಕ ಹೋರಾಟ ಮಾತ್ರ. ಜಾಗತಿಕವೆಂದರೆ ರೈತ ಚಳುವಳಿಯಂಥ ದೇಶೀಯ ಹೋರಾಟದ ಆಂತರ್ಯದಲ್ಲಿ ಇರುವ ಜಾಗತಿಕ ಬಂಡವಾಳಶಾಹಿಯ ಪ್ರತಿರೋಧದ ಶಕ್ತಿಯನ್ನು ವೃದ್ಧಿಸಿಕೊಂಡು ಚಳುವಳಿಯನ್ನು ವಿಸ್ತಾರಗೊಳಿಸಿಕೊಳ್ಳುವುದು. ಅದಕ್ಕಿಂತ ಮುಖ್ಯವಾಗಿ ಬಂಡವಾಳಶಾಹಿಯು ಜಾಗತಿಕವಾಗಿ ಸೋತಿದೆ ಮತ್ತು ಆ ಕಾರಣಕ್ಕಾಗಿಯೆ ಭಾರತದ ಪ್ರಭುತ್ವವು ಕೊರೋನಾ ಪಿಡುಗಿನ ಪ್ರಯೋಜನ ಪಡೆದು ಈಗ ಹಟಮಾರಿಯಾಗಿ ರೈತರನ್ನು ಮತ್ತು ಕಾರ್ಮಿಕರನ್ನು ತುಳಿಯುತ್ತಿದೆ. ಯಕ್ಷಗಾನಪಟು ಪ್ರಧಾನಿಗಳಿಗೆ ಗೊತ್ತಿರದಿದ್ದರೂ ಅದಾನಿ, ಅಂಬಾನಿಯವರಿಗೆ ಚುನಾಯಿತ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯುಳ್ಳ ಭಾರತದಲ್ಲಿ ಬಂಡವಾಳಶಾಹಿ ಪರವಾದ ಕಾನೂನು, ನೀತಿಗಳನ್ನು ಒತ್ತಾಯದಿಂದ ತರುವ ಹಂತ ಇದೇ ಕೊನೆಯದು; ಇನ್ನು ಏನೇ ಇದ್ದರೂ ಫ್ಯಾಸಿಸ್ಟ್ ಮಾದರಿಯ ಹಿಂಸೆಯ ಮೂಲಕ ಮಾತ್ರ ಭಾರತದಲ್ಲಿ ಬಂಡವಾಳಶಾಹಿ ಏಳ್ಗೆ ಸಾಧಿಸಬಲ್ಲದು ಎನ್ನುವುದು ಖಚಿತವಾಗಿ ಗೊತ್ತಿದೆ. ಇಂಥ ಅಪಾಯಕಾರಿ ಸಂಕ್ರಮಣ ಕಾಲದಲ್ಲಿ ಸಮಾಜವಾದವು ತನ್ನೆಲ್ಲ ತಿಳುವಳಿಕೆ ಹಾಗೂ ಕ್ರಿಯಾಶೀಲತೆಯಿಂದ ಭಾಗವಹಿಸಬೇಕಾಗಿದೆ.

ಇನ್ನೊಂದು ಸವಾಲೆಂದರೆ ನಮ್ಮ ಸಾಮಾಜಿಕ ತಾಣಗಳು, ಮಾಧ್ಯಮಗಳು ಹಾಗೂ ಶೈಕ್ಷಣಿಕ ವಿದ್ವತ್ತು ಜಂಟಿಯಾಗಿ ಸಮಾಜವಾದದ ನಿಧನವನ್ನು ಘೋಷಿಸುತ್ತಾ



**ನೋಮ್ ಚೋಮ್‌ಸ್ಕಿ ವಂದನಾ ಶಿವಾ ಪ್ರೊ. ಎಂಡಿಎನ್**

ಅದರ ಜೀವಂತ ಆಶಯಗಳನ್ನು ಜನಮಾನಸದಿಂದ ಅಳಿಸಿಹಾಕಲು ಮಾಡುತ್ತಿರುವ ಪ್ರಯತ್ನಗಳನ್ನು ವಿರೋಧಿಸುವುದಾಗಿದೆ. ಇದು ಹೊಸದೇನಲ್ಲ. ಆದರೆ ಶ್ರೀ ಮೋದಿ ಪ್ರೇರಿತ ಉದಾರವಾದಿ ಖಾಸಗೀಕರಣವನ್ನು ದೇವರ ವಾಕ್ಯವೆಂದೇ ಸಮರ್ಥಿಸುವ ಜವಾಬ್ದಾರಿಯನ್ನು ಹೊತ್ತುಕೊಂಡ ಅನೇಕರು ಸಮಾಜವಾದವನ್ನು ಹಳೆ ಕಾಲದ ಒಂದು ಅಸಂಗತ ಜೋಕು ಎಂದು, ಸ್ವಾತಂತ್ರ್ಯೋತ್ತರ ಭಾರತದ ಎಲ್ಲಾ ದುರ್ದಶೆಗಳಿಗೆ ಅದೇ ಕಾರಣವೆಂದು ಮತ್ತು ಈಗ ವಿದೇಶೀ ಫಿತೂರಿಯ ಬೆಂಬಲದೊಂದಿಗೆ ಸ್ವದೇಶಿ ದೇಶದ್ರೋಹಿಗಳು ಸಮಾಜವಾದದ ಮೂಲಕ ಭಾರತದ ಆರ್ಥಿಕ ಪ್ರಗತಿಯನ್ನು ತಡೆಯುತ್ತಿದ್ದಾರೆ ಎಂದು ಪ್ರಬಲವಾಗಿ ಪ್ರಚಾರದಲ್ಲಿ ತೊಡಗಿದ್ದಾರೆ. ಅಂತರ್‌ರಾಷ್ಟ್ರೀಯ ಬಂಡವಾಳಶಾಹಿಯ ಯಶಸ್ಸಿಗೆ ಇಂದಿನ ಡಿಜಿಟಲ್ ಜಗತ್ತಿನಲ್ಲಿ ಈ ಪ್ರಚಾರವೂ ಕಾರಣವಾಗಿದೆ. ಅದೇ ಹೊತ್ತಿಗೆ ಜಗತ್ತಿನ ಆರ್ಥಿಕ ವ್ಯವಸ್ಥೆ ಬಿಕ್ಕಟ್ಟಿನಲ್ಲಿ ಮತ್ತೆ ಮತ್ತೆ ಸಿಕ್ಕಿಕೊಳ್ಳುತ್ತಿರುವುದು ಅದರ ಆಂತರಿಕ ತರ್ಕದಿಂದಲೇ ಮತ್ತು ವೈರುಧ್ಯಗಳಿಂದಲೇ ಎನ್ನುವ ಸಮಾಜವಾದಿ ತಿಳುವಳಿಕೆಯು ಹಿನ್ನೆಲೆಗೆ ಸರಿದಿದೆ. ಲೋಹಿಯಾರವರು ಆದಾಯಗಳಲ್ಲಿನ ವಿಪರೀತವಾದ ಅಸಮಾನತೆ, ಕೆಲವೇ ಚಿಕ್ಕ ವರ್ಗಗಳ ಐಷಾರಾಮಿ ಜೀವನ ಶೈಲಿ, ರಾಷ್ಟ್ರೀಯ ಆದಾಯದ ಅತಾರ್ಕಿಕ ಹಂಚಿಕೆ ಮುಂತಾದ ಮೂರ್ತವಾದ ವಸ್ತುಸಂಗತಿಗಳ ಮೂಲಕ ಈ ವೈರುಧ್ಯಗಳನ್ನು ವಿವರಿಸುತ್ತಿದ್ದರು. ಈಗ ಕೇವಲ ಕರೋನಾ ಪಿಡುಗಿನ ಅವಧಿಯಲ್ಲಿ 1% ಶ್ರೀಮಂತ ಬಂಡವಾಳಶಾಹಿಗಳ ಸಂಪತ್ತಿನಲ್ಲಿ 35% ಹೆಚ್ಚಳವಾಗಿದ್ದನ್ನು Oxfam ಸಂಸ್ಥೆ ವರದಿ ಮಾಡಿದೆ. ಲೋಹಿಯಾಯವರಂತೆ ಇದನ್ನು ರೋಗಲಕ್ಷಣವೆಂದು ವ್ಯಾಖ್ಯಾನಿಸಬೇಕಿದೆ. ಜಾಗತೀಕರಣದಿಂದಾಗಿ ಉಂಟಾದ ಭೀಕರವಾದ ಅಸಮಾನತೆಯನ್ನು ಜಾಗತಿಕ ವಿನಾಶಕ ರೋಗವೆಂದು ತಿಳಿಹೇಳಬೇಕಿದೆ. "ಮತ್ತ ವಿಲಾಸ" ದಲ್ಲಿರುವ ಮಧ್ಯಮ ವರ್ಗವು ಇದನ್ನು ಒಪ್ಪಲಾರದ ಸ್ಥಿತಿಯಲ್ಲಿದೆ. ಆದರೆ ಜಾಗತೀಕರಣದ ಸಂಕಥನಗಳನ್ನು ಒಡೆಯದೆಯೆ ಅದರ ವಿರುದ್ಧ ಹೋರಾಡಲಾಗುವುದಿಲ್ಲ. ಉದಾಹರಣೆಗೆ ಕರ್ನಾಟಕದಲ್ಲಿ ಭೂಸುಧಾರಣೆ ಕಾನೂನಿನಲ್ಲಿ ತಂದಿರುವ ತಿದ್ದುಪಡಿಗಳನ್ನು, ಹೊಸ ಕಾನೂನನ್ನು ಸಮರ್ಥಿಸಲು ಬಳಸಲಾದ ಸಂಕಥನಗಳು ಉದಾರೀಕರಣ ಸಂಕಥನಗಳೆ. ಇವುಗಳಿಗೆ ಪರ್ಯಾಯವಾದ ಸಮಾಜವಾದಿ ಸಂಕಥನಗಳು ಪ್ರಬಲವಾಗಿ ಮಂಡಿತವಾಗಲಿಲ್ಲ. ಈ ಪರಿಸ್ಥಿತಿಯಿಂದಾಗಬಹುದಾದ ಅಪಾಯವೆಂದರೆ ರಾಜಕೀಯ ಪಕ್ಷಗಳು ಬದಲಾದರೂ ಅದೇ ನೀತಿಗಳನ್ನು ಸಮರ್ಥಿಸಿ ಮುಂದುವರೆಸುತ್ತವೆ. ಇನ್ನು ಶೈಕ್ಷಣಿಕ ಸಂಸ್ಥೆಗಳಿಂದ ಹೊರಬರುವ ಸಂಶೋಧನೆ ಹಾಗೂ ವಿದ್ವತ್ತುಗಳ ಬಗ್ಗೆ ಹೇಳುವ ಅವಶ್ಯಕತೆಯಿಲ್ಲ. ಸಮಾಜ ವಿಮರ್ಶೆ, ರಾಜಕೀಯ ವಿಮರ್ಶೆ ಇವುಗಳಿಗೆ ಅವಶ್ಯಕವಾದ ವೈಚಾರಿಕ ವಾತಾವರಣವುಳ್ಳ ವಿಶ್ವವಿದ್ಯಾಲಯಗಳನ್ನು ಮೌನಕ್ಕೆ ತಳ್ಳುವ ಕೆಲಸವನ್ನು ಪ್ರಭುತ್ವವು ಮಾಡುತ್ತಲೆ ಇದೆ. ಸ್ವತಂತ್ರ ಮಾಧ್ಯಮಗಳನ್ನು ವಿವಿಧ ರೀತಿಯಲ್ಲಿ ಮಣಿಸಲಾಗುತ್ತಿದೆ. ಇವು ಮೇಲುನೋಟಕ್ಕೆ ಹುಸಿ ರಾಷ್ಟ್ರವಾದಕ್ಕೆ ಸಂಬಂಧಿಸಿದ ಸಂಗತಿಗಳು ಎನ್ನಿಸಿದರೂ ಆಳದಲ್ಲಿರುವ ದೂರಗಾಮಿ ಉದ್ದೇಶವೆಂದರೆ ಬಹುರಾಷ್ಟ್ರೀಯ ಬಂಡವಾಳದ ವಿರುದ್ಧ ಅಭಿಪ್ರಾಯಗಳು, ಪ್ರತಿರೋಧಗಳು ಹುಟ್ಟಬಹುದಾದ ನೆಲೆಗಳನ್ನು ಈಗಲೇ ನಾಶಮಾಡುವುದಾಗಿದೆ. ನನ್ನನ್ನು ಸೇರಿದಂತೆ ಅನೇಕರ ಅಭಿಪ್ರಾಯದಲ್ಲಿ ಈ ಪ್ರಕ್ರಿಯೆಯಲ್ಲಿ ನಮ್ಮ ನ್ಯಾಯಾಂಗ ವ್ಯವಸ್ಥೆಯು ಈಗ ಶಾಮೀಲಾಗಿಬಿಟ್ಟಿದೆ. ಜಾಗತಿಕ ಸ್ತರದಲ್ಲಿ ಸಮಾಜವಾದದ ಹುಟ್ಟಿನಿಂದ ಇಲ್ಲಿಯವರೆಗೆ ಸಮಾಜವಾದದ ಜೀವಾಳವಾದ ವಿಮರ್ಶೆಯನ್ನು (critique) ನಿಲ್ಲಿಸುವುದಕ್ಕಾಗಿ ಅಪಾರವಾದ ಹಿಂಸೆಯನ್ನು ಬಳಸಲಾಗಿದೆ. ಲೋಹಿಯಾ ಅವರ ಜೀವನವು ಇದಕ್ಕೆ ಸಾಕ್ಷಿಯಾಗಿದೆ. ಸಮಾಜವಾದವು ಒಂದು ಹಂತದಲ್ಲಿ ಸೋವಿಯತ್ ಮಾದರಿಯ ಕಮ್ಯೂನಿಜಮ್ ಅನ್ನು ವಿರೋಧಿಸಿದ್ದು ಸ್ವಾತಂತ್ರ್ಯ ದಮನದ ಆಪಾದನೆಯ ಕಾರಣಕ್ಕಾಗಿ. ಹೀಗಾಗಿ ಸಮಾಜವಾದವು ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆಯನ್ನು ಪ್ರಜಾಪ್ರಭುತ್ವದ universal ಮೌಲ್ಯವಾಗಿ ಮಾತ್ರ ನೋಡದೆ ಬಂಡವಾಳಶಾಹಿ ವಿರೋಧದ ಪ್ರಶ್ನೆಯನ್ನಾಗಿ ನೋಡುವ ಅಗತ್ಯವಿದೆ. ಭಾರತದಲ್ಲಿ ದಿನನಿತ್ಯವೂ ನಡೆಯುತ್ತಿರುವ ಮಾಹಿತಿ ಹಕ್ಕು ಹೋರಾಟಗಾರರ ಕೊಲೆಗಳು, ದೈಹಿಕ ದಾಳಿಗಳು ಮತ್ತು ಬಂಧನಗಳು ಈ ವಿದ್ಯಮಾನದ ಅಂಶಗಳಾಗಿವೆ. ಅರಣ್ಯ ಭೂಮಿ ದುರ್ಬಳಕೆಯ ವಿರುದ್ಧ ಹೋರಾಟಮಾಡುತ್ತಿರುವ ಗಿರೀಶ್ ಅವರ ಮೇಲೆ ಮೊನ್ನೆ ತಾನೆ ನಡೆದ ಹಲ್ಲೆ ಇದರ ಉದಾಹರಣೆಯಾಗಿದೆ. ಭಾರತದ ರಾಜ್ಯಗಳಲ್ಲಿ ಅತಿ ಹೆಚ್ಚು ದೇಶದ್ರೋಹ ಪ್ರಕರಣಗಳು ದಾಖಲಾಗಿರುವುದು ಕರ್ನಾಟಕದಲ್ಲಿಯೆ. ಕರ್ನಾಟಕ ರಾಜಕೀಯದ ಸಮಾಜವಾದಿ ಸಂಪ್ರದಾಯದ ಕೊನೆಯನ್ನು ಇವೆಲ್ಲ ಸೂಚಿಸುತ್ತಿವೆ.


ಜಾತಿವಿನಾಶದ ಪರಿಕಲ್ಪನೆಯನ್ನು ರಾಜಕೀಯ ಕ್ರಿಯಾಸೂಚಿಯನ್ನಾಗಿ ಮಾಡುವ ಪ್ರಯತ್ನವನ್ನು ಸಮಾಜವಾದವು ಮಾಡಿತು.. ಒಂದು ಹಂತದಲ್ಲಿ ಲೋಹಿಯಾ ಅವರ ಚಿಂತನೆಯ ಅನೇಕ ಸೂಕ್ಷ್ಮಗಳನ್ನು ಬದಿಗಿರಿಸಿ ಇದನ್ನು ಶೂದ್ರ ಜಾತಿಗಳ ಪರವಾದ ರಾಜಕೀಯವನ್ನಾಗಿ ಪರಿವರ್ತಿಸಲಾಯಿತು. ಇದರ ಅಂತಿಮ ವಿಶ್ಲೇಷಣೆಯು ಏನೇ ಇರಲಿ ಜಾತಿ ಸಮಾಜದಲ್ಲಿ (caste society) ಇದು ಮಹತ್ವದ ಸಂಚಲನವನ್ನು ಉಂಟುಮಾಡಿತು. ಸಮಾಜವಾದಿಗಳಲ್ಲದ ದೇವರಾಜ್ ಅರಸರ ಅವಧಿಯಲ್ಲಿ ಕೂಡ ಈ ಪ್ರಯತ್ನ ನಡೆಯಿತು. ಶೂದ್ರಪರ ಮತ್ತು ದಲಿತ ಪರವಾದ ರಾಜಕೀಯವು ಮೊದಲ ಹೆಜ್ಜೆಯಾಗಿ ಜಾತಿವಿನಾಶವು ಮುಂದಿನ ಹೆಜ್ಜೆಯಾಗಬೇಕಾಗಿತ್ತು. ಆದರೆ ಶೂದ್ರ ಜಾತಿಗಳ ಹಾಗೂ ದಲಿತರ ಸಂಘಟನೆ ಹಾಗೂ ಹಕ್ಕುಮಂಡನೆಯಲ್ಲಿ ಈ ಪ್ರಕ್ರಿಯೆ ನಿಂತುಹೋಯಿತು. ಜಾತಿವಿನಾಶವೆನ್ನುವುದು ಒಂದು ಪದವಾಗಿ ಕೂಡ ಈಗ ಚಾಲ್ತಿಯಲ್ಲಿಲ್ಲ. ಈ ಬಗ್ಗೆ ಸಮಾಜವಾದವೂ ಕೂಡ ಕೈಚೆಲ್ಲಿ ಕುಳಿತಂತೆ ಕಾಣುತ್ತದೆ. ಇದು ಇಂದಿನ ಬಹುದೊಡ್ಡ ಸವಾಲು.

ಈಸಂದರ್ಭದಲ್ಲಿ ನನಗೆ. ಪ್ರಸಿದ್ಧ ಕಾಗೋಡು ಸತ್ಯಾಗ್ರಹವೂ ನೆನಪಿಗೆ ಬರುತ್ತಿದೆ, ಅದುಕೂಡ ಲೋಹಿಯಾ ಅವರ ಆಗಮನದ ವರೆಗೆ ಸ್ಥಳೀಯ ಚಳುವಳಿಯೇ ಆಗಿತ್ತು. ಅದೇ ಹೊತ್ತಿಗೆ 'ಉಳುವವನೆ ಹೊಲದೊಡೆಯ' ಎನ್ನುವ ಸಮಾಜವಾದದ ಅರ್ಕವೇ ಆಗಿರುವ ಸಿದ್ಧಾಂತವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ಎಲ್ಲಾ ಸಮಾಜವಾದಿ ಚಳುವಳಿಗಳಂತೆ ಅದೂ ಅಪೂರ್ಣವೇ ಆಗಿತ್ತು. ಆದರೆ ಅನೇಕ ತಲೆಮಾರುಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ನನಗೆ ವೈಯಕ್ತಿಕವಾಗಿ ಅಚ್ಚರಿ ಮತ್ತು ಮೆಚ್ಚುಗೆ ಹುಟ್ಟಿಸುವ ಸಂಗತಿಯೆಂದರೆ ನೂರಾರು ಸಮಾಜವಾದಿಗಳು ತಾವು ಹುಟ್ಟಿದ ಒಕ್ಕಲಿಗ-ಜಮೀನ್ದಾರಿ ವರ್ಗ ಹಾಗೂ ಜಾತಿಗಳನ್ನು ತೊರೆದು, ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಯಾವುದೇ ಸಮಜಾಯಿಶಿ ಮಾಡಿಕೊಳ್ಳದೆ ಬದುಕಿದ್ದು. ಅನೇಕರು ಅಸಹಾಯಕ ಬಡತನದ ಸ್ಥಿತಿಯಲ್ಲಿ ಬದುಕು ಮುಗಿಸಿದ್ದು. ಹೆಚ್ಚಿನ ಚಲನೆಯೇ ಇಲ್ಲದ ಸ್ಥಳೀಯ ಸಮಾಜವೊಂದರಲ್ಲಿ ಇಂಥ ವ್ಯಕ್ತಿತ್ವಗಳು ಹುಟ್ಟಿದ್ದು ಅಚ್ಚರಿಯೆ. ವೈಯಕ್ತಿಕ ಸಾರ್ವಜನಿಕ ಎಂದು ತಮ್ಮನ್ನೇ ಇಬ್ಭಾಗಿಸಿಕೊಳ್ಳದಂತೆ ಬದುಕಿ ಪ್ರತಿಭಟನೆಯ ಹಾದಿ ಹಿಡಿದು ತಮ್ಮ ಕುಟುಂಬಗಳಿಂದಲೇ ಹೊರಗಾದದ್ದು ಇದರ ಇನ್ನೊಂದು ಮುಖ. ಇವರೆಲ್ಲ ಸಮಾಜವಾದದ ಶ್ರೇಷ್ಠ ಫಲಗಳು.

ಈಗಿರುವ ಸಮಸ್ಯೆಯೆಂದರೆ ಇಂಥ ಸಾಂಸ್ಕೃತಿಕ ಸಂಪನ್ಮೂಲಗಳನ್ನು ನಾವು ಕಳೆದುಕೊಂಡುಬಿಟ್ಟಿದ್ದೇವೆಯೆ? ಸಮಾಜವಾದವು ಇಂಥ ವ್ಯಕ್ತಿತ್ವ ನಿರ್ಮಾಣದ ಸಾಮರ್ಥ್ಯ ಕಳೆದುಕೊಂಡು ಕೇವಲ ತಾತ್ವಿಕತೆ, ಸಿದ್ಧಾಂತಗಳ ವೇದಿಕೆಗೆ ಸ್ಥಳಾಂತರಗೊಂಡು ಬಿಟ್ಟಿದೆಯೆ? ರೈತ ಚಳುವಳಿಯ ಒಂದು ಹಂತದ ನಂತರ ಸಿದ್ಧಾಂತ ಹಾಗೂ ಸಾಮಾಜಿಕ-ರಾಜಕೀಯ ಕ್ರಿಯೆಗಳ ನಡುವೆ ಬಿರುಕು ದೊಡ್ಡದಾಗುತ್ತ ಬಂದಿದೆಯೆ? ಈ ಮೊದಲು ಹೇಳಿದಂತೆ ದೆಹಲಿಯ ಗಡಿಗಳಲ್ಲಿ ನಡೆಯುತ್ತಿರುವ ರೈತ ಚಳುವಳಿಯು ದೇಶದ ಉಳಿದ ಪ್ರಾಂತಗಳಲ್ಲಿ ಹಬ್ಬುತ್ತಿದ್ದು ಅದು ಕಾರ್ಪೋರೇಟ್ ಬಂಡವಾಳಶಾಹಿಯ ವಿರುದ್ಧ ಒಂದು ಪರ್ಯಾಯವನ್ನೂ ಕಟ್ಟಿಕೊಳ್ಳುತ್ತಿವೆ. ಅದರ ಅದಮ್ಯ ಶಕ್ತಿ ಮತ್ತು ಚೈತನ್ಯವು ಒಂದು ಜೀವನ ಶೈಲಿಯಿಂದ ಬಂದಿದೆ; ಒಂದು ಸಾಂಸ್ಕೃತಿಕ ಗಟ್ಟಿ ನೆಲೆಯಿಂದ ಬಂದಿದೆ. ಆ ನೆಲೆಯಿಂದಲೇ ಅದು ಜಾಗತಿಕ ಬಂಡವಾಳಶಾಹಿಯನ್ನು ಪ್ರತಿರೋಧಿಸುವ ತಿಳುವಳಿಕೆಯನ್ನು ಪಡೆದುಕೊಂಡಿದೆ. ಇಂಥ ಚಾರಿತ್ರಿಕವಾದ, ವಿಶಿಷ್ಟವಾದ ವಿದ್ಯಮಾನವನ್ನು ಸಮಾಜವಾದವು ವ್ಯಾಖ್ಯಾನಿಸಬೇಕಿದೆ. ಪ್ರೊ. ಎಂ.ಡಿ.ಎನ್. ಅವರ ನೇತೃತ್ವದಲ್ಲಿ ಕರ್ನಾಟಕದ ರೈತ ಚಳುವಳಿ ಅಂದಿನ ಜಾಗತೀಕರಣದ ವಿರುದ್ಧ ಸಿದ್ಧಾಂತ ಹಾಗೂ ಕಾರ್ಯಾಚರಣೆ ಇವೆರಡನ್ನೂ ರೂಢಿಸಿಕೊಂಡಿತ್ತು. ಅನೇಕ ವಿದ್ವಾಂಸರ ಪ್ರಕಾರ ಇದು ವಿಶ್ವದ ಮಹತ್ವಪೂರ್ಣ ಪ್ರತಿರೋಧವಾಗಿತ್ತು. ಎಂ.ಡಿ.ಎನ್. ಅವರು ಈ ಪ್ರತಿರೋಧದ ಚೌಕಟ್ಟನ್ನು ಸಮಾಜವಾದದಿಂದಲೇ ಪಡೆದಿದ್ದರು. ಆನಂತರದ ದಿನಗಳಲ್ಲಿ ಈ ಸೃಜನಶೀಲವಾದ ಚಳುವಳಿ ಮುಂದುವರೆಯಲಿಲ್ಲ. ಅಲ್ಲಿಂದಾಚೆಗೆ ಹುಟ್ಟಿದ ಬಣಗಳು, ಬಣಗಳ ನಾಯಕರು ಇದೆಲ್ಲವನ್ನು ಚರ್ಚಿಸಲು ನನಗೆ ಆಸಕ್ತಿಯಿಲ್ಲ.

ಸ್ವಾತಂತ್ರ್ಯಪೂರ್ವ ಕಾಲದಿಂದ ರೈತ ಪ್ರತಿಭಟನೆಗಳ ಜೊತೆಗೆ ಕಾರ್ಮಿಕ ಚಳುವಳಿಗಳೂ ಸತತವಾಗಿ ನಡೆಯುತ್ತ ಬಂದವು. ಸೈದ್ಧಾಂತಿಕ ಮತ್ತು ಇತರ ಅನೇಕ ಕಾರಣಗಳಿಂದಾಗಿ ಕಾರ್ಮಿಕ-ರೈತ ಎನ್ನುವ ಎರಡು ಭಿನ್ನ ವಲಯಗಳ ಪಡಿಯಚ್ಚು ಕಲ್ಪನೆಯು ಬೆಳೆಯುತ್ತಾ ಬಂದಿತು. ಪ್ರಾಯಶಃ ಟ್ರೇಡ್ ಯೂನಿಯನ್‌ಗಳ ಮೂಲಕ ಕಾರ್ಮಿಕರು ಹೆಚ್ಚು ಸಂಘಟಿತವಾದರು ಮತ್ತು ರೈತ ಸಂಘಟನೆಗಳಿದ್ದರೂ ಈ ಪ್ರಮಾಣದ ಸಂಘಟನೆ ಸಾಧ್ಯವಾಗದೇ ಇದ್ದುದರಿಂದ ಹೀಗಾಗಿರಬಹುದು. ಆದರೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ರೈತ ಸಂಘಟನೆಗಳು ಪ್ರಬಲವಾಗಿ ರಾಷ್ಟ್ರಮಟ್ಟದಲ್ಲಿ ಬೆಳೆದವು. ಈಗಿರುವ ಪ್ರಶ್ನೆಯೆಂದರೆ ಬಂಡವಾಳಶಾಹಿಯು ಚುನಾಯಿತ ಸರಕಾರದ ಮೂಲಕ ಈ ಎರಡು ವಲಯಗಳ ಮೇಲೆ ಬಹು ದೊಡ್ಡ ಪ್ರಹಾರಗಳನ್ನು ಮಾಡಿದೆ. ಕೃಷಿ ಕಾನೂನಿನಷ್ಟೆ ದುಷ್ಟವಾದ ಕಾರ್ಮಿಕ ಕೋಡ್‌ಗಳನ್ನು (Labour Codes) ಜಾರಿಗೆ ತರಲಾಗುತ್ತಿದೆ. ಪ್ರಭುತ್ವವು ರೈತರನ್ನು, ಕಾರ್ಮಿಕರನ್ನು ಸಮಾನ ದ್ವೇಷದಿಂದ ನೋಡುತ್ತಿದೆ. ಇವೆರಡನ್ನೂ ಒಟ್ಟುಗೂಡಿಸುವುದು ಹೇಗೆ? ಬಂಡವಾಳಶಾಹಿಯ ಉದ್ದೇಶ ಒಂದೇ; ರೈತ ಕಾರ್ಮಿಕ

**(೧೧ನೇ ಪುಟಕ್ಕೆ**



ರಾಜ್‌ಕುಮಾರ್ ನೆನಪು

ವಿಶೇಷ ಲೇಖನ-೪

# ರಾಜ್‌ಕುಮಾರ್ ಎಂಬ ಕನ್ನಡ ಸಂಸ್ಕೃತಿಯ ವಿಶಿಷ್ಟ ವಿದ್ಯಮಾನ

-ಗೋವಿಂದರಾಜು ಎಂ. ಕಲ್ಲೂರು

**ಏಪ್ರಿಲ್ ಕನ್ನಡದ ವರನಟ ರಾಜ್‌ಕುಮಾರ್ ಅವರ(೨೪.೪.೧೯೨೯-೧೨,೪,೨೦೦೬) ಹುಟ್ಟುಹಬ್ಬ ಮತ್ತು ಪುಣ್ಯ ತಿಥಿಗಳೆರಡನ್ನೂ ಅವರ ಅಭಿಮಾನಿ ದೇವರುಗಳು ಪ್ರೀತಿ-ಶ್ರದ್ಧೆಗಳಿಂದ ಆಚರಿಸುವ ತಿಂಗಳು. ರಾಜ್‌ಕುಮಾರ್ ಒಬ್ಬ ನಟರಾಗಿ ಕನ್ನಡ ಜನಸ್ತೋಮದಲ್ಲೆ ಪರಿಚಿತರಾದರೂ, ಅವರು ತಮ್ಮ ಅಭಿನಯ ಕ್ಷೇತ್ರವನ್ನೂ ಮೀರಿ ಒಂದು ವಿರಾಟ್ ಮತ್ತು ಬಹುಮುಖ ಸಾಂಸ್ಕೃತಿಕ ವಿಗ್ರಹವೇ ಆಗಿದ್ದು ಆಧುನಿಕ ಕನ್ನಡ ಸಂಸ್ಕೃತಿಯ ಒಂದು ಅಚ್ಚರಿಯೇ ಹೌದು. ಈ ಅಚ್ಚರಿಯನ್ನು ಅರಿಯುವ ಪ್ರಯತ್ನಗಳು ಈಗ ಶೈಕ್ಷಣಿಕ ವಲಯಗಳಲ್ಲೂ ಆರಂಭವಾಗಿ ಅನೇಕ ಅಧ್ಯಯನಗಳು ನಡೆದಿವೆ. ಈ ಇಂತಹ ಸಂದರ್ಭದಲ್ಲಿ 'ಹೊಸ ಮನುಷ್ಯ' ಕೂಡ ಅವರ ನೆನಪಿನಲ್ಲಿ ಈ ಲೇಖನವನ್ನು ಪ್ರಕಟಿಸುತ್ತಿದೆ.-ಸಂ**

ಎರಡು ಹಳೆಯ ನೆನಪುಗಳೊಂದಿಗೆ ಈ ಲೇಖನವನ್ನು ಆರಂಭಿಸುತ್ತೇನೆ.

**ನೆನಪು ಒಂದು :** ಈಗಿನಂತೆ ಬಹುತೇಕರ ಮನೆಗಳಿಗೆ ಟಿ.ವಿ ಬಂದಿರದ ಕಾಲ ಅದು. ನಮ್ಮ ಊರಿನಲ್ಲಿ ಯಾರಾದರೂ ತೀರಿಕೊಂಡರೆ, ಹುಡುಗಿಯರು ಮೈ ನೆರೆದರೆ ಆ ಮನೆಗಳ ಕುಟುಂಬಸ್ಥರು ರಾತ್ರಿ ಪೂರ ಜಾಗರಣೆ ಮಾಡುತ್ತಿದ್ದರು. ಜಾಗರಣೆ ಮಾಡುವ ಜನರಿಗೆ ನಿದ್ದೆ ಬಾರದಿರಲಿ ಎಂದು ಭಜನೆ ಹಾಡುಗಳನ್ನು ಹಾಡುತ್ತಿದ್ದರು. ಕಾಲಾಂತರದಲ್ಲಿ ಈ ಭಜನೆಯ ಜಾಗವನ್ನು ಬಾಡಿಗೆಗೆ ಸಿಗುವ ಟಿ.ವಿ, ವಿಸಿಆರ್‌ಗಳು ಆವರಿಸಿಕೊಂಡವು. ನನ್ನ ಕೇರಿಯ ಹಿರಿಯರು ಬಾಡಿಗೆ ಟಿ.ವಿ, ಡಿವಿಡಿಯನ್ನು ಬೀದಿಯಲ್ಲಿಟ್ಟು ಸಿನಿಮಾಗಳನ್ನು ಹಾಕುತ್ತಿದ್ದರು. ಹೀಗೆ ಟಿ.ವಿ ಹಾಕಿಸಿದಾಗ ಭಜನೆಗೆ ಸೇರುತ್ತಿದ್ದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜನರೂ ಬಂದು ನೆರೆಯುತ್ತಿದ್ದರು. ಇದರಿಂದ ಮುಂದೆ ನನ್ನ ಕೇರಿಯ ಎಲ್ಲಾ ಬಗೆಯ ಜಾಗರಣೆ ಕಾರ್ಯಕ್ರಮಕ್ಕೆ ಅದು ಶಿವರಾತ್ರಿಯೇ ಇರಬಹುದು, ಶಬರಿ ಮಲೆಯ ಯಾತ್ರೆಯ ಜಾಗರಣೆಯೇ ಇರಬಹುದು, ಬಾಡಿಗೆ ಟಿ.ವಿ ಖಾಯಂ ಆಯಿತು.

ಹೀಗೆ ಒಂದು ದಿನ ಒಮ್ಮೆ ನಮ್ಮ ಬೀದಿಯಲ್ಲಿ ಬಾಡಿಗೆ ಟಿ.ವಿ ತಂದು ರಾಜಕುಮಾರರ 'ಭಾಗ್ಯದ ಲಕ್ಷ್ಮೀ ಬಾರಮ್ಮ' (೧೯೮೬) ಸಿನಿಮಾವನ್ನು ಹಾಕಿದ್ದರು. ಆ ಸಿನಿಮಾದ ಕೊನೆಯಲ್ಲಿ ನಾಯಕ-ನಾಯಕಿಯರು 'ಆನಂದ' ಕಂಪನಿಯ ಉತ್ಪನ್ನಗಳ ಜಾಹೀರಾತನ್ನು ನೀಡಬೇಕು. ನಾಯಕಿ ನಾಯಕನಿಗೆ ತಿನ್ನಲು ಇಡ್ಲಿಯನ್ನು ತಂದು ಕೊಡುತ್ತಾಳೆ. ನಾಯಕ ಅದನ್ನು ಎಸೆಯಬೇಕು, ನಂತರ ಉಪ್ಪಿಟ್ಟನ್ನು ತಂದು ಕೊಡುತ್ತಾಳೆ, ನಾಯಕ ಅದನ್ನೂ ಬಿಸಾಡಬೇಕು. ಆಗ ನಾಯಕಿ 'ಆನಂದ ಉಪ್ಪಿನ ಕಾಯಿ'ಯ ರುಚಿಯನ್ನು ಹೇಳುತ್ತಾ ಅದೇ ಇಡ್ಲಿಯ ಜೊತೆಗೆ 'ಆನಂದ ಉಪ್ಪಿನ ಕಾಯಿ' ಹಾಕಿಕೊಂಡು ತಂದು ಕೊಟ್ಟಾಗ ನಾಯಕ ತಿಂಡಿಯನ್ನು ಸ್ವೀಕರಿಸುವಂತೆ ಚಿತ್ರಕಥೆ ಇರುವ ದೃಶ್ಯ ಅದು. ಸಿನಿಮಾದ ನಾಯಕನಾದ ರಾಜಕುಮಾರ್ ಇದೇ ರೀತಿ ಮಾಡುತ್ತಾರೆ. ಈ ದೃಶ್ಯವನ್ನು ನೋಡುತ್ತಿದ್ದ ನಮ್ಮ ವಾರ್ಡ್ ಪಂಚಾಯ್ತಿ ಮೆಂಬರನೂ, ರಾಜಕುಮಾರರ ಅಭಿಮಾನಿಯೂ ಆಗಿದ್ದವನೊಬ್ಬ 'ರಾಜಕುಮಾರ್ ಅನ್ನ ಎಸೀಬಾರದಿತ್ತು' ಅಂದ. ಆ ಮಾತಿಗೆ ಗಂಡಸರು ಹೆಂಗಸರು ಅನ್ನದೇ ಬಹುತೇಕರು ಹೌದು ಎಂದರು. ಕೊನೆಗೊಬ್ಬರು 'ಅಯ್ಯೋ ರಾಜಕುಮಾರ್ ತಾನೇ ಏನ್ ಮಾಡ್ತಾರೆ ಹೇಳಿ ದುಡ್ಡು ಹಾಕಿದೋರು ಹೇಳಿದಂಗೆ ಪಾತ್ರ ಮಾಡ್ಬೇಕು' ಅಂದ್ರೂ ಆ ಅಭಿಮಾನಿ ಸಮಾಧಾನವಾಗಲಿಲ್ಲ. "ಅಣ್ಣಾವ್ರ ಕೈಲಿ ಅನ್ನ ಎಸೆಸಿ ಬಿಟ್ನಲ್ಲ ಆ ಸಿನಿಮಾದೋನು, ಅವನಿಗೆ ಗೊತ್ತಾಗೋಲ್ಲ ಅಂದ್ರೆ ಇವರಿಗೂ ಗೊತ್ತಾಗೋಲ್ವಾ" ಎಂದು ಏನೇನೋ ಹೇಳುತ್ತಿದ್ದ.

ಆತನೇ ಇನ್ನೊಂದು ಸಿನಿಮಾ ಬಗ್ಗೆಯೂ ಮಾತನಾಡಿದ 'ನೀ ನನ್ನ ಗೆಲ್ಲಲಾರೆ' (೧೯೮೧) ಎಂಬ ಸಿನಿಮಾದಲ್ಲಿಯೂ ಕೂಡ ರಾಜಕುಮಾರರ ಕೈಲಿ ಇಂಥದ್ದೇ ಕೆಲಸ ಮಾಡಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ. ಆ ಸಿನಿಮಾದಲ್ಲಿ 'ನನ್ನ ನೀನು ಗೆಲ್ಲಲಾರೆ' ಎಂಬುದೊಂದು ಗೀತೆಯಿದೆ. ನಾಯಕನಿಗೂ ನಾಯಕಿಗೂ ನಡೆವ ಹಾಡು-ನೃತ್ಯದ ಸ್ಪರ್ಧೆಯ ಆ ಗೀತೆಯಲ್ಲಿ ನಾಯಕ ರಾಜಕುಮಾರ್ ಗಂಡಿನ ಹಿರಿಮೆಯನ್ನು, ಸಾಮರ್ಥ್ಯವನ್ನು ಹಾಡಿದರೆ, ನಾಯಕಿ ಮಂಜುಳಾ ಹೆಣ್ಣಿನ ಹಿರಿಮೆಯನ್ನು, ಸಾಮರ್ಥ್ಯವನ್ನು ಹಾಡಾಗಿಸುತ್ತಾರೆ. ಈ ಹಾಡು-ನೃತ್ಯದ ಸ್ಪರ್ಧೆಯಲ್ಲಿ ಇಬ್ಬರೂ ಸಮಬಲ ಸಾಧಿಸುತ್ತಾರೆ. ಆದರೆ ಹಾಡಿನ ಕೊನೆಯಲ್ಲಿ ನೃತ್ಯ-ಸಂಗೀತ ತಾರಕಕ್ಕೇರಿದಾಗ ನಾಯಕ ತನ್ನ ಮೇಲು ಅಂಗಿಗಳನ್ನು ಒಂದೊಂದಾಗಿ ಕಳಚಿ ತಿರುಗಿಸಿ ಎಸೆದು ಅರೆಬೆತ್ತಲಾಗಿ ನಿಲ್ಲುತ್ತಾನೆ. ಜನರ ಎದುರಿಗೆ ನಾಯಕನಂತೆ ತಾನೂ ಮೇಲು ಉಡುಪುಗಳನ್ನು ಬಿಚ್ಚಿ ಎಸೆಯಲು ನಾಯಕಿಗೆ ಸಾಧ್ಯವಾಗುವುದಿಲ್ಲ. ಹೀಗೆ ಹಾಡು-ನೃತ್ಯದ ಸ್ಪರ್ಧೆಯಲ್ಲಿ ರಾಜಕುಮಾರ್ ಗೆಲ್ಲುತ್ತಾರೆ. "ರಾಜಕುಮಾರ್ ಕೈಲಿ ಇಂತಹ ಪಾತ್ರವನ್ನು ಮಾಡಿಸಬಾರದಿತ್ತು. ಇವೆರಡೂ ಅವರ ಗೌರವಕ್ಕೆ ಕುಂದು ತರುವಂತವು" ಎಂದು ಮರುಗಿದ. ರಾಜಕುಮಾರ್ ತನ್ನ ಆರಾಧ್ಯದೈವವೆಂದು ಹೆಮ್ಮೆಯಿಂದ ಹೇಳಿಕೊಂಡು ಓಡಾಡುತ್ತಿದ್ದರೂ ಆ ತನ್ನ ದೈವದ ಬಗ್ಗೆ ಇಷ್ಟು ವಿಮರ್ಶಾತ್ಮಕವಾದ ಟೀಕೆ-ಟಿಪ್ಪಣಿಯನ್ನು ಮಾಡಿದ್ದ ಅಭಿಮಾನಿಯನ್ನು ನಾನು ಕಂಡದ್ದು ಅದೇ ಮೊದಲು. ಇಂಥ ವಿಮರ್ಶೆಯೂ ನನಗೆ ಹೊಸದು.





ಬೇಡರ ಕಣ್ಣಪ್ಪ ರಣಧೀರ ಕಂಠೀರವ ಭಕ್ತ ಪ್ರಹ್ಲಾಧ (ಹಿರಣ್ಯಕಶಿಪು)

ರಾಜಕುಮಾರರ ವರ್ಚಸ್ಸಿಗೆ ಒಂದಿನಿತು ಧಕ್ಕೆಯಾದರೂ ಕಳವಳಗೊಂಡು, ಪರಿತಪಿಸುತ್ತ 'ನಮ್ಮ ನಾಯಕ ಇಂಥದ್ದೇ ಪಾತ್ರವನ್ನು ಹೀಗೆಯೇ ಮಾಡಬೇಕು' ಎಂದು ಆತ ನಿರೀಕ್ಷೆಮಾಡುತ್ತಿದ್ದ. ಇದು 'ಅಭಿಮಾನಿಯಾದ ನನ್ನ ಹಕ್ಕು' ಎಂದೂ ಹೇಳುತ್ತಿದ್ದ.

**ನೆನಪು ಎರಡು :** ರಾಜಕುಮಾರ್ ಕೇವಲ ಮೂರನೇ ತರಗತಿಯವರೆಗೆ ಓದಿ ನಾಡೋಜನಾದದ್ದು, ಡಾಕ್ಟರೇಟ್ ಪದವಿ ಪಡೆದದ್ದು ಕೇಳುವಾಗ ರಾಜಕುಮಾರ್ ಎಂಬ ಹೆಸರು ಇಂತಹ ಅದೆಷ್ಟು ಸೋಜಿಗಗಳನ್ನು ತನ್ನ ಹೆಸರಿಗೆ ಬರೆದುಕೊಂಡಿದೆ ಎನಿಸುತ್ತದೆ. ಪ್ರಾಥಮಿಕ ಶಾಲೆಯಲ್ಲಿ ನನ್ನ ಸಹಪಾಠಿಯಾಗಿದ್ದ ಜಮೀಲ್ ಬಾಷಾನಿಗೆ ಅಷ್ಟೇನು ಸರಿಯಾದ ಕನ್ನಡ ಉಚ್ಚಾರಣೆ ಇರಲಿಲ್ಲ. ಅವನ ಕನ್ನಡವನ್ನು ಕಂಡು ಶಾಲೆಯ ಹುಡುಗರಾದ ನಾವೆಲ್ಲ ನಗುತ್ತಿದ್ದೆವು. ಅವನಂತೆಯೇ ಉರ್ದು ಧಾಟಿಯಲ್ಲಿ ಕನ್ನಡ ಮಾತಾಡಿ ಅವನಿಗೆ ಮುಜುಗರ ಮಾಡುತ್ತಿದ್ದೆವು. ನಮ್ಮೆಲ್ಲರ ಈ ಕೀಟಲೆಯು ಜಮೀಲನ ತಂದೆಗೂ ತಿಳಿದು ಮಗನ ಕನ್ನಡ ಭಾಷೆಯನ್ನು ಸುಧಾರಿಸಲೇಬೇಕೆಂದು ಹಠ ತೊಟ್ಟ ಅವರು ಯಾರದೋ ಸಲಹೆಯ ಮೇರೆಗೆ ಒಂದು ಉಪಾಯ ಮಾಡಿದ್ದರು. ಮಗನಿಗೆಂದೇ ರಾಜಕುಮಾರರ ಸಿನಿಮಾಗಳ ಕ್ಯಾಸೆಟ್‌ಗಳನ್ನು ಮನೆಗೆ ತಂದಿದ್ದ ಅವರು, ರಾಜಕುಮಾರರ ಸಿನಿಮಾಗಳನ್ನು ನೋಡುವ ಮತ್ತು ಅವರ ಹಾಗೇ ಮಾತನಾಡಲು ಅನುಕರಿಸುವ ಕನ್ನಡ ಭಾಷಾ ಟ್ಯುಟೋರಿಯಲ್ ಅನ್ನು ಮನೆಯೊಳಗೇ ಆರಂಭಿಸಿದ್ದರು. ಜಮೀಲನ ಕನ್ನಡ ಭಾಷೆಯನ್ನು ತಿದ್ದಲಾಗದು ಎಂದು ಸರಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರೇ ಕೈಬಿಟ್ಟಿದ್ದರೂ; ಜಮೀಲನ ಅಪ್ಪ ರಾಜಕುವಾರ್ ಎಂಬ ಪರದೆಯಲ್ಲಷ್ಟೇ ಗೋಚರವಾಗುವ ಗುರುವನ್ನು ತನ್ನ ಮಗನಿಗೆ ಕನ್ನಡ ಮೇಷ್ಟ್ರನ್ನಾಗಿಸಿದ್ದರು. ಜಮೀಲನ ಕನ್ನಡವೂ ಪರವಾಗಿಲ್ಲ ಎಂಬಷ್ಟು ಚೇತರಿಸಿಕೊಂಡಿತು.

ಕನ್ನಡ ಭಾಷೆಯ ನಾಡಿ ಹಿಡಿದು ಮಾತನಾಡುತ್ತಿದ್ದ ರಾಜಕುಮಾರ್ ೨೦ನೇ ಶತಮಾನದ ಅದೆಷ್ಟು ಜನರಿಗೆ ಕನ್ನಡದ ಮೇಷ್ಟ್ರಾಗಿದ್ದರೋ..! ಕೇವಲ ಕನ್ನಡ ಭಾಷೆ ಅಷ್ಟೇ ಅಲ್ಲ. ಯಾವ ಭಾಷೆಯ ಉಚ್ಚಾರಣೆಯನ್ನೂ ರಾಜಕುಮಾರ್ ಕೆಡಿಸಲಿಲ್ಲ-ಅಣಕಿಸಲಿಲ್ಲ. 'ಎರಡು ಕನಸು' ಸಿನಿಮಾದಲ್ಲಿ ರಾಜಕುಮಾರ್ ಮಾತನಾಡುವ ಇಂಗ್ಲೀಷ್ ಆಗಲಿ, 'ಕವಿರತ್ನ ಕಾಳಿದಾಸ' ಸಿನಿಮಾದಲ್ಲಿ ಹೇಳುವ ಸಂಸ್ಕೃತ ಶ್ಲೋಕಗಳಾಗಲಿ, ರಾಜಕುಮಾರರ ಬಾಯಿಯಲ್ಲಿ ಕನ್ನಡಕ್ಕೆ ದಕ್ಕುವ ಸಮಾನ ಗೌರವವೇ ಅವುಗಳಿಗೂ ಸಿಗುತ್ತಿತ್ತು. ಅಪಸ್ವರ-ಅಪಭ್ರಂಶಗಳಿಲ್ಲದ ಭಾಷಾ ಬಳಕೆಯೇ ರಾಜಕುಮಾರ್‌ರನ್ನು ನಾಡು-ನುಡಿಯ ರೂಪಕವಾಗಿಸಿತು.

ರಾಜಕುಮಾರರ ಸಿನಿಮಾಗಳು ಕನ್ನಡದ ಜನರನ್ನು ಅದೇಕೆ ಇಷ್ಟೊಂದು ಪ್ರಭಾವಿಸಿದವು, ೨೦ನೇ ಶತಮಾನದ ಎಲ್ಲ ಕವಿ, ಸಾಹಿತಿ, ಚಳುವಳಿಕಾರರು, ರಾಜಕೀಯ ನಾಯಕರು, ಕಲಾವಿದರುಗಳಿಗಿಂತ ರಾಜಕುಮಾರ್ ಕರ್ನಾಟಕವನ್ನು ವ್ಯಾಪಕವಾಗಿ ತುಂಬಿಕೊಳ್ಳಲು ಕಾರಣವಾದದ್ದಾದರೂ ಏನು ಎಂದು ಯಾರಿಗಾದರೂ ಆಶ್ಚರ್ಯವಾಗದಿರದು. ಯಂತ್ರ ನಾಗರೀಕತೆಯ ಉತ್ಪನ್ನವಾದ ಸಿನಿಮಾ ಬಗ್ಗೆ ಜನರು ಹೊಂದಿದ ಆಕರ್ಷಣೆ, ಕುತೂಹಲ ಮತ್ತು ರಾಜಕುಮಾರ್ ಎಂಬ ಅಪೂರ್ವ ಕಲಾವಿದನ ಪ್ರತಿಭೆ ಎರಡೂ ಮೇಳೈಸಿ ರಾಜಕುಮಾರರನ್ನು ಕನ್ನಡಿಗರ ಮಧ್ಯೆ ಇಪ್ಪತ್ತನೆಯ ಶತಮಾನದ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿಸಿದವು ಎನ್ನಬಹುದು. ಬಹುಶಃ ಸಿನಿಮಾ ಎಂಬ





ಬಂಗಾರದ ಮನುಷ್ಯ ಜೀವನ ಚೈತ್ರ

ಮಾಧ್ಯಮ ಇರದೇ ಹೋಗಿದ್ದರೆ ಕನ್ನಡ-ಕರ್ನಾಟಕದ ಮೇಲೆ ರಾಜಕುಮಾರರ ಪ್ರಭಾವ ನಾವು ಈಗ ಕಾಣುತ್ತಿರುವ ಮಟ್ಟಿಗೆ ಇಲ್ಲದೇ ಹೋಗುತ್ತಿತ್ತೇನೋ.! ರಾಜಕುಮಾರರಿಗೆ ಸಿನಿಮಾ ಮಾಧ್ಯಮದ ಮೂಲಕ ದಕ್ಕಿದ ವೈವಿಧ್ಯಮಯ ಸಿನಿಕಥೆಗಳು ಅವರನ್ನು ಕರ್ನಾಟಕದ ತುಂಬ ಆವರಿಸುವಂತೆ ಮಾಡಿದವು.

ರಾಜಕುಮಾರರ ಸಿನಿಮಾಗಳನ್ನು ಸಮಗ್ರವಾಗಿ ಗ್ರಹಿಸುವಾಗ ಅವರ ಸಿನಿಮಾಗಳಲ್ಲಿ ಮುಖ್ಯವಾಗಿ ಕಂಡುಬರುವ ಒಟ್ಟು ಲಕ್ಷಣಗಳನ್ನು ಹೀಗೆ ಗುರುತಿಸಬಹುದು. ರಾಜಕುಮಾರರ ಸಿನಿಮಾಗಳು ಕನ್ನಡ ನಾಡು-ನುಡಿಯ ಚರಿತ್ರೆಯ ಮರುನಿರೂಪಣೆಯನ್ನು ಮಾಡಿದವು. ಮಡಿ-ಮೈಲಿಗೆಯ ಚೌಕಟ್ಟಿನಿಂದ ಭಕ್ತಿಯನ್ನು-ದೈವವನ್ನು ಬಿಡಿಸಿ ಭಕ್ತಿಯನ್ನು ಸಾರ್ವಜನಿಕಗೊಳಿಸಿದ್ದು, ಭಾರತೀಯ ಮತ್ತು ಕರ್ನಾಟಕದ ಸಂತ-ಶರಣ ಪರಂಪರೆಯನ್ನು ಪರದೆಯ ಮೇಲೆ ತಂದು ಸಾಂಸಾರಿಕ ಮತ್ತು ಮಾನವೀಯ ಮೌಲ್ಯಗಳ ರಾಯಭಾರಿಯಾದದ್ದು, ಅಸಂಘಟಿತ ವಲಯದ ಕಾರ್ಮಿಕರ, ಕೂಲಿಕಾರರ ಕಷ್ಟಕಾರ್ಪಣ್ಯವನ್ನು ಮಧ್ಯಮವರ್ಗದ ಜನರ ನಡುವೆ ಬಿಡಿಸಿ, ಬಿಡಿಸಿ ತೋರಿಸಿದ್ದು, ಹಳ್ಳಿ ಮತ್ತು ಪೇಟೆಯ ಜನರಿಗೆ ಕೃಷಿಯ ಮಹತ್ವವನ್ನು ತನ್ನ ಸಿನಿಮಾಗಳ ಮೂಲಕ ಎತ್ತಿ ತೋರಿಸಿದ್ದು, ಕುಂಬಾರ, ಸ್ಲಂವಾಸಿ, ರೈತ, ಶಹನಾಯಿ ವಾದಕ, ಕಮ್ಮಾರ, ಕುರಿಗಾಹಿ, ಕಾವಲುಗಾರ ಮುಂತಾದ ಶ್ರಮಿಕ ವರ್ಗದ ಜನರನ್ನು ತನ್ನ ಸಿನಿಮಾಗಳ ಮೂಲಕ ಪ್ರತಿನಿಧಿಸಿದ್ದು, ಮಾದಕ ವ್ಯಸನ, ಹೆಣ್ಣು ಮಕ್ಕಳ ಮಾರಾಟದಂತಹ ಸಮಸ್ಯೆಯನ್ನು ಕುರಿತು ತನ್ನ ಸಿನಿಮಾಗಳ ಮೂಲಕ ಜಾಗೃತಿ ಉಂಟುಮಾಡಿದ್ದು, ಕುಟುಂಬ ವಿಘಟನೆಯ ಸಂಕಟಗಳನ್ನು ಸಿನಿಮಾದಲ್ಲಿ ಬಿಂಬಿಸಿದ್ದು, ಕಿವುಡರು, ಮೂಗರು ಮುಂತಾದ ಅಂಗವಿಕಲರ ಸಮಸ್ಯೆಯನ್ನು ಕುರಿತ ಸಿನಿಮಾಗಳಲ್ಲಿ ನಟಿಸಿದ್ದು, ಜಾತಿ ವ್ಯವಸ್ಥೆ, ಪೊಲೀಸ್, ಕಾನೂನು ಮತ್ತು ಕುಟಿಲ ರಾಜಕೀಯವನ್ನು ವಿಮರ್ಶೆಗೆ ಒಳಪಡಿಸಿದ್ದು, ಗೋಕಾಕ್ ಚಳವಳಿ ಮತ್ತು ಉತ್ತರ ಕರ್ನಾಟಕದ ಬರಗಾಲದಲ್ಲಿ ಜನರ ಪರವಾಗಿ ನಿಂತದ್ದು, ನಟ ಮತ್ತು ಅಭಿಮಾನಿಗಳ ನಡುವೆ ಭಾವನಾತ್ಮಕ ಸಂಬಂಧವೊಂದನ್ನು ಬೆಸೆದುಕೊಂಡದ್ದು, ವಿನಯ ಮತ್ತು ಆದರ್ಶಗಳನ್ನು ಸಿನಿಮಾದಲ್ಲೂ ಜೀವನದಲ್ಲೂ ಅಭೇದವೆಂಬಂತೆ ಪಾಲಿಸಿಕೊಂಡು ಬಂದದ್ದು.

ಹೆಚ್. ಎಸ್ ರಾಘವೇಂದ್ರ ರಾವ್ ತಮ್ಮ 'ನಿಜವು ತೋರದಲ್ಲ' ಪುಸ್ತಕದಲ್ಲಿ ರಾಜಕುಮಾರರ ಸಿನಿಮಾಗಳಲ್ಲಿ 'ವೀರಾವೇಶಕ್ಕಿಂತ ವಿವೇಕವೇ ಹೆಚ್ಚಿದೆ' ಎನ್ನುತ್ತಾರೆ. ಇದು ಆಳವಾದ ಒಳನೋಟದ ಮಾತೂ ಹೌದು. ಈ ಲೋಕವನ್ನು ಮೊದಲಿನಿಂದಲೂ ಘಾಸಿಗೊಳಿಸುತ್ತಲೇ ಬರುತ್ತಿರುವ ಹಿಂಸೆ ಮತ್ತು ಯುದ್ಧವನ್ನು ಕುರಿತು ರಾಜಕುಮಾರರ ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ಸಿನಿಮಾಗಳಲ್ಲಿ ಮೂಡಿದ ಅಭಿಪ್ರಾಯಗಳನ್ನು ಗಮನಿಸುವುದಾದರೆ ರಾಜಕುಮಾರ್ ತನ್ನ ಸಿನಿಮಾಗಳಲ್ಲಿ ಖಳನಾಯಕನನ್ನು ಕೊಂದು ಆರ್ಭಟಿಸಿದ್ದಕ್ಕಿಂತ ಖಳನಾಯಕನ ವರ್ತನೆಯನ್ನು ಬದಲಾಯಿಸಿ ಅಪ್ಪಿಕೊಂಡಿದ್ದೇ ಹೆಚ್ಚು. ಸಿನಿಮಾಗಳ ಚರಿತ್ರೆಯಲ್ಲಿ ಖಳನಾಯಕನನ್ನು ಕೊಲ್ಲುವುದು, ಶಿಕ್ಷಿಸುವುದು ಮಹತ್ವದ ಘಟ್ಟವಾದರೂ ರಾಜಕುಮಾರರ ಸಿನಿಮಾಗಳಲ್ಲಿ ಬಹುಪಾಲು ಖಳನಾಯಕರ ಮನಃ ಪರಿವರ್ತನೆ ಮಾಡಲು ಪ್ರಯತ್ನಿಸಲಾಗಿದೆ. ಇದು ನಮ್ಮ ಆರಂಭಿಕ ನವೋದಯ ಸಮಾಜದಲ್ಲಿ ಆಳವಾಗಿ ನೆಲೆಯೂರಿದ ಗಾಂಧೀ ಮನೋಧರ್ಮವನ್ನು ಪ್ರತಿಬಿಂಬಿಸುವಂತಿದೆ. ಶಿಕ್ಷೆ ಅಪರಾಧಕ್ಕೇ ಹೊರತು ಅಪರಾಧಿಗಲ್ಲ ಎಂಬ ಗಾಂಧೀ ಚಿಂತನೆ ಕಥನ ರೂಪದಲ್ಲಿ ಅಂಗಾಂಗಗಳನ್ನು ಪಡೆದದ್ದು ರಾಜ್‌ಕುಮಾರ್ ಸಿನಿಮಾದಲ್ಲೇ.

'ಸಾಕ್ಷಾತ್ಕಾರ' ಸಿನಿಮಾದಲ್ಲಿ ಬರುವ "ಮದ್ದು ಗುಂಡು ಬಾಂಬುಗಳನ್ನು ಇಟ್ಟುಕೊಂಡು ದೇಶ ಆಳೋದು ಮಾಟ-ಮಂತ್ರ ಮಾಡಿ ಮನುಷ್ಯರನ್ನು ಗೆಲ್ಲೋದು, ಕೊಲ್ಲೋದು ಯಾವತ್ತೂ ಸಾಧ್ಯವಿಲ್ಲ." ಎನ್ನುವ ಸಂಭಾಷಣೆಯೇ ಆಗಲಿ ಮತ್ತು 'ಕಿತ್ತೂರ ಚೆನ್ನಮ್ಮ' ಸಿನಿಮಾದಲ್ಲಿ ಮಲ್ಲಸರ್ಜನು ತನ್ನ ಬದುಕಿನುದ್ದಕ್ಕೂ ನಡೆದ ಯುದ್ಧಗಳಿಂದ ಸಂಭವಿಸಿದ ಕೊಲೆ-ರಕ್ತಪಾತಗಳ ಕುರಿತು "ಕತ್ತಿ ಹಿಡಿಯದೇ ರಾಜ್ಯವಾಳಬೇಕೆಂದು ನನ್ನಾಸೆ. ಆದರೆ ಅದೇನು ದುರದೃಷ್ಟವೋ ಕಾಣೆ ನನ್ನ ಆಳ್ವಿಕೆಯೆಲ್ಲಾ ಯುದ್ಧ, ರಕ್ತಪಾತ, ನೋವು, ಕಣ್ಣೀರುಗಳಿಂದಲೇ ತುಂಬಿ ಹೋಯಿತು. ಕಣ್ಣು ಹೊರಳಿದತ್ತ ಕೊಲೆಗೆ ಕಾರಣವಾಗುವ ಈ ಕತ್ತಿಗೆ ಕೆಲಕಾಲವಾದರೂ ವಿಶ್ರಾಂತಿ ಕೊಡಬೇಕೆಂಬುದು ನನ್ನ ಬಯಕೆ." ಎನ್ನುವ ಸಂಭಾಷಣೆ ಹಾಗೆಯೇ ರಣಧೀರ ಕಂಠೀರವ, ಬಬ್ರುವಾಹನ, ಇಮ್ಮಡಿ ಪುಲಿಕೇಶಿ ಮುಂತಾದ ಸಿನಿಮಾಗಳಲ್ಲೂ ಕಂಡುಬರುವ ಹಿಂಸೆ-ಯುದ್ಧ ವಿರೋಧಿ ನಿಲುವುಗಳು ದಯೆ ಮತ್ತು ಕರುಣೆಯನ್ನು ಜನರಲ್ಲಿ ಹಂಚುವ ಕೆಲಸ ಮಾಡಿವೆ.

ರಾಜಕುಮಾರರ ಸಿನಿಮಾಗಳ ಬಗ್ಗೆ ಬರೆಯುವಾಗ, ಮಾತನಾಡುವಾಗ ಅವರ ಸಿನಿಮಾಗಳು ಕಟ್ಟಿದ ಕುಟುಂಬ ಪ್ರೀತಿಯನ್ನು ಸ್ಮರಿಸಲೇಬೇಕಾಗುತ್ತದೆ. ಜನರ ಕೂಡು ಕುಟುಂಬದ ಬದುಕು, ಪರಸ್ಪರ ಸಹಕಾರ, ಪ್ರೀತಿಯಿಂದ ದ್ವೇಷವನ್ನು ಗೆಲ್ಲಬಲ್ಲ ಮನೋಪರಿವರ್ತಕ ಗುಣ, ಜನರ ಹೃದಯದಲ್ಲಿ ಸಹಜವಾಗಿರುವ ಕರುಣೆ-ತ್ಯಾಗ-ಮೈತ್ರಿ ಇತ್ಯಾದಿ ಗುಣಗಳನ್ನು ತನ್ನೊಡಲಲ್ಲಿಟ್ಟುಕೊಂಡಿರುತ್ತಿದ್ದ ರಾಜ್ ಸಿನಿಮಾಗಳು ಒಂದು ಕುಟುಂಬದಲ್ಲಿ ಪ್ರೀತಿ ಹೇಗಿರಬೇಕು, "ತಂದೆಯೆಂದರೆ ಹೇಗಿರಬೇಕು, ಅಣ್ಣ ಎಂದರೆ ಹೇಗಿರಬೇಕು, ಭಕ್ತ ಎಂದರೆ ಹೇಗಿರಬೇಕು, ಗಂಡ ಎಂದರೆ ಹೇಗಿರಬೇಕು, ಪ್ರೇಮಿ ಎಂದರೆ ಹೇಗಿರಬೇಕು, ದೊರೆ ಎಂದರೆ ಹೇಗಿರಬೇಕು, ದೇವರು-ರಾಕ್ಷಸರು ಹೇಗಿದ್ದರು ಎಂಬ ಆದರ್ಶಗಳ ಅಚ್ಚನ್ನು ನಿರ್ಮಿಸಿಕೊಟ್ಟವು," (ಡಿ.ಎಸ್ ನಾಗಭೂಷಣ, ರಾಜ್ ಕುಮಾರ್ ಪುರಾಣ) ಕರ್ನಾಟಕದ ಜನರ ಅಭಿರುಚಿಗಳಿಗೆ ಆದರ್ಶವನ್ನೂ, ಕನಸುಗಳನ್ನೂ ಬೆಸೆದವು.

"ರಾಜ್‌ಕುಮಾರ್ ತಮ್ಮ ಕೆಲಸದ ಮೂಲಕ ಕರ್ನಾಟಕ ಅನ್ನೋದು ಹೀಗಿರಬೇಕು, ಕನ್ನಡ ಸಮಾಜ ಅನ್ನೋದು ಹೀಗಿರಬೇಕು ಅಂತ ಒಂದು ಇಮೇಜನ್ನು ಕಟ್ಟೋಕೆ ಹೊರಟರು"(ಹೆಚ್. ಎಸ್ ರಾಘವೇಂದ್ರರಾವ್, ನಿಜವು ತೋರದಲ್ಲ) ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ. ರಾಜಕುಮಾರರ ಸಿನಿಮಾವೇ ಒಂದು ಕೂಡು ಕುಟುಂಬದಂತೆ ಕಾಣುತ್ತದೆ. ನರಸಿಂಹರಾಜು, ಬಾಲಕೃಷ್ಣ, ಲೀಲಾವತಿ, ಉದಯ್ ಶಂಕರ್, ಎಂ.ಪಿ ಶಂಕರ್, ವಜ್ರಮುನಿ, ಸರೋಜಾದೇವಿ ಮುಂತಾದ ತಾರಾಂಗಣ ಹೆಚ್ಚೂ ಕಡಿಮೆ ಪ್ರತಿ ಚಿತ್ರದಲ್ಲಿ ಇರುವುದನ್ನು ಗಮನಿಸಬಹುದು. 'ಬಂಗಾರದ ಮನುಷ್ಯ', 'ಒಡಹುಟ್ಟಿದವರು', 'ಭೂದಾನ', 'ಚಂದವಳ್ಳಿಯ ತೋಟ' ಇತ್ಯಾದಿ ಸಿನಿಮಾಗಳು ಕುಟುಂಬ ವಿಭಜನೆಯಿಂದ ಉಂಟಾಗುವ ಭಾವನಾತ್ಮಕ ತಾಕಲಾಟವನ್ನು ಹಿಡಿದಿಡಲು ಪ್ರಯತ್ನಿಸಿದವು. ಇಂಥಾ ಸಿನಿಮಾಗಳು ಕನ್ನಡ ನೆಲದಲ್ಲಿ ಕುಟುಂಬಗಳ ನಡುವೆ ಇದ್ದ ವೈಮನಸ್ಸನ್ನು ಕಡಿಮೆ ಮಾಡಿ ಕುಟುಂಬದ ಸದಸ್ಯರಲ್ಲಿ ಪರಸ್ಪರ ಪ್ರೀತಿ, ಸಹಬಾಳ್ವೆ, ಹೊಂದಾಣಿಕೆ ಇರುವಂತೆಯೂ ಮಾಡಿದವು. ಹಾಗೆಂದು ರಾಜಕುಮಾರ್ ತಮ್ಮ ಜೀವನದುದ್ದಕ್ಕೂ ಆದರ್ಶಮಯವಾದ, ನೈತಿಕಮಾದರಿಗಳನ್ನು ಬಿತ್ತರಿಸುವ ಸಿನಿಮಾಗಳಲ್ಲಿ ಮಾತ್ರ ನಟಿಸಿದರು ಎಂದೇನಿಲ್ಲ. ಅವರ ಅಭಿನಯದ ಚೂರಿ ಚಿಕ್ಕಣ್ಣ, ಭಾಗ್ಯದ ಬಾಗಿಲು, ಕಿಲಾಡಿ ರಂಗ, ಬೀದಿ ಬಸವಣ್ಣ ಮುಂತಾದ ಸಿನಿಮಾಗಳು ವ್ಯಾವಹಾರಿಕ ದೃಷ್ಟಿಯಲ್ಲಿ ಮನರಂಜನೆಗಷ್ಟೇ ಸೀಮಿತವಾದದ್ದನ್ನೂ ಕಾಣಬಹುದು.

ಸಿನಿಮಾ ಬದುಕು ಮಾತ್ರವಲ್ಲದೆ ರಾಜಕುಮಾರ್ ಅವರ ವೈಯಕ್ತಿಕ ಬದುಕಿನ ಉತ್ತರಾರ್ಧದ ದಿನಗಳೂ ಬಹಳ ಮುಖ್ಯವಾದವುಗಳು. ಅವರನ್ನು ವೀರಪ್ಪನ್ ಅಪಹರಿಸಿದ್ದು, ಅವನ ಮನಃಪರಿವರ್ತನೆಗೂ ಅವರು ಪ್ರಯತ್ನಿಸಿದ್ದು, ವೀರಪ್ಪನ್‌ಗೂ ಯೋಗ ಕಲಿಸಿದ್ದು, ಹಾಗೆಯೇ ಯಾವ ಪ್ರಾಣಾಪಾಯವೂ ಇಲ್ಲದೆ ಆತನ ಕೈಸೆರೆಯಿಂದ ಹಿಂದಿರುಗಿದ ಈ ಘಟನೆ ನಿಜಕ್ಕೂ ಒಂದು ಹಿರಿದಾದ ಅರ್ಥದಲ್ಲಿ ಆಧುನಿಕ ಕಾಲದ ಪುಣ್ಯಕೋಟಿಯ ಕಥೆಯೇ ಸರಿ. ಕನ್ನಡ ಜನಮಾನಸದಲ್ಲಿ ಅತ್ಯಂತ ಜನಪ್ರಿಯವಾಗಿರುವ 'ಪುಣ್ಯ ಕೋಟಿ'ಯ ಕಥೆಯ ಆಧುನಿಕ ಅವತರಣಿಕೆಯಾಗಿ ಈ ಘಟನೆಯನ್ನು ನೋಡಿದರೆ ರಾಜಕುಮಾರ್ ಒಬ್ಬ ಜನಪದ ವ್ಯಕ್ತಿಯಾಗಿಯಷ್ಟೇ ಅಲ್ಲ ಒಬ್ಬ ಸಾಂಸ್ಕೃತಿಕ ನಾಯಕನಂತೆಯೂ ಕಂಡುಬರುತ್ತಾರೆ.

ಪುರಾಣ-ಚರಿತ್ರೆಯ ಪಾತ್ರಗಳನ್ನು ಮೈದುಂಬಿ ಅಭಿನಯಿಸುತ್ತಿದ್ದ ರಾಜಕುಮಾರ್ ತಮ್ಮ ಬದುಕಲ್ಲೂ ವನವಾಸ ಅನುಭವಿಸಿದ್ದರಿಂದ ಬದುಕಿರುವಾಗಲೇ ನಿಧಾನವಾಗಿ ದಂತಕತೆಯಾಗಿ ರೂಪುಗೊಂಡದ್ದು ಮತ್ತು ಶೈಕ್ಷಣಿಕವಾಗಿ ಅಷ್ಟೇನೂ ಓದಿನ ಬಲವಿಲ್ಲದ, ಆಧುನಿಕ ಜಗತ್ತಿನ ಅನೇಕ ಸಂಗತಿಗಳ ಪರಿಚಯವೂ ಇಲ್ಲದ ವ್ಯಕ್ತಿ ತನ್ನ ಅಭಿನಯ-ಗಾಯನ ಹಾಗೂ ಸರಳ ವ್ಯಕ್ತಿತ್ವದಿಂದ ಕರ್ನಾಟಕದ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿ ಬದುಕಿ ಈಗ ತನ್ನ ಸಮಾಧಿಯಿಂದಲೂ ಜನರನ್ನು ಆಕರ್ಷಿಸುವ, ಅವರಿಗೆ ತಂಪೆರೆವ ಒಂದು ಶಕ್ತಿಯಾಗಿ ಬೆಳೆದಿರುವುದು ನಿಜಕ್ಕೂ ಆಳವಾದ ಅಧ್ಯಯನಕ್ಕೆ ಯೋಗ್ಯವಾಗಿರುವ ವಿಚಾರವೇ ಹೌದು.




**(ಲೇಖಕರು ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ 'ನಾಡುನುಡಿಯ ರೂಪಕ : ಡಾ ರಾಜಕುಮಾರ್ ಸಿನಿಮಾ' ಕುರಿತಂತೆ ಅಧ್ಯಯನ ನಡೆಸುತ್ತಿದ್ದಾರೆ**

---

**೯ನೇ ಪುಟದಿಂದ)**

ಕ ಪ್ರತಿರೋಧದ ಉದ್ದೇಶಗಳೂ ಒಂದೇ. ಹಾಗಿರುವಾಗ ಏಕಕಾಲಕ್ಕೆ ನಡೆಯುತ್ತಿರುವ ಈ ಪ್ರತಿರೋಧಗಳು ಒಂದು ವೇದಿಕೆಯ ಅಡಿಯಲ್ಲಿ ಯಾಕೆ ನಡೆಯುತ್ತಿಲ್ಲ? ಸಮಾಜವಾದವು ತನ್ನ ಮೂಲ ಆಶಯದಲ್ಲಿ ಇಂಥ ಇಬ್ಭಾಗೀಕರಣವನ್ನು ಎಂದೂ ಒಪ್ಪಿಲ್ಲ. ಪ್ರತಿರೋಧದ ಶಕ್ತಿಗಳನ್ನು ಒಗ್ಗೂಡಿಸಿ, ಈ ವಿಭಾಗೀಕರಣವನ್ನು ಇಲ್ಲವಾಗಿಸುವುದು ಇಂದಿನ ಪ್ರಮುಖ ಸವಾಲಾಗಿದೆಯಲ್ಲವೆ?




(ನಿವೃತ್ತ ಇಂಗ್ಲಿಷ ಪ್ರಾಧ್ಯಾಪಕರಾಗಿರುವ ಲೇಖಕರು ನಮ್ಮ ನಡುವಿನ ಖ್ಯಾತ ರಾಜಕೀಯ ಚಿಂತಕರೂ ಹೌದು)

ಕಥೆ

# ದಾನ

-ಸೋಮು ಹಿರೇಮಠ



ಚಿತ್ರ: ಗುಜ್ಜಾರ್

ಅಯ್ಯ ಸುಡ್ಲಿ ! ಇದೇನಿದು ಮೂರು ಸಂಜಿ ಹೊತ್ತಿನಾಗ ಮನ್ಯಾಗ ದೀಪಾಸ್ ಇಲ್ದ ಕತ್ತಲಾ ಮಾಡ್ಕೊಂಡು ಹಿಂಗ್ಯಾಕ ಕುಂತಾರಿವರು? " ಅನ್ನುತ್ತಾ ಒಳಗೆ ಬಂದ ರಾಧಾಬಾಯಿ ಗಂಡ ಕತ್ತಲಲ್ಲಿ ಪಡಸಾಲಿ ನಡುವ ತಲೆಗೆ ಕೈ ಹಚ್ಚಿ ಕೂತದ್ದನ್ನು ಕಂಡು ಗಾಬರಿಯಾದ್ರು. ದೀಪ ಹಾಕುತ್ತಾ " ರ್‍ರೀ ಯಾಕ್ರೀ ಏನಾತು? " ಎಂದು ಗಂಡನ ಮುಂದೆ ಕುಳಿತು ಪ್ರಶ್ನಿಸಿದರು. ಶಾಮಾಚಾರ್ರು ಏನೂ ಮಾತನಾಡದೆ "ಹೂಂ!" ಎಂದು ನಿಡಿದಾದ ಉಸಿರೊಂದನ್ನು ಹೊರಚೆಲ್ಲಿದರು.

ತಾವು ಇಷ್ಟೊಂದು ಮಾತನಾಡಿಸಿದರೂ ಯಜಮಾನ್ರು ನಿರ್ವಿಣ್ಣರಾಗಿ ಕುಳಿತಿರುವದನ್ನು ಕಂಡು "ಅಲ್ರೀ ಮ್ಯಾನೇಜರು ಕರೆದ್ರು ಅಂತ ಮಠಕ್ಕ ಹೋಗಿದ್ರಲ್ಲಾ, ಅಂಥಾದ್ದು ಏನು ನಡೀತು ಅಲ್ಲೇ?" ಎಂದು ರಾಧಾಬಾಯಿ ಬೇರೊಂದು ಥರ ವಿಷಯ ತಿಳಿಯುವ ಪ್ರಯತ್ನ ಮಾಡಿದರು. ಅದಕ್ಕೆ ಆಚಾರ್ರು "ಇನ್ನೇನು ಇರತದ ಮಣ್ಣು? ಅದೇ ರಾಗ-ಅದೇ ಹಾಡು. ಆ ನಮ್ಮ ಖಾಲಿ ಜಾಗೆ ಮಠಕ್ಕ ದಾನ ಅಂತ ಬರೆದು ಕೊಡಬೇಕು ಅನ್ನೋದು." ಎಂದುತ್ತರಿಸಿದರು.

ರಾಧಾಬಾಯಿ ಸಿಟ್ಟಿನಿಂದ "ಅಲ್ರೀ!! ನಮ್ಮ ಜಾಗೆ ಮಠಕ್ಕ ಹೆಂಗ ಕೊಡ್ಲಿಕ್ಕೆ ಬರ್ತದ? ಹಂಗ ಮಾಡಿ ನಾವು ಮಕ್ಕಳ ಕರ್ಕೊಂಡು ಭಿಕ್ಷೆ ಬೇಡಲಿಕ್ಕೆ ಹೋಗಬೇಕು ಅಂತಾರೇನು ಆ ಮ್ಯಾನೇಜರು" ಅಂದವರೇ ಮತ್ತೆ ಏನೋ ವಿಚಾರ ಮಾಡಿದವರಂತೆ "ನೀವು ಸ್ವಾಮಿಗಳ್ನ ಜಪ್ಪಿಸಿ ಕೇಳಬೇಕಿತ್ತು-ಯಾಕ ಹಿಂಗ ನಮ್ಮ ಜೀವ ಹಿಂಡಲಿಕ್ಕೆ ಹತ್ತಿರಿ ಅಂತ" ಎನ್ನುತ್ತಾ ತಮ್ಮ ಸಿಟ್ಟು ಹೊರಚೆಲ್ಲಿದರು.

ಅದಕ್ಕುತ್ತರವಾಗಿ ಆಚಾರ್ರು "ಸ್ವಾಮಿಗಳ ದರ್ಶನ ಮಾಡಿಸೇಗೊಡವಲ್ಲಾ ಆ ಮ್ಯಾನೇಜರ್ ರಾಮಣ್ಣ! ಏನಾರ ಕೇಳಿದ್ರ – ನಾ ಸ್ವಾಮಿಗಳ ಒಪ್ಪಿಗಿ ತಗೊಂಡ ಈ ಕಾರ್ಯಕ್ಕ ಕೈ ಹಾಕಿನಿ ಅಂತಾನ. ಹಂಗಾದ್ರ ನಮ್ಮ ಗತಿ ಏನು? ಅಂತ ಕೇಳಿದ್ರ -ಇಷ್ಟು ದಿನ ನಡೆದ ರೀತಿ ಇನ್ನ ಮುಂದೆನೂ ನಿಮ್ಮ ಮತ್ತು ನಿಮ್ಮ ಪರಿವಾರದ ಯೋಗಕ್ಷೇಮ ಮಾಡ್ಲಿಕ್ಕೆ ಮಠ ತಯ್ಯಾರದ ಅಂತಾನ ಬೋಳಿಮಗಾ! "ಎಂದಂದು ಆಕ್ರೋಶ ಹೊರಹಾಕಿದರು.

ರಾಧಾಬಾಯಿ "ಹಂಗಾದ್ರ ಇದಕ್ಕ ಏನು ಬೇರೆ ದಾರೀನೇ ಇಲ್ಲ?". ಶಾಮಾಚಾರ್ರು "ಹೂಂ! ನೋಡೋಣ ಮುಂದೇನಾದೀತು ಅಂತ ಈಗ ಹೆಂಗ ಹೇಳೋದು. ಒಟ್ಟಿನಾಗ ಹಣೆ ಮ್ಯಾಲ ಬರೆದದ್ದನ್ನ ಅನುಭವಿಸಿಯೇ ತೀರಬೇಕಲ್ಲ" ಎಂದು ವೇದಾಂತ ಹೇಳುತ್ತಾ ಎದ್ದು "ನಾ ಒಂಚೂರು ನೀರು ಮೈ ಮೇಲೆ ಹಾಕ್ಕೊಂಡ ಬರ್ತೇನಿ. ನೀ ಫಳಾರ ತಯಾರು ಮಾಡ ನಡಿ" ಅಂತನ್ನುತ್ತಾ ಒಳ ನಡೆದರು.

***

ಅವತ್ತು ರಾತ್ರಿ ಆಚಾರ್ರಿಗೆ ತಮ್ಮ ಮನೋಕ್ಲೇಶಕ್ಕೆ ಕಾರಣವಾದ ಗತ ಜೀವನದ ಘಟನೆಗಳು ಒಂದೊಂದಾಗಿ ನೆನಪಾದವು.

ಹನ್ನೆರಡನೇ ವಯಸ್ಸಿಗೆ ತನ್ನವರನ್ನೆಲ್ಲ ಮಲೇರಿಯ ಜ್ವರಕ್ಕೆ ಕಳೆದುಕೊಂಡ ಅನಾಥನಾದ ಶಾಮನನ್ನು ದೂರದ ಸಂಬಂಧಿಯೊಬ್ಬ ತಂದು ಈ ಮಠಕ್ಕೆ ಸೇರಿಸಿದ. ಆಗಿದ್ದ ಹಿರಿಸ್ವಾಮಿಗಳು ಶಾಮನನ್ನು ವಿಶೇಷ ಮಮತೆಯಿಂದ ಕಂಡು ಅವನ ಬಾಲ್ಯ-ಯೌವ್ವನಗಳು ಮಠದ ಧಾರ್ಮಿಕ ವಾತಾವರಣದಲ್ಲೇ ಕಳೆದುಹೋದವು. ತಮಗೆ ವಹಿಸಿಕೊಟ್ಟ ಮಠದ ಅಡುಗೆ, ಪೂಜೆ, ದೇವರ ಅಲಂಕಾರ, ಮಂತ್ರ ಪಠಣ ಇತ್ಯಾದಿಗಳಲ್ಲಿ ಶಾಮನ ದಿನ-ರಾತ್ರಿಗಳುರುಳಿದವು.

ನಂತರದಲ್ಲಿ ಹಿರಿಸ್ವಾಮಿಗಳೇ ಮುಂದೆ ನಿಂತು ಮದುವೆನೂ ಮಾಡಿಸಿದರು. ಆಚಾರ್ರಿಗೆ ಶೃತಿ -ಕೀರ್ತಿ ಎಂಬ ಮುದ್ದಾದ ಅವಳಿ-ಜವಳಿ ಹೆಣ್ಣು ಸಂತಾನ ಪ್ರಾಪ್ತಿಯೂ ಆಯಿತು.ಮಠದ ಕೆಲಸ ಕಾರ್ಯದಲ್ಲಿ ತಮ್ಮ ಜೀವನ ಸಾಗಿಸುತ್ತಿದ್ದ ಆಚಾರರಿಗೆ ಆರು ತಿಂಗಳ ಕೆಳಗೆ ನಡೆದ ಒಂದು ಘಟನೆ ಅವರ ಜೀವನದ ಗತಿಯನ್ನೇ ಬದಲು ಮಾಡುವಷ್ಟು ವಿಶಿಷ್ಟವಾಗಿತ್ತು.ರಾಧಾಬಾಯಿಯ ದೂರದ ಸೋದರ ಸಂಬಂಧಿಯೊಬ್ಬ ತಾನು ಸಾಯುವ ಮೊದಲು ಈ ಊರಿನಲ್ಲಿ ತಮಗೆ ಪಿತ್ರಾರ್ಜಿತವಾಗಿ ಲಭಿಸಿದ್ದ ಒಂದು ತುಂಡು ಜಮೀನನ್ನು ತನ್ನ ತಂಗಿಗೆ ಆಸರೆಯಾಗಲಿ ಎಂಬ ಹಿತದೃಷ್ಟಿಯಿಂದ ರಾಧಾಬಾಯಿಯ ಹೆಸರಿಗೆ ಮಾಡಿಟ್ಟು ತೀರಿಕೊಂಡಿದ್ದ. ಆ ಸಂಬಂಧದ ಕಾಗದ-ಪತ್ರಗಳನ್ನು ಆ ಊರಿನಲ್ಲಿದ್ದ ರಾಧಾಬಾಯಿಯ ಅಣ್ಣ ತಂದೊಪ್ಪಿಸಿ ಹೋಗಿದ್ದ. ಈ ಬೆಳವಣಿಗೆ ಒಂದು ದಿನ ಮಠದ ಆಡಳಿತ ವರ್ಗಕ್ಕೂ ತಲುಪಿತು.

> ಶಾಮಾಚಾರ್ರಿಗೆ ಅವತ್ತಿಂದ ಸಂಕಟದ ಘಳಿಗೆಗಳು ಶುರುವಾದವು. ರಾಧಾಬಾಯಿಯಂತೂ ತಮ್ಮ ಎಲ್ಲ ಬುದ್ಧಿ ಉಪಯೋಗಿಸಿ ಗಂಡನ ಕೈಯಿಂದ 'ಜಾಗೆ ಮಠಕ್ಕ ಬರೆದು ಕೊಡೋದಿಲ್ಲ' ಎಂಬ ನಿರ್ಧಾರ ರಾಮಣ್ಣನಿಗೆ ತಿಳಿಸುವದರಲ್ಲಿ ಸಫಲರಾಗಿದ್ದರು. ಆದರೆ ರಾಮಣ್ಣ ಹಿಡಿದ ಪಟ್ಟು ಸಡಲಿಸಲಿಲ್ಲ. ಪ್ರತಿಬಾರಿಯೂ ಮಠ ಅವರ ಜೀವನಕ್ಕೆ ಎಷ್ಟು ಅವಶ್ಯ ಹಾಗೂ ಅನಿವಾರ್ಯ ಆಶ್ರಯ ತಾಣ ಎಂಬುದನ್ನು ಚುಚ್ಚಿ ಚುಚ್ಚಿ ತಿಳಿಸಿಕೊಡುವ ಪ್ರಯತ್ನ ನೆಡೆಸಿದ್ದ. ಈ ಹಗ್ಗ-ಜಗ್ಗಾಟದಲ್ಲಿ ಶಾಮಾಚಾರ್ರು-ರಾಧಾಬಾಯಿ ಸೆಣಸಲಾರದೇ ನಿಃಶಕ್ತರಾಗುತ್ತಾ ಹೋದರು. ಪ್ರತಿ ಪ್ರಯತ್ನದಲ್ಲೂ ರಾಮಣ್ಣ ತನ್ನ ಗುರಿ ಸಾಧನೆಯತ್ತ ದಾಪುಗಾಲು ಹಾಕುತ್ತಿರುವಂತೆ ತೋರುತ್ತಿತ್ತು.

ಮಠದ ಮ್ಯಾನೇಜರ್ ರಾಮಣ್ಣ ಶಾಮಾಚಾರ್ರನ ಕರೆಸಿ " ಹೂಂ ಏನ್ರಪಾ ಮತ್ತ ನಿಮಗ ಬಳುವಳಿ ಆಗಿ ಜಾಗ ಸಿಕ್ಕದಂತಲ್ಲಾ. ನಮ್ಮ ಕಿವಿಗೂ ಬಿತ್ತು. ನೀವು ಆ ಜಾಗಾನ ಏನು ಮಾಡ್ಬೇಕಂತ ಮಾಡಿರಿ?" ಎನ್ನುತ್ತಾ ಪೀಠಿಕೆ ಹಾಕಿದರು. ಅದಕ್ಕೆ ಶಾಮಾಚಾರ್ರು "ಏನಿಲ್ಲಾ ರಾಮಣ್ಣೋರೇ, ನಮ್ಮಾಕಿಗೆ ದೂರದ ಅಣ್ಣ ಆಗಬೇಕು. ಏನೋ ಈಕೀ ನೆನಪು ಮಾಡ್ಕೊಂಡು ಈ ಊರಾಗ ಅವನದು ಅಂತಿದ್ದ ಒಂಚೂರು ಜಾಗೆ ಇವಳ ಹೆಸರಿಗೆ ಬರೆದಿಟ್ಟು ತೀರಿಕೊಂಡ್ನಂತ. ಈಕೀ ಅಣ್ಣ ಅದರ ಕಾಗದ ಪತ್ರ ತಂದೊಪ್ಪಿಸಿ ಹೋದ." ಎಂದುತ್ತರಿಸಿದರು.

ರಾಮಣ್ಣ "ಈ ವಿಷಯ ಸನ್ನಿಧಿಯವರ ಗಮನಕ್ಕ ಯಾಕ ತರೋಣವಾಗಲಿಲ್ಲ ನಿಮ್ಮಿಂದ?" ಎಂದು ಮರುಪ್ರಶ್ನೆ ಎಸೆದನು. " ಅಲ್ಲ ಇದೇನು ಮಠಕ್ಕ ಸಂಬಧ ಪಟ್ಟ ವಿಷಯ ಅಲ್ಲ ಅಂತ ಅನಿಸ್ತು ಅದಕ್ಕ....." ಎಂದು ಶಾಮಾಚಾರ್ರು ರಾಗ ಎಳೆಯುತ್ತಿದ್ದಂತೆ, ರಾಮಣ್ಣ "ಹೌದ್ರೆಪಾ! ನಿಮ್ಮ ಕಷ್ಟ ಬಗೆ ಹರಿಸೋದು ಅಷ್ಟ ಮಠದ ಕರ್ತವ್ಯ. ಬಾಕಿ ಎಲ್ಲ ವಿಷ್ಯಕ್ಕೂ ನೀವು ಸ್ವತಂತ್ರರು" ಎಂದು ಕೊಂಕು ನುಡಿದರು.

ಶಾಮಾಚಾರ್ರಿಗೆ ಏನು ಹೇಳುವದೆಂದು ತೋಚದೆ " ಹಾಂಗೇನೂ ಇಲ್ರಿ ರಾಮಣ್ಣಾ! ಏನೋ ಇದು ಅಷ್ಟು ಮುಖ್ಯ ಸಂಗತಿ ಅಲ್ಲ ಅಂತಾ...." . ರಾಮಣ್ಣ ಕೊಂಚ ಖಾರವಾಗಿ "ನೋಡ್ರಿ ಆಚಾರ್ರ, ಯಾವುದು ಮುಖ್ಯ ಯಾವುದು ಅಲ್ಲ ಅಂತ ಅನ್ನೋದು ನಿಮ್ಮ ಉದ್ದೇಶದ ಮೇಲೆ ನಿರ್ಧಾರಿತ ಆಗ್ತದ. ನಿಮ್ಮ ಸಕಲಕ್ಕೂ ಮಠ ಜಿಮ್ಮೇದಾರಿ ತಗೊಳ್ತದ ಅನ್ನೋದನ್ನ ನೀವು ಲಕ್ಷ್ಯದಾಗ ಇಟ್ಕೊಂಡು ವ್ಯವಹಾರ ನೆಡೆಸೋದು ನಿಮ್ಮ ದೃಷ್ಟಿಯಿಂದ ಒಳ್ಳೆದು. ಹೌದೋ ಅಲ್ಲೋ?" ಎನ್ನುತ್ತಿದ್ದಂತೆ ಶಾಮಾಚಾರ್ರು ಅಪ್ರತಿಭರಾಗಿ "ಅಲ್ಲಾ ರಾಮಣ್ಣ ಹಿಂಗ್ಯಾಕ ನೀವು ಸಿಟ್ಟಿಗೆ ಬರ್ತೀರಿ. ನಾನು ನಿಮ್ಮ ಗಮನಕ್ಕ ಈ ವಿಷಯ ತರಬೇಕೊಂತ ಇದ್ದೆ ಅಷ್ಟರಾಗ ನೀವ ಕರೆದು ವಿಚಾರಿಸಿದ್ರಿ" ಎಂದು ನುಡಿದರು. ರಾಮಣ್ಣ "ಹೆಂಗೋ ಈ ವಿಷಯ ಈಗ ಗೊತ್ತಾಗೇಬಿಟ್ಟದ. ನಾನು ಸ್ವಾಮಿಗಳ ಹತ್ತಿರ ಇದನ್ನ ಅಂದು ಏನು ಹೇಳ್ತಾರೋ ನೋಡ್ತೀನಿ" ಎನ್ನುತ್ತಾ ಮಾತು ಮುಗಿಸಿದರು. ಶಾಮಾಚಾರ್ರಿಗೆ ಏನು ಒಂದು ಅನಿಷ್ಟದ ಮುನ್ಸೂಚನೆ ಸಿಕ್ಕಂತಾಗಿ ಮುಂದಿನ ಕೆಲವು ದಿನಗಳನ್ನು ಕಳವಳದಿಂದಲೇ ನೂಕಿದರು.

ಅವರೆಂದುಕೊಂಡಂತೆಯೇ ವಾರೊಪ್ಪತ್ತಿನಲ್ಲಿ ರಾಮಣ್ಣ ಮತ್ತೆ ಆಚಾರ್ರಿಗೆ ಕರೆಕಳುಹಿಸಿದರು. ಆಫೀಸಿಗೆ ಹೋದಾಗ ರಾಮಣ್ಣ ನೇರವಾಗಿ ಮಾತು ಶುರುಮಾಡಿದರು. "ಆಚಾರ್ರೆ, ಸ್ವಾಮಿಗಳು ಒಂದು ಗೋ-ಶಾಲೆ ಸ್ಥಾಪನಾ ಮಾಡೋ ಸಂಕಲ್ಪ ಮಾಡಿ, ನಿಮ್ಮಿಂದ ಸಹಾಯ ಬಯಸಲಿಕ್ಕೆ ಹತ್ಯಾರ. ಹಾಂಗಾಗಿ ಈಗ ನೀವು ಈ ಮಹೋನ್ನತ ಕಾರ್ಯಕ್ಕ ಅಳಿಲುಸೇವೆ ಸಲ್ಲಿಸಿ ಕೃತಾರ್ಥ ಆಗೋವಂಥ ಅವಕಾಶ ಸಿಕ್ಕದ. ಇದನ್ನ ನೀವು ಸದುಪಯೋಗಪಡಿಸಿಕೊಳ್ಳಬೇಕು." ಶಾಮಾಚಾರ್ರು ಗಲಿಬಿಲಿಗೊಳಗಾಗಿ "ನನಗ ಏನೂ ತಿಳೀವಲ್ದು..." ಎಂದು ತೊದಲಿದರು.

ರಾಮಣ್ಣ ಮೆಲುದನಿಯ, "ಏನಿಲ್ಲಾ ನಿಮಗ ಬಳುವಳಿ ಬಂದ ಜಾಗೆ ಆದ ಅಲ್ಲ ಅದು ನಮ್ಮ ಗೋ-ಶಾಲೆ ಸ್ಥಾಪಿಸಲಿಕ್ಕೆ ಪ್ರಶಸ್ತ ಆದ. ಹಾಂಗಾಗಿ ನೀವು ಆ ಜಾಗೆ ಮಠಕ್ಕ ಬರೆದು ಕೊಡ್ಬೇಕು ಅನ್ನೋದು ಸನ್ನಿಧಾನದ ಅಪೇಕ್ಷೆ" ಅಂತಂದ. ಒಮ್ಮಲೇ ಗಾಬರಿಗೊಂಡ ಶಾಮಾಚಾರ್ರು " ಏ! ಅದು ಹೆಂಗ ಕೊಡ್ಲಿಕ್ಕೆ ಬರ್ತದ. ನನ್ನ ಮನಿಯಾಕಿಗೆ ಆಕಿ ಅಣ್ಣ ಕೊಟ್ಟದ್ದು. ಅದನ್ನ ಕೇಳಲಿಕ್ಕೆ ಮಠಕ್ಕ ಏನು ಹಕ್ಕು ಅದಸ್ ಅಂತೀನಿ. ಯಾಕಸ್ ಬಾಯಿ ಮುಚ್ಗೊಂಡು ಇರ್ತಿವಂತ ಏನಾರ ಮಾತಾಡ್ತೀರೇನು?" ಎಂದೆಲ್ಲಾ ಕೂಗಾಡುತ್ತಾ ಸಿಟ್ಟು ಮತ್ತು ಉದ್ವೇಗದಿಂದ ಕಂಪಿಸತೊಡಗಿದರು. ಆಗ ರಾಮಣ್ಣ "ಅಲ್ರೀ ಶಾಮಾಚಾರ್ರೆ! ಹಿಂಗ್ಯಾಕ ಹುಚ್ಚರ ಹಂಗ ಬಡಬಡಾಸಾಕಾ ಹತ್ತಿರಿ. ಸ್ವಲ್ಪ ವಿಚಾರ ಮಾಡಿ ಉತ್ತರಾ ಕೊಡ್ರಿ. ಇಷ್ಟು ದಿನ ನಿಮ್ಮನ್ನ ಮತ್ತು ನಿಮ್ಮ ಹೆಂಡತಿ-ಮಕ್ಕಳ ಯೋಗಕ್ಷೇಮ ನೋಡಿಕೊಂಡ ಮಠ ಈಗ ನಿಮ್ಮಿಂದ ಲೋಕೋದ್ಧಾರಕ್ಕಾಗಿ ಸಹಾಯದ ಅಪೇಕ್ಷಾ ಮಾಡಿದ್ರ ಅದು ತಪ್ಪು ಅಂತ ಹೆಂಗ ಹೇಳ್ತೀರಿ. ನೀವು ಈಗ ಸರಿಯಾಗಿ ವಿಚಾರ ಮಾಡಿ ಮಾತಾಡೊ ಸ್ಥಿತಿಯೊಳಗ ಇಲ್ಲ. ಅದಕ್ಕ ಮನಿಗೆ ಹೋಗಿ ಸಾವಕಾಶ

ವಿಚಾರ ಮಾಡಿ ಒಪ್ಪಿಗಿ ತಿಳಿಸಿರಿ." ಅನ್ನುತ್ತಾ ಮಾತು ಮುಗಿಸಿ ಎದ್ದರು.

ಶಾಮಾಚಾರ್ರಿಗೆ ಅವತ್ತಿಂದ ಸಂಕಟದ ಘಳಿಗೆಗಳು ಶುರುವಾದವು. ರಾಧಾಬಾಯಿಯಂತೂ ತಮ್ಮ ಎಲ್ಲ ಬುದ್ಧಿ ಉಪಯೋಗಿಸಿ ಗಂಡನ ಕೈಯಿಂದ 'ಜಾಗೆ ಮಠಕ್ಕ ಬರೆದು ಕೊಡೋದಿಲ್ಲ' ಎಂಬ ನಿರ್ಧಾರ ರಾಮಣ್ಣನಿಗೆ ತಿಳಿಸುವದರಲ್ಲಿ ಸಫಲರಾಗಿದ್ದರು.

ಆದರೆ ರಾಮಣ್ಣ ಹಿಡಿದ ಪಟ್ಟು ಸಡಲಿಸಲಿಲ್ಲ. ಪ್ರತಿಬಾರಿಯೂ ಮಠ ಅವರ ಜೀವನಕ್ಕೆ ಎಷ್ಟು ಅವಶ್ಯ ಹಾಗೂ ಅನಿವಾರ್ಯ ಆಶ್ರಯ ತಾಣ ಎಂಬುದನ್ನು ಚುಚ್ಚಿ ಚುಚ್ಚಿ ತಿಳಿಸಿಕೊಡುವ ಪ್ರಯತ್ನ ನೆಡೆಸಿದ್ದ. ಈ ಹಗ್ಗ-ಜಗ್ಗಾಟದಲ್ಲಿ ಶಾಮಾಚಾರ್ರು-ರಾಧಾಬಾಯಿ ಸೆಣಸಲಾರದೇ ನಿಃಶಕ್ತರಾಗುತ್ತಾ ಹೋದರು. ಪ್ರತಿ ಪ್ರಯತ್ನದಲ್ಲೂ ರಾಮಣ್ಣ ತನ್ನ ಗುರಿ ಸಾಧನೆಯತ್ತ ದಾಪುಗಾಲು ಹಾಕುತ್ತಿರುವಂತೆ ತೋರುತ್ತಿತ್ತು. ಯಾವ ದಿಕ್ಕಿನಿಂದ ಯೋಚಿಸಿದರೂ ಅವರಿಗೆ ತಾವು ಮಠದ ಹಂಗಿನಿಂದ ಹೊರಬರುವ ದಾರಿ ಕಾಣದೆ ಹೋಯಿತು.

ಈ ಎಲ್ಲ ವಿಚಾರಗಳ ನಡುವೆ ಶಾಮಾಚಾರ್ರಿಗೆ ಯಾವುದೋ ಮಾಯದಲ್ಲಿ ನಿದ್ದೆ ಆವರಿಸಿತು.

***

ಈ ನಡುವೆ ಕಾಲೇಜಿನಿಂದ ಮರಳುವಾಗ ದೊಡ್ಡಮಗಳು ಶೃತಿಗೆ ಅಪಘಾತವಾಗಿ ತಲೆಗೆ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವ ಆಗಿ ಆಪರೇಶನ್ ಮಾಡುವ ಅವಶ್ಯಕತೆ ಬಿತ್ತು. ಸಕಾಲಕ್ಕೆ ಆಟೋ ಚಾಲಕ ಹುಸೇನಿ ಮುಂದೆ ಬಂದು ತನ್ನ ರಕ್ತ ಕೊಟ್ಟದ್ದರಿಂದ ಶೃತಿಯ ಜೀವ ಉಳಿಯಿತು.

ಶಾಮಾಚಾರ್ರು ಹುಸೇನಿ ಕೈ ಹಿಡಿದು "ನನ್ನ ಮಗಳ ಕಾಪಾಡಿದೆಪ್ಪ ಹುಸೇನಿ. ನಿನ್ನ ಉಪಕಾರ ಯಾವತ್ತೂ ಮರೆಯಂಗಿಲ್ಲ. ದೇವ್ರು ನಿನ್ನ, ನಿನ್ನ ಹೆಂಡ್ರು-ಮಕ್ಕಳನ್ನ ಚೆಂದಾಗಿ ಇಟ್ಟಿರಲಪ್ಪ" ಎಂದು ಮನದುಂಬಿ ಹಾರೈಸಿದರು. ಅದಕ್ಕುತ್ತರವಾಗಿ ಹುಸೇನಿ " ಛೇ! ಛೇ! ಅಷ್ಟು ದೊಡ್ಡ ಮಾತು ಯಾಕ ಅಂತೀರಿ, ಆಚಾರಿ ಸಾಬ್. ನಮ್ಮ ಕೈಯಾಗ ಏನೈತಿ, ಎಲ್ಲಾ ಅಲ್ಲಾನ ಮೆಹರಬಾನಿ" ಎಂದು ಆಚಾರ್ರಿಗೆ ಕೈ ಮುಗಿದು ಹೊರಟು ಹೋಗಿದ್ದನು. ಆಚಾರ್ರಿಗೆ ಹುಸೇನಿ ಮಾತು ನಿಜವೆನ್ನಿಸಿ "ಹೌದು! ನಮ್ಮ ಕೈಯಾಗ ಏನು ಅದ ? ಎಲ್ಲ ಭಗವಂತನ ಇಚ್ಛಾ!" ಎಂದು ಉದ್ಗರಿಸಿದ್ದರು.

ಮಠದ ಮ್ಯಾನೇಜರ ರಾಮಣ್ಣ ದೌಡಾಯಿಸಿ ಬಂದು, ಎಲ್ಲ ವ್ಯವಸ್ಥೆ ಕಲ್ಪಿಸಿಕೊಟ್ಟ. ರಾಮಣ್ಣನ ಸಕಾಲಿಕ ನೆರವು ಕಂಡು ಶಾಮಾಚಾರ್ಯ-ರಾಧಾಬಾಯಿ ದಂಪತಿಗಳ ಮನ ಕೃತಜ್ಞತೆಯಿಂದ ತುಂಬಿ ಬಂದಿತು. ನಿಧಾನವಾಗಿ ಶೃತಿ ಚೇತರಿಸಿಕೊಳ್ಳಹತ್ತಿದಳು.

ದಂಪತಿಗಳು ತಮ್ಮ ಸಂಕಷ್ಟದ ಸಮಯದಲ್ಲಿ ಸಹಾಯ ಹಸ್ತ ನೀಡಿದ ಮಠ ಮತ್ತು ರಾಮಣ್ಣನವರ ಉಪಕಾರ ಸ್ಮರಣೆ ಮಾಡುತ್ತಲೇ ಇರುತ್ತಿದ್ದರು. ಜಾಗೆಯ ವಿಚಾರವಾಗಿ ಮೇಲಿದ್ದ ಅಸಮಾಧಾನ ತಾತ್ಕಾಲಿಕವಾಗಿ ಮರೆಯಾಗಿತ್ತು.

ಆದರೆ ಅವರ ನೆಮ್ಮದಿ ಕೆಡಿಸುವಂತೆ ರಾಮಣ್ಣನವರಿಂದ ಶಾಮಾಚಾರ್ರಿಗೆ ಕರೆ ಬಂತು. ಜಾಗೆಯ ದಾನ ಕೊಡೊ ವಿಷಯ ಮರೆತಂತಾಗಿ ನಿರುಮ್ಮಳವಾಗಿದ್ದ ದಂಪತಿಗಳಲ್ಲಿ ಮತ್ತೆ ಸಣ್ಣಗೆ ನಡುಕ ಆರಂಭವಾಯಿತು. ಹೊರಡುವ ಮುನ್ನ ರಾಧಾಬಾಯಿ "ಇಲ್ಲಿ ನೋಡ್ರಿ ರಾಮಣ್ಣ ಮತ್ತ ಏನಾದ್ರೂ ಜಾಗೆ ಬಿಟ್ಟು ಕೊಡೊ ಸುದ್ದಿ ತೆಗೆದ್ರ ಆಗೋದಿಲ್ಲಾ ಅಂತ ಸ್ಪಷ್ಟ ಹೇಳಿ ಬಿಡ್ರಿ. ಹಾಂಗೇನಾದ್ರೂ ಪ್ರಸಂಗ ಬಂದ್ರ ಮಠ ಬಿಟ್ಟು ಹೋಗಿ ಹೊರಗ ಕೂಲಿ-ನಾಲಿ ಮಾಡಿ ಆದ್ರೂ ಬದುಕೋಣ" ಎಂದು ಒತ್ತಿ ಹೇಳಿದ್ದ ಮಾತು ಶಾಮಾಚಾರ್ರ ಕಿವಿಯೊಳಗೆ ಗುಂಯಿಗುಡುತ್ತಿತ್ತು. ಮಠದ ಆವರಣ ಪ್ರವೇಶಿಸಿದಾಗ ಶಾಮಾಚಾರ್ರಿಗೆ ಆಶ್ಚರ್ಯ ಕಾದಿತ್ತು. ಅಲ್ಲಿ ಬರೆ ರಾಮಣ್ಣ ಅಷ್ಟೇ ಅಲ್ಲದಸ್ ಅಗ್ರಹಾರದ ಬಹಳಷ್ಟು ಬ್ರಾಹ್ಮಣರು ಸೇರಿದ್ದರು.

ಎಲ್ಲರನ್ನೂ ಒಂದೆಡೆಯಿಂದ ನಿರುಕಿಸುತ್ತಾ ಶಾಮಾಚಾರ್ರು ಕೈ ಮುಗಿದು ನಿಂತರು. ಎಲ್ಲರನ್ನೂ ಉದ್ದೇಶಿಸಿ ಎಂಬಂತೆ ರಾಮಣ್ಣ ಮಾತನಾಡಲು ಆರಂಭಿಸಿದರೂ, ಆ ಮಾತುಗಳು ತಮ್ಮನ್ನೇ ಉದ್ದೇಶಿಸಿ ಆಡಿದ್ದು ಎಂಬುದು ಅರಿವಿಗೆ ಬರಲಾರಂಭಿಸಿತು. ರಾಮಣ್ಣ ತಾವೆಲ್ಲ ಇಲ್ಲಿ ಯಾಕೆ ಸೇರಿದ್ದು ಎಂಬುದನ್ನು ವಿಶದಪಡಿಸುತ್ತಾ "ನೋಡ್ರೆಪಾ ನಿಮಗೆಲ್ಲ ಗೊತ್ತಸ್ ಅದ- ಶ್ರೀಗಳು ಗೋಶಾಲೆ ಸ್ಥಾಪನಾ ಮಾಡೋದಂತ ಸಂಕಲ್ಪ ಮಾಡಿದ್ದು, ಈ ಸಂಬಂಧ ನನಗ ನಿಮ್ಮ ಮುಂದ ಕೆಲವು ವಿಚಾರ ಇಡಬೇಕಂತ ಆಜ್ಞೆ ಮಾಡ್ಯಾರ. ಮೊದಲನೆದಾಗಿ ಗೋ-ಶಾಲೆ ಆರಂಭ ಮಾಡೋ ಸಲುವಾಗಿ ನೀವೆಲ್ಲ ತಾನು-ಮನ-ಧನ ಅರ್ಪಿಸಿ ಸೇವಾ ಮಾಡತಕ್ಕದ್ದು." ಎನ್ನುತ್ತಿದ್ದಂತೆ ಗುಜು-ಗುಜು ಸದ್ದು ಶುರುವಾಯಿತು. ರಾಮಣ್ಣ ದನಿಯೇರಿಸಿ "ಸದ್ದು! ಸದ್ದು! ಇದು ಮಹತ್ವದ ವಿಷಯ. ಇದರಾಗ ಯಾವುದೇ ಲೋಪ ಬರಕೂಡದು ಎಂಬುದು ಶ್ರೀಗಳ ಅಪೇಕ್ಷೆ. ಆದರ..." ಎಂದು ರಾಗ ಎಳೆದು ಅದರ ಪರಿಣಾಮ ಅಳೆಯಲು ಕೊಂಚ ತಡೆದು " ಶಾಮಾಚಾರ್ರಿಗೆ ಗೋ-ಶಾಲೆ ಸ್ಥಾಪನಾ ಸಲುವಾಗಿ ಅವರ ಜಾಗೆ ಬಿಟ್ಟು ಅಂತ ಕೇಳಿಕೊಂಡರ ಅವರು ಒಪ್ಪಾ ಇಲ್ಲ. ಮಠ ಮತ್ತು ಶ್ರೀ ಗಳ ಇಚ್ಚಾಕ್ಕ ವಿರುದ್ಧ ನೆಡೆದು ಅವರಿಗೆ ಏನು ಸಾಧಿಸೋ ಬಯಕೆ ಅದ ಅನ್ನೋದು ನನ್ನ ಪ್ರಶ್ನೆ."

ಎಲ್ಲರೂ ಒಂದೇ ಸಮನೇ "ಅದ ಹೆಂಗ ಕೊಡೋದಿಲ್ಲ ಅಂತರಾ?/ ಧರ್ಮದ ಪ್ರಶ್ನೆ ಬಂದಾಗ ನನ್ನದು-ತನ್ನದು ಅಂಬೋದು ಎಲ್ಲಿ ಉಳಿತದ? ಗೋ ಮಾತೆ ನಮಗೆಲ್ಲ ಪವಿತ್ರ ಮತ್ತ ಅದರ ರಕ್ಷಣಾ ನಮ್ಮೆಲ್ಲರ ಕರ್ತವ್ಯ" ಇತ್ಯಾದಿ ಮಾತನಾಡಿದರು. ರಾಮಣ್ಣ ಶಾಮಾಚಾರ್ರನ್ನು ಉದ್ದೇಶಿಸಿ " ನೀವೇನಂತೀರಿ ಆಚಾರ್ರ? " ಎಂದು ಕೇಳಿದನು. ಆಚಾರ್ರು ವಿಷಣ್ಣ ವದನರಾಗಿ ಏನೊಂದೂ ಮಾತನಾಡದೇ ಸುಮ್ಮನೆ ಕುಳಿತರು. ಮತ್ತೆ ರಾಮಣ್ಣ ' ಅದೂ ಅಲ್ಲದೇ ಮೊನ್ನೆ ಮೊನ್ನೆ ಆಚಾರ್ರ ಮಗಳಿಗೆ ಅಪಘಾತ ಆದಾಗ ಮಠ ಯಾವ ರೀತಿ ಅವರ ಸಂಕಷ್ಟಕ್ಕ ಸ್ಪಂದಿಸ್ತು ಅನ್ನೋದನ್ನೂ ಗಮನದಲ್ಲಿ ಇಟ್ಟುಕೊಂಡು ಸಭಾ ವಿಚಾರ ಮಾಡಿ ಒಂದು ನಿರ್ಧಾರಕ್ಕ ಬರಬೇಕಾಗ್ತದ" ಎಂದೆನ್ನುತ್ತಾ ಕೊನೆಯ ಮಾತೆಂಬಂತೆ "ಹಂಗ ನೋಡಿದ್ರ ಶಾಮಾಚಾರ್ರ ಬ್ರಾಹ್ಮಣ್ಯ ಭ್ರಷ್ಟ ಆಗೇದ, ಇಂಥಾ ಪರಿಸ್ಥಿತಿಯೊಳಗ ಮಠ ತಾನಾಗ ಸೂಕ್ತ ಅನ್ನಿಸೋ ನಿರ್ಣಯ ತೆಗೆದುಕೊಳ್ಳಲೂ ಬಹುದು" ಎಂಬುದಾಗಿ ಮುಗುಂ ಆಗಿ ಹೇಳಿ ಸುಮ್ಮನಾದನು.

ಈ ಮಾತಿಗೆ ಕೇವಲ ಶಾಮಾಚಾರ್ರು ಮಾತ್ರವಲ್ಲ ಅಲ್ಲಿ ನೆರೆದಿದ್ದವರೆಲ್ಲರೂ ಆಶ್ಚರ್ಯ ಚಕಿತರಾದರು. ಮತ್ತೆ ಗುಜು -ಗುಜು ಆರಂಭವಾಯಿತು. ಶಾಮಾಚಾರ್ರು ಏನೊಂದೂ ತಿಳಿಯದೇ ದಿಗ್ಮೂಢರಾಗಿ ಅತ್ತ-ಇತ್ತ ನೋಡುತ್ತಾ ಸುಮ್ಮನೆ ಕುಳಿತರು.

ತನ್ನ ಮಾತುಗಳು ಅಲ್ಲೋಲ-ಕಲ್ಲೋಲ ಸೃಷ್ಟಿದ ಪರಿಗೆ ತಾನೇ ಬೆರಗಾಗುತ್ತಾ ರಾಮಣ್ಣ "ಶಾಮಾಚಾರ್ರ ಮಗಳಿಗೆ ಮ್ಲೇಚ್ಛನೊಬ್ಬ ರಕ್ತದಾನ ಮಾಡಿದ್ದರಿಂದ...."ಎಂದು ಮತ್ತೆ ಮಾತು ನಿಲ್ಲಿಸಿದ. ಸಭಾಸದರ ನಡುವೆ ಮತ್ತೆ ಕಂಪನ . ಕೆಲವರು " ಅದು ಹೆಂಗ?" ಎಂದು ತಲೆ ಕೆರೆದುಕೊಂಡರೆ ಇನ್ನೂ ಕೆಲವರು' ಹಾಂ ಹೌದಲ್ಲಾ ಮತ್ತೆ! " ಎಂದು ಏನೋ ಸತ್ಯದ ಅರಿವಾದವರಂತೆ ಗೋಣು ಆಡಿಸಿದರು. ಆ ಕ್ಷಣ ಶಾಮಾಚಾರ್ರು ಅಕ್ಷರಶಃ ಕುಸಿದು ಹೋದರು. ತಮಗೆ ಇನ್ಯಾವ ಆಯ್ಕೆಗಳು ಉಳಿದಿಲ್ಲ ಅಂಬೋದು ಅವರಿಗೆ ಸ್ಪಷ್ಟವಾಯಿತು:

ರಾಮಣ್ಣ ಬಲು ನಿಧಾನವಾಗಿ "ಅಲ್ಲಸ್ ನಮಗೂ ಆ ಹುಡುಗಿ ಪ್ರಾಣ ಉಳಿದಿದ್ದಕ್ಕಾಗಿ ಭಾಳ ಸಮಾಧಾನ ಆಗೇದ. ಸಕಾಲದಲ್ಲಿ ರಕ್ತದಾನ ಮಾಡಿದ್ದರಿಂದ ಆಕೀ ಬದುಕಿಕೊಂಡಳು ಅನ್ನೋದು ಖರೆ. ಆದ್ರ ಈ ರೀತಿ ಘಟನೆಗಳು ನೆಡೆದಾಗ ಧರ್ಮಸೂಕ್ಷ್ಮ ಅರಿತು ಎಚ್ಚರಿಕೆ ವಹಿಸಿ ಕಠಿಣ ನಿರ್ಧಾರ ತಗೋಬೇಕಾಗ್ತದ. ಇಲ್ಲ ಅಂದ್ರ ನಮ್ಮ ಮಠದ ನೆರಳಿನಾಗ ಇಂಥ ಒಂದು ಭ್ರಷ್ಟಗೊಂಡ ಬ್ರಾಹ್ಮಣರನ್ನ ಇರಲಿಕ್ಕ ಕೊಟ್ಟದ್ದಕ್ಕ ಸಮಾಜದೊಳಗ ವಿರೋಧ ಎದುರಿಸಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗ ಬಹುದು." ಎಂದೆಲ್ಲ ಮಾತನಾಡಿ ಮಾತು ಮುಗಿಸಿದ.

ಗೊಂದಲದ ವಾತಾವರಣ ತಿಳಿಯಾಗಲು ರಾಮಣ್ಣ ಮತ್ತೆರಡು ಗಳಿಗೆ ತಡೆದು " ಈಗ ಸಭೆ ಏನು ನಿರ್ಧಾರ ತಗೊಳ್ತದ ಅನ್ನೋದರ ಮೇಲೆ ಶ್ರೀ ಗಳು ಶಾಮಾಚಾರ್ರ ಕುರಿತು ಒಂದು ನಿರ್ಣಯ ಮಾಡಲಿಕ್ಕೆ ಅಗ್ತದ. ಈಗ ಏನು ಮಾಡೋದು-ಶಾಮಾಚಾರ್ರಿಗೆ ಬಹಿಷ್ಕಾರ ಹಾಕಿ ಮಠದಿಂದ ಅಷ್ಟ ಅಲ್ಲ ಬ್ರಾಹ್ಮಣ ಸಮಾಜದಿಂದನೂ ಉಚ್ಚಾಟನೆ ಮಾಡೋದು ಸೂಕ್ತ ಅಂತ ನಿಮಗೆಲ್ಲಾ ಅನ್ನಿಸ್ತದೋ ಇಲ್ಲೊ?" ಎಂದೆನ್ನುತ್ತಿದ್ದಂತೆ ಸಭೆ ಒಕ್ಕೊರಲಿನಿಂದ " ಹೌದು ಶಾಮಾಚಾರ್ರ ಬ್ರಾಹ್ಮಣ್ಯ ನಾಶ ಆಗೇದ . ಅವರನ್ನು ನಮ್ಮ ಮಠ ಮತ್ತು ಸಮಾಜದಿಂದ ಹೊರಗ ಹಾಕಲಿಕ್ಕೆ ಬೇಕು!" ಎಂದು ಒಪ್ಪಿಗೆ ಸೂಚಿಸಿತು.

ರಾಮಣ್ಣ ಅವನತ ಮುಖಿಗಳಾಗಿ ಕುಳಿತ ಶಾಮಾಚಾರ್ರನ್ನು ನೋಡಿ "ಆದ್ರ ಶ್ರೀಗಳಿಗೆ ಇದು ಇಷ್ಟ ಇಲ್ಲದಿರೋ ಅಂಥಾ ವಿಷಯ. ನಮಗೂ ಅದು ಬೇಕಾಗಿಲ್ಲ. ಅಂದರೆ ಶ್ರೀಗಳು ಅವರನ್ನ ಕ್ಷಮಿಸಿಬಿಡೊ ನಿರ್ಧಾರ ತಗೋಳಿಕ್ಕೆ ತಯಾರಿದ್ದಾರೆ. ಕೇವಲ ಆಚಾರ್ರು ಗೋ ಶಾಲೆ ನಿರ್ಮಾಣಕ್ಕ ಸಹಾಯ ಆಗೋ ಹಂಗ ತಮ್ಮ ಜಾಗೆ ಮಠದ ಹೆಸರಿಗೆ ಮಾಡಿಕೊಡಬೇಕು." ಎಂದೆನ್ನುತ್ತಾ " ಏನಂತೀರಿ ಶಾಮಾಚಾರ್ರೆ ' ಎಂದು ಕೇಳಿದರು.

ಸುಮ್ಮನಿದ್ದ ಶಾಮಾಚಾರ್ರ ಎಡೆಗೆ "ಶ್ರೀಗಳ ನಿರ್ಣಯ ಯೋಗ್ಯ ಅದ. ಅದನ್ನ ಒಪ್ಪಿಕೊಳ್ಳಬೇಕು/ ಜಾತಿಗೆಟ್ಟು ರೌರವ ನರಕ ಅನುಭವಿಸೊಕ್ಕಿಂತ ಜಾಗೆ ಮಠಕ್ಕ ಬರೆದು ಕೊಡೋದು ಉತ್ತಮ/ ಬ್ರಾಹ್ಮಣ ಜಾತಿಯಿಂದ ಹೊರಕ್ಕೆ ಹಾಕಿಸಿಕೊಂಡು ಸಾಯೋದಕ್ಕಿಂತ ಶ್ರೀಗಳ ಇಚ್ಛೆಯಂತೆ ನೆಡಕೊಳ್ಳೋದು ಒಳ್ಳೆದು." ಮುಂತಾಗಿ ಸಲಹಾ ರೂಪದ ಅಗ್ರಹಗಳು ಕೇಳಿ ಬಂದವು. ಆಗ ಯಾರೋ "ಸ್ವಧರ್ಮೇ ನಿಧನಂ ಶ್ರೇಯಃ" ಎಂದು ಜೋರಾಗಿ ಕೂಗಿದರು.

ರಾಮಣ್ಣನ ಈ ವಿತಂಡ ವಾದಕ್ಕೆ ಸಿಕ್ಕ ಅಗ್ರಹಾರದ ಬ್ರಾಹ್ಮಣರ ಬೆಂಬಲದಿಂದ ಶಾಮಾಚಾರ್ರು ಈಗ ಸಂಪೂರ್ಣವಾಗಿ ಸೋತು ಶರಣಾದರು. ನಿಧಾನವಾಗಿ ಎದ್ದು ನಿಂತು ತಮ್ಮ ನಿಃಶಕ್ತ ಶರೀರವನ್ನು ಬಗ್ಗಿಸಿ "ಆಗಲಿ" ಎಂಬಂತೆ ಗೋಣು ಅಲ್ಲಾಡಿಸಿದರು. ಸಭೆ ಒಮ್ಮೆಲೆ ಏಕೋಭಾವದಿಂದ "ವೈದಿಕ ಧರ್ಮಕ್ಕೆ ಜಯವಾಗಲಿ. ಧರ್ಮೋ ರಕ್ಷತಿ ರಕ್ಷಿತಃ" ಇತ್ಯಾದಿ ಜಯಘೋಷ ಮಾಡಿತು. ಶಾಮಾಚಾರ್ರು ತಮ್ಮ ಭಾರವೆನ್ನಿಸುತ್ತಿದ್ದ ತಮ್ಮ ಕೃಶ ದೇಹವನ್ನು ಎಳೆದುಕೊಂಡು ತಮ್ಮ ಮನೆಯೆಡೆಗೆ ತೆರಳಿದರು.

***

ಗೋ-ಶಾಲೆ ಅಡಿಗಲ್ಲು ಸಮಾರಂಭ ಮುಗಿಸಿಕೊಂಡು ರಾತ್ರಿ ಶಾಮಾಚಾರ್ರು ಮತ್ತವರ ಪತ್ನಿ ರಾಧಾಬಾಯಿ ಮನೆಗೆ ಮರಳಲೆಂದು ಆಟೋ ಹತ್ತಿದರು. ಅವರೆಗೆ ಮಡುಗಟ್ಟಿದ್ದ ಸಿಟ್ಟು-ಆಕ್ರೋಶ ಓತಪ್ರೋತವಾಗಿ ಹರಿದವು. ರಾಧಾಬಾಯಿ "ಅಂತೂ ರಾಮಣ್ಣ ತನ್ನ ಹಟ ಸಾಧಿಸೇಬಿಟ್ಟ, ಪಾಪಿ. ಇವನ ವಂಶ ನಾಶ ಆಗಲಿ, ಅವನ ಕೈ ಸೇದಿಹೋಗ್ಲಿ....." ಮುಂತಾಗಿ ಎಷ್ಟು ಶಪಿಸಿದರೂ ಆಕೆಯ ಒಡಲ ದಾವಾನಲ ಆರುವದು

# ನವಿಲುಗರಿ

## ಒಂಟಿ ಹಕ್ಕಿಯ ಹಾಡು



ನೆನ್ನೆ ಸುರಿದ ಮಳೆಯೊಳಗೆ ನುಗ್ಗಿ
ಚಿತ್ರ ಹೊಕ್ಕು ಚಲಿಸದೇ ನಿಂತ ಚಿತ್ರ,
ನನ್ನದಲ್ಲವೆಂದೇಕೆ ಹುಸಿಯನಾಡುವೆ?

ಮನೆಯ ಸುತ್ತ ಉದುರಿ ಬಿದ್ದ ಸಂಪಿಗೆಯ
ಗಾಢ ಘಮಲು ನನ್ನ ನೆನಪ ಗಂಧವನ್ನೇ
ಹೊತ್ತುತಂದು ಸುರಿಯಲಿಲ್ಲವೇ?

ಮುಂಜಾನೆ ತೋಟದಲ್ಲಿ ಅಲೆಯುವಾಗ
ಬೇಲಿಸಾಲ ಒಂಟಿಹಕ್ಕಿ ಕೂಗಿ ಕರೆದ ರಾಗದಲ್ಲಿ
ನನ್ನ ದನಿಯು ನಿನಗೆ ಕೇಳಲಿಲ್ಲವೇ?

ಬಿಂಕವೆಲ್ಲ ತೊರೆದು ಒಮ್ಮೆ ಒಪ್ಪಿ ಅಪ್ಪಿ ಬಿಡು,
ಜೀವದೊಲವನೆಲ್ಲ ನಿನ್ನ ತೆಕ್ಕೆಯಲ್ಲಿ ತುಂಬಿ.
ಬದುಕೆಲ್ಲ ಜೊತೆಯಾಗಿ ನಡೆಯಲಾರೆನೆ?


**–ಶ್ರುತಿ ಬಿ.ಆರ್.**

**(ಇವರ ಮೊದಲ ಕವನ ಸಂಗ್ರಗ 'ಜ಼ೀರೋ ಬ್ಯಾಲೆನ್ಸ್'ನಿಂದ ಆಯ್ದ ಒಂದು ಕವಿತೆ.)**

## ಥಟ್ ಅಂತ ಬರೆದು ಕೊಡುವ ರಸೀದಿಯಲ್ಲ ಕವಿತೆ

ಥಟ್ ಅಂತ ಬರೆದು
ಕೊಡುವ ರಸೀದಿಯಲ್ಲ ಕವಿತೆ
ಕಾಯಬೇಕು ಹೂವು ಅರಳುವ
ಸೂರ್ಯ ಉದಯಿಸುವ ಗಳಿಗೆಗೆ
ಹಿಡಿಯಲು ಹವಣಿಸಲೇಬಾರದು
ಬಿಡುಗಡೆಯ ಭಾಗ್ಯಕ್ಕೆ
ಬಯೋಡೇಟಾ ಬೇಕೇನು


ಅವ್ಯಕ್ತ!



ನೆನಪಿರಬಹುದು
'ಆಮೆ ಮತ್ತು ಮೊಲದ ಕಥೆ'
ಮುಳ್ಳಾಗಿ ಚುಚ್ಚುವ ಅಹಂ



ಚಿತ್ರ: ವಿಜಯಶ್ರೀ ಹಾಲಾಡಿ



ತರಹೇವಾರಿ ಸರ್ಪನೃತ್ಯ ದಕ್ಕದು
ಅನಾಮಧೇಯ ಬೀಸುವ
ತಂಗಾಳಿಯಂತೆ ಸಾಗಬೇಕು
ಆಕಾಶಕ್ಕೆ ಉಗಿಯುವುದು ಬಿಡಬೇಕು
ಮಾತಾಗಬೇಕಿದೆ ಕವಿತೆ
ಧ್ಯಾನಸ್ಥ ಸ್ಥಿತಿ
ಅವ್ಯಕ್ತ !


**–ಸುಮಿತ್ ಮೇತ್ರಿ**

**(ಇವರ ಇದೇ ಕವಿತೆಯ ಹೆಸರಿನ ಇವರ ಕವನ ಸಂಗ್ರಹದಿಂದ ಆಯ್ದ ಒಂದು ಕವಿತೆ)**

## ಅಕ್ಕನ ಬೆರಳು

ಬಾಚುತ್ತಿದ್ದಳು ಅಕ್ಕ
ಮೆಟ್ಟಿಲ ಮೇಲೆ
ದಪ್ಪ ಉದ್ದ ಕೂದಲು
ಆಗಾಗ ಹಣಿಗೆಯ ಬಾಯಿಗೆ
ಸಿಗುವ ಹೇನು, ಶಿಗರು
ಉಗುರ ಮೇಲಿಟ್ಟು
ಚಟ್ಟನೆ ಅರೆತ
ಮತ್ತೆ ಯಥಾಪ್ರಕಾರ
ಬಾಚಣಿಗೆಯ ಕುಣಿತ1

ಅವಳು ಕಾಣದ ಹಾಗೆ
ಅಲೆವ ಒಂದನ್ನು
ತಲೆಯೊಳಗೆ ಬಿಟ್ಟುಕೊಂಡೆ;
ಮರಿಯಗಲಿ ಹಾಗೇ
ಹೆಕ್ಕಲಿ ಅಕ್ಕ-ರೆಯಿಂದ
ಬೆರಾಳಿಡಿಸುತ್ತ
ಹೆರಳೊಳಗೆ.....



ಈಗಲು ಗುಳುಗುಳು
ನನಗೆ ಒಳಗೆ

ಆದರೆ
ಈಗಿಲ್ಲ ಆ ಹೆರಳು ವ
ಬೆರಳು.

**–ರಾಜು ಹೆಗಡೆ**

---

ಶಕ್ಯವಿದ್ದಿಲ್ಲ. ನಡು–ನಡುವೆ ಶಾಮಾಚಾರ್ಯರು ರಾಧಾಬಾಯಿಯ ಕೋಪದ ಶಮನಕ್ಕೆ ಯತ್ನಿಸಿದರೂ ಅವರಿಗೂ ಸಿಟ್ಟು ತಡೆದುಕೊಳ್ಳಲು ಆಗಲಿಲ್ಲ. "ಇಷ್ಟೆಲ್ಲ ಮೋಸ–ಕಪಟ–ತಂತ್ರದಿಂದ ನಮ್ಮ ಸುಖ–ಸಂತೋಷ ಹಾಳುಗೆಡವಿದ ಅವರನ್ನ ದೇವ್ರೇ ನೋಡ್ಕೊಂತಾನ ಬಿಡು. ಅವರಿಗೇನಾದ್ರೂ ಅಂದು ನಾವ್ಯಾಕ ನಮ್ಮ ಮನಸು–ಬಾಯಿ ಹೊಲಸು ಮಾಡಿಕೊಳ್ಳೋಣ" ಎನ್ನುತ್ತಾ ಶಾಮಾಚಾರ್ರು ಮನಸಿಗೆ ಸಮಾಧಾನ ಮಾಡಿಕೊಳ್ಳಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ರಾಧಾಬಾಯಿ ಆದದ್ದೆಲ್ಲಾ ನೆನೆಸಿಕೊಂಡು ಅಳುವುದಕ್ಕೆ ಪ್ರಾರಂಭಿಸಿದರು. ಆಗ ಶಾಮಾಚಾರ್ರು "ಸಮಾಧಾನ ಮಾಡ್ಕೊಳ್ಳೆ ಮಹರಾಯ್ತಿ. ಎಲ್ಲ ಮುಗಿದು ಹೋಯ್ತಲ್ಲ . ಇನ್ನೇನು ಮಾಡ್ಲಿಕ್ಕ ಆಗ್ತದ. ನಾವು ನಂಬಿದ ದೇವ್ರ ನಮ್ಮ ಕೈ ಬಿಟ್ಟ ಮ್ಯಾಲೆ , ನಮ್ಮ ಕರ್ಮ ಅಂತ ಅಂದ್ಕೊಂಡು ಅನುಭವಿಸಲಿಕ್ಕೆ ಬೇಕು". ಎನ್ನುತ್ತಾ ಮಡದಿಯನ್ನು ಸಮಾಧಾನ ಗೊಳಿಸಲು ಪ್ರಯತ್ನಿಸಿದರು.

ರಾಧಾಬಾಯಿ " ಹೂಂ! ನಿಮಗೇನು ಗೊತ್ತಾಗಬೇಕು ನನ್ನ ಸಂಕಟ. ಮಹಾರಾಯ ನನ್ನ ದೊಡ್ಡವ್ವನ ಮಗ ನನ್ನ ತಂಗಿ ಉಂಡು ಉಟ್ಟು ಚೆಂದಾಗಿ ಇರಲಿ ಅಂತ ಆ ಜಾಗೆ ನನ್ನ ಹೆಸರಿಗೆ ಮಾಡಿಟ್ಟು ಹೋದ. ಅದನ್ನ ತಗೊಂಡು ಬಂದು ಈ ಪಿಶಾಚಿಗಳಿಗೆ ಬಡದಂಗಾತು." ಎಂದು ದುಖಿಸಿ ಮತ್ತೆ ಏನೋ ನೆನಪು ಮಾಡಿಕೊಂಡವರಂತೆ "ಅಲ್ರೀ! ನಮ್ಮ ಜಾಗೆ ನುಂಗಿದ್ದೂ ಅಲ್ಲದೆ ಕಾರ್ಯಕ್ರಮದಾಗ ಎಲ್ಲೂ ಗೋ–ಶಾಲೆಗೆ ಅಂತ ನಾವು ಜಾಗೆ ದಾನ ಮಾಡೇವಿ ಅಂತ ಹೇಳಲೇ ಇಲ್ಲ. ಇದೆಂಥಾ ಮೋಸ ಅಂತೀನಿ" "ಎಂದು ಗೋಳಾಡಿದರು. ಶಾಮಾಚಾರ್ರು "ನಮ್ಮ ಕರ್ಮ. ಇಲ್ಲಾಂದ್ರ ನಮ್ಮ ಮಗಳಿಗೆ ಯಾಕ ಅಪಘಾತ ಆಗಬೇಕು, ಅಂತಹ ವೇಳೆಕ್ಕ ಸರಿಯಾಗಿ ಯಾಕ ಆ ಹುಸೇನಿ ಬಂದು ರಕ್ತ ಕೊಡಬೇಕು. ಇದನ್ನ ನೆವಾ ಮಾಡಿಕೊಂಡು ಮಠದ ಮಂದಿ ನಮ್ಮ ಜಾಗ ಯಾಕ ಕಸಿದುಕೊಳ್ಳಬೇಕು, ಇದನ್ನೆಲ್ಲಾ ಅಸಹಾಯಕರಾಗಿ ನೋಡ್ಕೊಂತ ನಾವು ಯಾಕ ನೋವು ಉಣ್ಣಬೇಕು" ಎನ್ನುತ್ತಾ ಬಿಕ್ಕಿ–ಬಿಕ್ಕಿ ಅಳಲು ಶುರು ಮಾಡಿದರು. ಇದೇ ಸಮಯಕ್ಕೆ ಆಟೋ ನಿಂತಿತು. ದಂಪತಿಗಳಿಬ್ಬರೂ ದುಃಖ ಮರೆತು ನೋಡಿದರೆ ತಮ್ಮ ಮನೆ ಇನ್ನೂ ಬಂದಿಲ್ಲ. ಇಲ್ಲಿ ಯಾಕ ಆಟೋ ನಿಂತಿತು ಅಂತಾ ಆಶ್ಚರ್ಯ ಪಡುತ್ತಾ ರಾಧಾಬಾಯಿ "ಯಾಕಪ್ಪಾ! ಇಲ್ಲಿ ಆಟೋ ಯಾಕ ನಿಲ್ಲಿಸಿದಿ?" ಎಂದು ಪ್ರಶ್ನಿಸಿದರು. ಆಟೋದಿಂದ ಕೆಳಕ್ಕಿಳಿದ ಚಾಲಕ "ಆಚಾರಿ ಸಾಬ್! ಮಾಫ ಮಾಡಿ ಬಿಡ್ರಿ, ನಿಮಗೆ ಹಿಂಗೆಲ್ಲ ಅನ್ಯಾಯ ಮಾಡ್ತಾರ ಅಂತ ಗೊತ್ತಿದ್ರ ನಾ ನಿಮ್ಮ ಮಗಳಿಗೆ ರಕ್ತ ಕೊಡ್ತಾನ ಇರ್ಲಿಲ್ಲ." ಎಂದು ಅಳು ದನಿಯಲ್ಲಿ ನುಡಿದ. ಆಟೋದಿಂದ ಕೆಳಗಿಳಿದು ಆಚಾರ್ರು ಆಟೋ ಚಾಲಕನನ್ನು ಗುರುತಿಸಿ "ಅರೆರೆ! ಹುಸೇನಿ! ನೀನಾ! ಇದು ನಿನ್ನ ಆಟೋ ಏನಪಾ! ಗೊತ್ತಾಗ್ಲಿಲ್ಲೋ ಮಾರಾಯ. ನಮ್ಮ ಸಂಕಟಕ್ಕ ಏನೇನೋ ಬಡಬಡಿಸಿದೆ. ನಿನಗ ನನ್ನ ಮಾತಿನಿಂದ ನೋವಾಗಿರಬೇಕು. ಅದನ್ನೆಲ್ಲ ಮನಸಿಗೆ ಹಚ್ಕೊ ಬ್ಯಾಡಪ" ಎಂಬುದಾಗಿ ಪರಿಪರಿಯಾಗಿ ಕೇಳಿಕೊಂಡರು. ರಾಧಾಬಾಯಿ ಕೂಡ "ಇದ್ರಾಗ ನಿಂದೇನೂ ತಪ್ಪಿಲ್ಲ. ನಮ್ಮ ಕರ್ಮಕ್ಕ ನೀ ಯಾಕ ಕಣ್ಣೀರು ಹಾಕ್ತಿ" ಎಂದು ಸಮಾಧಾನ ಮಾಡಿದರು. ಆದರೆ ಹುಸೇನಿ ಆಚಾರ್ರ ಕೈ ಹಿಡ್ಕೊಂಡು ಮತ್ತೆ ಮತ್ತೆ "ಮಾಫ ಕರೋ ಆಚಾರಿ ಸಾಬ್!" ಎಂದು ಅಳು ಮಿಶ್ರಿತ ದನಿಯಲ್ಲಿ ಹೇಳುತ್ತಲೇ ಇದ್ದ.



(ಲೇಖಕರು , ಕನ್ನಡದ ಭರವಸೆಯ ಹೊಸ ಕಥೆಹಗಾರರಲ್ಲೊಬ್ಬರಾಗಿದ್ದು, ಸದ್ಯ ಹುಬ್ಬಳ್ಳಿಯ ನೈರುತ್ಯ ರೈಲ್ವೇ ಮುಖ್ಯ ಕಾರ್ಯಾಲಯದ ಅಧಿಕ್ಷಕರಾಗಿದ್ದಾರೆ)

# ನಾಟಕ, ಭಾವಗೀತೆ, ಪ್ರಶಸ್ತಿ ಪವಾಡ ಇತ್ಯಾದಿ: ಕೆಲ ಚಿಟಿ ಟಿಪ್ಪಣಿಗಳು

## ಸಂಚಾರಿ ಸತ್ಯ ಸೃಷ್ಟಿಸಿದ ರೊಮ್ಯಾಂಟೀಕರಣದ ಅಪಾಯಗಳು




**ಕೆ.**ವಿ. ಅಕ್ಷರ ಅವರ 'ಪರಮಪದ ಸೋಪಾನ' ಎಂಬ ಹೊಸ ನಾಟಕ ಮಾರ್ಚ್ ೧೭ರಂದು ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ಪ್ರದರ್ಶನಗೊಂಡಿತು. ಅಕ್ಷರ ಅವರ ಇತ್ತೀಚಿನ ನಾಟಕಗಳಂತೆ ಈ ನಾಟಕವೂ ವಸ್ತು ಮತ್ತು ರೂಪಗಳೆರಡರಲ್ಲೂ ಸ್ಥಳೀಯ ಆವರಣವೊಂದನ್ನು ಕಟ್ಟಿಕೊಡುವ ಮೂಲಕವೇ ವರ್ತಮಾನದ ಬದುಕಿನ ಸಾರ್ವತ್ರಿಕ ಬಿಕ್ಕಟ್ಟುಗಳನ್ನು ಪರಿಶೀಲಿಸುವ ಪ್ರಯತ್ನ ಮಾಡುತ್ತದೆ. ಸಾಗರ ಸೀಮೆಯ ಅಡಿಕೆ ಬೆಳೆಗಾರನಾದ ಹವ್ಯಕ ಬ್ರಾಹ್ಮಣನೊಬ್ಬನ ಕಥೆಯ ಮೂಲಕ ನಾಟಕಕಾರರು ಇಲ್ಲಿ ಜಾಗತೀಕರಣದ ಅರ್ಥಾತ್ ಮುಕ್ತ ಮಾರುಕಟ್ಟೆಯ ಆರ್ಥಿಕತೆ ಮಾಡಿರುವ ಸಾಮಾಜಿಕ ಅನಾಹುತಗಳನ್ನು ಹೇಳಲು ಪ್ರಯತ್ನಿಸಿದ್ದಾರೆ.

ದಿವಾಕರ ಭಟ್ಟ ಎಂಬ ಈ ಅಡಿಕೆ ಬೆಳೆಗಾರ ಓರ್ವ ತಾಳೆಮದ್ದಲೆಯ ಅರ್ಥಧಾರಿಯೂ ಆಗಿರುವುದರಿಂದ ಈ ದುರಂತವನ್ನು ನಮ್ಮ ಪಾರಂಪರಿಕ ಪಠ್ಯಗಳ– ಇಲ್ಲಿ ರಾಮ–ರಾವಣರ ಕಥೆ–ಜೊತೆ ಜೋಡಿಸಿ ವ್ಯಾಖ್ಯಾನ ಮಾಡುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ. ಹೀಗಾಗಿ ಎಲ್ಲ ಸಾಮಾಜಿಕ–ವರ್ತಮಾನದ–ದುರಂತಗಳು ಅಪರಿಹಾರ್ಹವಾದವು, ಚರಿತ್ರೆಯ ಅವಿಭಾಜ್ಯ ಭಾಗ ಎಂಬ ಒಂದು ತಾತ್ವಿಕ ಪಾಠವೂ ಇಲ್ಲಿ ಹೇಳಲ್ಪಡಲು ಸಾಧ್ಯವಾದಂತಿದೆ. ಉದಾಹರಣೆಗೆ, ಅಡಿಕೆ ವ್ಯಾಪಾರದ ಏಳುಬೀಳಿನಲ್ಲಿ ಅಂತರ್ಗತವಾಗಿರುವ ಜೂಜುಕೋರತನದ ಎಲ್ಲ ಉನ್ಮಾದ–ವಿನಾಶಗಳನ್ನೂ ಅನುಭವಿಸಿರುವ ಈ ದಿವಾಕರ ಭಟ್ಟ ಇದನ್ನು ರಾವಣನ ಸುವರ್ಣ ಲಂಕೆಯ ಅವನತಿಯ ಕಥೆಯ ಮೂಲಕ ವ್ಯಾಖ್ಯಾನಿಸುವಾಗ ಅಧಿಕಾರ–ಸಂಪತ್ತುಗಳ ದುರಂತ ಆರಂಭವಾಗುವ ಕ್ಷಣವನ್ನು ಗುರುತಿಸುವ ಅರ್ಥಧಾರಿತ್ವ ಮಾಡದೆ ಬಹು ನಾಟಕೀಯವಾಗಿ ತನ್ನ ವ್ಯಾಖ್ಯಾನವನ್ನು ಹೊಡೆದುಕೊಂಡು ಹೋಗುವುದು ಈ ನಾಟಕದ ಕೇಂದ್ರ ದೌರ್ಬಲ್ಯವಾಗಿದೆ. ನಮ್ಮ ಪಾರಂಪರಿಕ ಪಠ್ಯಗಳಲ್ಲಿ ಕಾಂಚನ'ಮೃಗ'ದ ಪ್ರಕರಣದ ಜೊತೆಗೇ ಕಾಂಚನ'ಮುಕ್ತಿ'ಯ ಪ್ರಕರಣವೂ ಇದೆ ಎಂಬುದನ್ನು ಇಲ್ಲಿ ನಾಟಕಕಾರರು ಮರೆತಂತಿದೆ.

ಅಕ್ಷರ ಅವರಿಗೆ ಈ ನಾಟಕದ ವಸ್ತುವನ್ನು ನಿರ್ವಹಿಸಲು ಬೇಂದ್ರೆಯವರ 'ಕುರುಡು ಕಾಂಚಾಣ ಕುಣಿಯುತ್ತಲಿತ್ತ, ಕಾಲಿಗೆ ಬಿದ್ದವರ ತುಳಿಯುತ್ತಲಿತ್ತ' ಎಂಬ ರುದ್ರ ನಾಟ್ಯದ ಗೀತೆಯ ಬದಲಾಗಿ ಅಡಿಗರ 'ಯಾವ ಮೋಹನ ಮುರಳಿ ಕರೆಯಿತು...' ಎಂಬ ಭಾವ–ಗೀತೆ ಹೆಚ್ಚು 'ಉಪಯುಕ್ತ'ವಾಗಿ ಕಂಡಿರುವುದು ಇದೇ ಕಾರಣದಿಂದಲೇ. ಅಡಿಗರ ಈ ಗೀತೆಯ ತಾತ್ಪರ್ಯದಂತಿರುವ 'ಇರುವುದೆಲ್ಲ ಬಿಟ್ಟು ಇರದುದೆರೆಡೆಗೆ ತುಡಿವುದೇ ಜೀವನ' ಎಂಬ ಸಾಲು ಈ ನಾಟಕ ಯಾವುದನ್ನು ಆಳದಲ್ಲಿ ಶೋಧಿಸಲು ಹೊರಟಿದೆಯೋ ಆ ಪಶ್ಚಿಮದ ಆಧುನಿಕತೆಯ ಬಗ್ಗೆ ಹೇಳುವ ಈ ಒಂದು ಸಂಚಾರಿ ಸತ್ಯದ ಸುತ್ತ ಸೃಷ್ಟಿಯಾಗುವ ವಸ್ತುಸ್ಥಿತಿಯ ರೊಮ್ಯಾಂಟೀಕರಣವೇ ಈ ನಾಟಕವನ್ನು ವಸ್ತು ಮತ್ತು ರೂಪಗಳೆರಡರ ನೆಲೆಯಲ್ಲೂ ದಾರಿ ತಪ್ಪಿಸಿದಂತಿದೆ. ನಾಟಕದ ಕೇಂದ್ರಕ್ಕೆ ಸಂಬಂಧವೇ ಇಲ್ಲದಂತೆ ಕೇಳಿಬರುವ ವೈದಿಕ ಶ್ಲೋಕಗಳ ಪಠಣ, ವ್ಯಾಖ್ಯಾನ ಈ ಪರಂಪರೆ ಕುರಿತ 'ತಪ್ಪು' ಕಲ್ಪನೆನೆಗಳಿಗೆ ಸ್ಪಷ್ಟೀಕರಣ ಕೊಡಲೆಂದೇ ಸಂದರ್ಭ ಮತ್ತು ವಿಶೇಷವಾಗಿ ಸ್ತ್ರೀ ಪಾತ್ರಗಳ ನಿರ್ಮಾಣ ಹಾಗೂ ಪೋಷಣೆ ಕೈಗೊಂಡಂತಿದ್ದು, ಇದು ನಾಟಕ ರೂಪದ ಸಮಗ್ರತೆಗೇ ಭಂಗ ತಂದಿದೆ. ಹೀಗಾಗಿ ಒಟ್ಟು ನಾಟಕ, ವರ್ತಮಾನದ ಬಿಕ್ಕಟಿಗೆ ನಮ್ಮ ಒಂದು ನಿರ್ದಿಷ್ಟ ಪರಂಪರೆಯಲ್ಲೇ ಪರಿಹಾರವಿದೆ ಎಂಬ ಜಡ ಸೂಚನೆ ನೀಡಿ ನಾಟಕದೊಳಗಿನ ಆಟ ಟೊಳ್ಳೆನಿಸುತ್ತದೆ. ಆರಂಭದಲ್ಲಿ ಬರುವ ಹೆಣ ಕಾಯುವ, ಹೆಣ ಮಾಯವಾಗುವ, ಬೋಂಡಾ ಅಂಗಡಿಯ ಮತ್ತು ಮೋಟರ್ ಬೈಕುಗಳ ಆರ್ಭಟದ ದೃಶ್ಯಗಳು ಯಾವುವೂ ಈ ಟೊಳ್ಳನ್ನು ತುಂಬಲಾರದಷ್ಟು ನಾಟಕದ ಮುಖ್ಯ ಆಟದಿಂದ ಹೊರಗಿವೆ.

ಮಿಕ್ಕಂತೆ ನಾಟಕ ಪ್ರದರ್ಶನದ ಬಗ್ಗೆ ಹೇಳುವಂತಹ ವಿಶೇಷವೇನಿಲ್ಲ. ನೀನಾಸಂನ ರಂಗ ಕೌಶಲ್ಯಗಳು ಯಾವಾಗಲೂ ಮೆಚ್ಚುವಂತೆಯೇ ಇರುವವಾದರೂ ಈ ನಾಟಕವನ್ನು ಅಭಿನಯಿಸಿದ ಈ ವರ್ಷದ ವಿದ್ಯಾರ್ಥಿ ತಂಡ ಅಭಿನಯದ ಹಲವು ಪಾತಳಿಗಳಲ್ಲಿ ಇನ್ನೂ ಪಳಗಬೇಕೆನ್ನಿಸಿದ್ದು ನಿಜ.

## ಲಕ್ಷ್ಮೀನಾರಾಯಣ ಭಟ್ಟರಿಗೆ ವಿಷಾದಮಯ ವಿದಾಯ...




**ಜ**ನಪ್ರಿಯ ಕವಿ. ವಿಮರ್ಶಕ, ಅಧ್ಯಾಪಕ ಮತ್ತು ವಾಗ್ಮಿ ('ರುಚಿಕಟ್ಟಾದ ಮಾತುಗಾರ' ಎಂಬರ್ಥದಲ್ಲಿ) ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ನಿಧನರಾಗಿದ್ದಾರೆ. ಅವರ ಸಾವಿಗಿಂತ ಹೆಚ್ಚಾಗಿ ಅವರ ಅಂತ್ಯ ಸಂಸ್ಕಾರಕ್ಕೆ ಬೆರಳೆಣಿಕೆಯ ಜನವೂ ಇರಲಿಲ್ಲ ಎಂಬ ಸಂಗತಿಯೇ ದೊಡ್ಡ ಸುದ್ದಿಯಾಗಿರುವುದು ದುಃಖದ ಮತ್ತು ವಿಪರ್ಯಾಸದ ಸಂಗತಿಯಾಗಿದೆ. ತುಂಬ ಜನಬಳಕೆಯಿದ್ದ ಮತ್ತು ತಮ್ಮ ಸರಳ ಲಯಗಳ ಸುಲಲಿತ ಭಾವಗೀತೆಗಳ ಮೂಲಕ ಸಮಕಾಲೀನ ಗೀತಕಾರರಲ್ಲೇ ಅತ್ಯಂತ ಜನಪ್ರಿಯರಾಗಿದ್ದ ಭಟ್ಟರು ತಮ್ಮ ಕೊನೆಯ ದಿನಗಳಲ್ಲಿ ಒಂಟಿಯಾಗಿಬಿಟ್ಟಿದ್ದರು. ಅವರ ವಾರಿಗೆಯವರಲ್ಲಿ ಬಹುಶಃ ಅವರೇ ಕೊನೆಯವರು. ಜೊತೆಗೆ ಭಟ್ಟರು ತಮ್ಮ ಸಾಹಿತ್ಯ ಮತ್ತು ಹವ್ಯಾಸಗಳಲ್ಲಿ ಎಷ್ಟೇ ಆಧುನಿಕರಾಗಿದ್ದರೂ, ಕುಟುಂಬದ ಮಟ್ಟಿಗೆ ಕಟ್ಟ'ಸಂಪ್ರದಾಯಸ್ಥರೇ ಆಗಿದ್ದುದು ಅವರ ಪಾರ್ಥಿವ ಶರೀರದ ಈ ವಿಷಾದಮಯ ವಿದಾಯಕ್ಕೆ ಕಾರಣವಾಗಿರಬಹುದು. ಒಮ್ಮೆ ಅವರು, –ಮೂರು ದಶಕಗಳ ಹಿಂದೆ ಶಿವಮೊಗ್ಗದಲ್ಲಿ ಅಶ್ವತ್ಥ್–ಸುಬ್ಬಣ್ಣ ಜೋಡಿಯೊಡನೆಯ ಒಂದು ಸಂಜೆಯ ಗೋಷ್ಠಿಯ ಕಾವಿನಲ್ಲಿ 'ನನ್ನ ಹೆಸರಿನಲ್ಲಿರುವ ಭಟ್ಟ ಎಂಬ ಶಬ್ದ ಹಲವು ಬಾರಿ ತೊಂದರೆ ಕೊಡುತ್ತದಪ್ಪ!' ಎಂದು ಅಲವತ್ತುಕೊಂಡದದ್ದು ಈಗ ನೆನಪಾಗುತ್ತಿದೆ. ಹೇಗೂ ಅವರು ಅಡಿಗರ ಗರಡಿಯಲ್ಲಿ 'ನವ್ಯ'ದ ದೀಕ್ಷೆ ಪಡೆದೇ ಸಾಹಿತ್ಯ ಕ್ಷೇತ್ರ ಪ್ರವೇಶ ಮಾಡಿ ಹೊರಕ್ಕೆ 'ಹೊರಳಿ'ಕೊಂಡವರಲ್ಲವೆ?!?

ಹಾಗೆ ನೋಡಿದರೆ ಭಟ್ಟರು ಕನ್ನಡದ ಮಧ್ಯಮ ವರ್ಗ ಆಗಾಗ ಖಯಾಲಿಗಾಗಿ ಮೆಲುಕು ಹಾಕಬಲ್ಲ ಹಲವು ಸರಳ ಸುಂದರ ಭಾವಗೀತೆಗಳನ್ನು ರಚಿಸಿ 'ಕ್ಯಾಸೆಟ್ ಕವಿಗಳು' ಎಂಬ ಅಭಿದಾನದಲ್ಲಿನ ವ್ಯಂಗ್ಯದ ಮೊನಚನ್ನು ಕಳಚುವಲ್ಲಿ ಯಶಸ್ವಿಯಾದವರು. 'ಈ ಬಾನು ಈ ಚುಕ್ಕಿ', 'ಎಂದೂ ಕಾಣದಂಥ ಕನಸು', 'ಮಲಗು ಮಲಗೆನ್ನ ಮರಿಯೇ' ಮುಂತಾದ ಗೀತೆಗಳು ಕನ್ನಡ ಶಬ್ದಲೋಕದ ಬಹು ಕಲ್ಪನಾಶೀಲವಾದ ಲಯಬದ್ಧ ಸೂರೆಯೇ ಹೌದು. ಹಾಗೇ ಅವರು ಹಳೇ ಮೈಸೂರು ಸೀಮೆಗೆ ಶಿಶುನಾಳ ಶರೀಫರನ್ನು ಪರಿಚಯಿಸಿದ್ದೂ ಅವರ ಹೆಗ್ಗಳಿಕೆಯೇ.. ಕೀರ್ತಿಯ ವಿಷಯದಲ್ಲಿ ಸ್ವಲ್ಪ ಆತುರಗಾರಂತೆ ಕಾಣುತ್ತಿದ್ದ ಭಟ್ಟರು ಇದಕ್ಕಾಗಿ ತಮ್ಮ ಮಾತುಗಾರಿಕೆಯ ಕುಶಲತೆಯ ಮೂಲಕ ತಮ್ಮದೇ ಗುಂಪು ರಾಜಕಾರಣ ಮಾಡಲು ಹೋಗಿ ಇಲ್ಲಿ ಸೋತರಾದರೂ, ಅದೇ ಕುಶಲತೆ ವಿದೇಶಗಳ ಕನ್ನಡಿಗರ ಮಧ್ಯೆ ಕೆಲಸ ಮಾಡಿ ಅವರು ಇಲ್ಲಿ ಗಳಿಸಲಪೇಕ್ಷಿಸಿದ್ದನ್ನೆಲ್ಲ ಅಲ್ಲಿ ಗಳಿಸಿದರು.

ಆದರೆ ಇದಾವುದೂ, ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿ ಅವರಿಗೆ ಸಾಹಿತ್ಯ ಕ್ಷೇತ್ರದ ಜೀವಮಾನ ಸಾಧನೆಗಾಗಿ ಗೌರವ ಪ್ರಶಸ್ತಿ ನೀಡದೇ ಹೋದುದಕ್ಕೆ ಕಾರಣವಾಗಲಾರದು. ಇತ್ತೀಚಿನ ವರ್ಷಗಳಲ್ಲಿ ಈ ಗೌರವಗಳನ್ನು ಎಂಥೆಂಥವರಿಗೆ ಏಕೆ ದಯಪಾಲಿಸಲಾಗುತ್ತಿದೆ ಎಂಬುದನ್ನು ಗಮನಿಸಿದವರಿಗೆ ಇಲ್ಲಿನ ನೀಚತನ ಅರ್ಥವಾದೀತು..

## 'ಮೊಯ್ಲಿಯವರ ಅಹಿಂಸಾ ಪ್ರಶಸ್ತಿ ದಿಗ್ವಿಜಯಂ!




ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿಯ ಸ್ಥಿತಿ ಇದಾದರೆ, ಈವರೆಗೆ ಹಲವು ಏಳುಬೀಳುಗಳ ನಡುವೆಯೂ ಒಂದಿಷ್ಟು ಮರ್ಯಾದೆ ಉಳಿಸಿಕೊಂಡಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಈ ವರ್ಷ ಪ್ರಾಯಃ ಸಿಎನ್ನಾರ್ ಮತ್ತು ವಿವೇಕ ರೈಗಳ ಹೊರತಾಗಿ ಇನ್ನಾರೂ ಓದದ, ಹೆಸರೂ ಕೇಳದ ವೀರಪ್ಪ ಮೊಯ್ಲಿಯವರ 'ಶ್ರೀಬಾಹುಬಲಿ ಅಹಿಂಸಾ ದಿಗ್ವಿಜಯಂ' ಎಂಬ ಮಹಾಕಾವ್ಯಕ್ಕೆ ಘೋಷಿಸಿ ಅದರ ಮಾನವನ್ನೂ ಸಂಪೂರ್ಣ ಕಳೆದಿದೆ..ಇದರ ಸಕ್ರಮ ವ್ಯವಸ್ಥೆ ಮಾಡಿದ ಕಂಬಾರ–ಸಿದ್ಧಲಿಂಗಯ್ಯ ಜೋಡಿಯ ಸಾಹಿತ್ಯಾಡಳಿತದ ಕಾರ್ಯದಕ್ಷತೆಗಾಗಿ ಅವರನ್ನು ಅಭಿನಂದಿಸಬೇಕಿದೆ. ಮೊಯ್ಲಿಯವರು ಇಂತಹ ಪ್ರಶಸ್ತಿಗೆ ಭಾಜನರಾಗಲಾರರು ಎಂಬುದು ಈ ಮಾತಿನ ಅರ್ಥವಲ್ಲ. ಆದರೆ ಸಾರಸ್ವತ ಲೋಕದ ಮಧ್ಯೆ ಬಂದು ಮೌಲ್ಯಮಾಪನಕ್ಕೊಳಗಾಗುವ ಮುನ್ನವೇ ಕೃತಿಯೊಂದು ಹೀಗೆ ಇಂತಹ ಪ್ರಶಸ್ತಿಯ ಮೂಲಕ ದಿಢೀರನೆ ಅವತರಿಸುವ ಇಂತಹ ಸಾಹಿತ್ಯಾಪಚಾರದ 'ಯೋಜನೆ'ಯ ಬಗ್ಗೆ ಈ ವಿಷಾದ–ಜಿಗುಪ್ಸೆಗಳಷ್ಟೆ. ಆದರೆ ಮೊಯ್ಲಿಯವರ ಇಂತಹ ಪ್ರಶಸ್ತಿ ಪವಾಡ ಪ್ರದರ್ಶನ ಇದೇ ಮೊದಲಲ್ಲವಲ್ಲ?

–ಡಿಎಸ್ಸೆನ್

## ಪುಸ್ತಕಾವಲೋಕನ

ಪು: ಕಂಡವರಿಗಷ್ಟೆ (ಬೇಂದ್ರೆ–೧೨೫) ಸಂ: ಡಾ. ಗೀತಾ ವಸಂತ ಮತ್ತು ರಾಜಕುಮಾರ ಮಡಿವಾಳರ ಪ್ರ: ಬೇಂದ್ರೆ ಬದುಕು–ಬರಹ ಪ್ರಕಾಶನ(೯೮೮೬೪೫೬೦೨೦) ಪು: ೪೦೦ ಬೆ: ರೂ. ೨೭೫/-

### ಬೇಂದ್ರೆ ಕಾವ್ಯದ ಮರು ಓದು




ಬಗೆದಷ್ಟೂ ದಕ್ಕುತ್ತಲೇ ಇರುವ ಬೇಂದ್ರೆ ಕಾವ್ಯ ತನ್ನ ನಿತ್ಯ ನೂತನ ಗುಣದಿಂದಾಗಿ ಸಾರ್ವಕಾಲಿಕತೆಯ ಮನ್ನಣೆಯನ್ನು ಪಡೆದುಕೊಂಡಿದೆ. ಹಾಗಾಗಿ, ಕಾಲಕಾಲಕ್ಕೆ ಬೇಂದ್ರೆ ಕಾವ್ಯಪ್ರಪಂಚವು ಅರ್ಥಪೂರ್ಣವಾದ ಮರು ಓದನ್ನು, ಮರು ಶೋಧನೆಯನ್ನು ಬಯಸುತ್ತದೆ. ಬದಲಾದ ಕಾಲಘಟ್ಟದಲ್ಲಿ ಒಬ್ಬ ಲೇಖಕನನ್ನು ಮರು ಶೋಧ ಮಾಡುವುದು ಎಂದರೆ ಅವರ ಪದ್ಯಗಳಿಗಿರುವ ಆಳ–ವಿಸ್ತಾರವನ್ನು ಅರಿಯುವುದು ಎಂದರ್ಥ. ಈ ಹಿನ್ನಲೆಯಲ್ಲಿ ಬೇಂದ್ರೆ ಕಾವ್ಯದ ಕುರಿತಾಗಿ ವಿಮರ್ಶಕರಾದ ಗೀತಾ ವಸಂತ ಮತ್ತು ರಾಜಕುಮಾರ ಮಡಿವಾಳರ– ಇವರುಗಳು ಸಂಪಾದಿಸಿರುವ ವಿಮರ್ಶಾ ಸಂಕಲನ 'ಕಂಡವರಿಗಷ್ಟೆ' ಇದೀಗೆ ಪ್ರಕಟಗೊಂಡಿದ್ದು, ಬೇಂದ್ರೆ ಕಾವ್ಯಕ್ಕಿರುವ 'ಕಾಲಾತೀತ' ಗುಣವನ್ನು ಶೋಧಿಸುವ ಮಹದಾಸೆಯನ್ನು ಇಟ್ಟುಕೊಂಡಿದೆ.

ಒಟ್ಟು ೬೬ ಲೇಖನಗಳಿರುವ ಈ ಸಂಕಲನವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಭಾಗವನ್ನು 'ಬೇಂದ್ರೆ : ಪರಂಪರೆಯ ಬನಿ' ಎಂದು ಅರ್ಥಪೂರ್ಣವಾಗಿ ವಿಂಗಡಿಸಿ ಬೇಂದ್ರೆಯವರ ವ್ಯಕ್ತಿತ್ವ ಮತ್ತು ಅವರ ಕಾವ್ಯಪರಂಪರೆಯನ್ನು ಒರೆಹಚ್ಚುವ ಲೇಖನಗಳನ್ನು ಜೋಡಿಸಲಾಗಿದೆ. ಎರಡನೆಯ ಭಾಗ "ಬೇಂದ್ರೆ: ಎದೆಯ ದನಿ" ಯಲ್ಲಿ ಬೇಂದ್ರೆಯವರ ಬಿಡಿ ಬಿಡಿ ಕಾವ್ಯಗಳ ವ್ಯಾಖ್ಯಾನ ಹಾಗೂ ಅವರೊಂದಿಗಿನ ಒಡನಾಟದ ಅನುಭವಗಳನ್ನು ದಾಖಲಿಸಲಾಗಿದೆ. ಈ ಎರಡೂ ಭಾಗಗಳನ್ನು ಒಟ್ಟೊಟ್ಟಾಗಿ ನೋಡಿದಾಗ ಬೇಂದ್ರೆ ಕಾವ್ಯ ಪ್ರಪಂಚಕ್ಕಿರುವ ಸಂಕೀರ್ಣತೆ, ವಿಭಿನ್ನ ಆಯಾಮಗಳು ಮತ್ತು ಅರ್ಥ ವಿಸ್ತರಣೆಯ ಸಾಧ್ಯತೆಗಳು ಗೋಚರಿಸುತ್ತದೆ.

ಮೊದಲನೆಯ ಭಾಗದಲ್ಲಿ ಪ್ರಕಟವಾಗಿರುವ 'ಕವಿ ಗುರುಗಳು' ಶೀರ್ಷಿಕೆಯ ಲೇಖನದಲ್ಲಿ ರಹಮತ್ ತರೀಕೆರೆಯವರು ಕೆಲವೊಂದು ಆಸಕ್ತಿಕರ ಭಿನ್ನಾಭಿಪ್ರಾಯವನ್ನು ದಾಖಲಿಸುತ್ತಾರೆ. ಅವರ ಪ್ರಕಾರ "ಲೋಕದ ಅನುಭಾವಿ ಸಂತ ಕವಿಗಳ ಕುರಿತು ಒಲವು ತೋರುವ ಬೇಂದ್ರೆ, ಸ್ಥಳೀಯ ಸಂತರ ಬಗ್ಗೆ ಅನಾಸಕ್ತರಾಗಿದ್ದರು" (ಪು. ೭೪). ಇದಕ್ಕೆ ಅವರೇ ಉತ್ತರಿಸುತ್ತಾ "ಸ್ಥಳೀಯ ಸಂತರ ಹೆಸರಲ್ಲಿ ರೂಢವಾಗಿರುವ ಆಚರಣೆಗಳು ಮತ ಮೌಢ್ಯಕ್ಕೆ ಕಾರಣವಾಗುತ್ತಿದೆ ಎಂದು ಕಳವಳಿಸಲಾಗುತ್ತಿದೆ" ಎಂದು ದಾಖಲಿಸುತ್ತಾರೆ. ಆದರೆ, ಮೌಢ್ಯಗಳ ಕಾರಣದಿಂದಾಗಿ ಬೇಂದ್ರೆಯವರು ಸ್ಥಳೀಯ ಸಂತರನ್ನು ಅನುಸಂಧಾನ ಮಾಡಲಿಲ್ಲ ಎಂಬುದು ಚರ್ಚಾರ್ಹ ವಿಚಾರವೇ ಸರಿ.

ಇನ್ನೊಂದು ಲೇಖನದಲ್ಲಿ ಪರಮಾರ್ಥ ಮತ್ತು ಇಹ ಎರಡನ್ನು ಒಟ್ಟೊಟ್ಟಿಗೆ ನೋಡುವ ನೋಟಕ್ರಮ ಬೇಂದ್ರೆ ಕಾವ್ಯಕ್ಕಿದೆ ಎಂದು ದಾಖಲಿಸುವ ಬಸವರಾಜ ಕಲ್ಗುಡಿಯವರು ಬೇಂದ್ರೆಯವರ ಆಧ್ಯಾತ್ಮವು ಏಕಕಾಲಕ್ಕೆ "ವೈಯಕ್ತಿಕವೂ, ನಿಗೂಢವೂ ಮತ್ತು ಬೌದ್ಧಿಕವೂ" ಆಗಿದೆ ಎಂದು ವಾದಿಸುತ್ತಾರೆ. ಹಾಗೆಯೇ ಮತ್ತೊಂದು ಲೇಖನದಲ್ಲಿ ಎನ್. ಜಗದೀಶ ಕೊಪ್ಪ ಇವರು ಬೇಂದ್ರೆಯವರು ಬೆಳೆದ ಪರಿಸರ ವೈದಿಕ ಪರಂಪರೆಗೆ ಸೇರಿದರೂ ಸಹ ಜಡ್ಡುಗಟ್ಟಿದ ಆಸ್ತಿಕತೆಯನ್ನು ಮೀರುವ ಅನುಭಾವ ಪ್ರಜ್ಞೆ ಮತ್ತು ಅಲೌಕಿಕತೆಯ ದೃಷ್ಟಿಕೋನ ಅದರಲ್ಲಿತ್ತು ಎಂದು ಅಭಿಪ್ರಾಯ ಪಡುತ್ತಾರೆ.

ಈ ವಿಮರ್ಶಾ ಸಂಕಲನದಲ್ಲಿ ಬೇಂದ್ರೆ ಕಾವ್ಯಪ್ರಪಂಚಕ್ಕಿರುವ ನಿಗೂಢತೆ, ವಿಶ್ವಾತ್ಮಕತೆ, ಅನುಭಾವಿ ನೆಲೆ, ಆಧ್ಯಾತ್ಮಿಕತೆ, ಮನುಷ್ಯ ಸಂಬಂಧದಲ್ಲಿರುವ ಸಂಕೀರ್ಣತೆಗಳು ಮೊದಲಾದವುಗಳನ್ನು ವಿಮರ್ಶಿಸುವ ಹಲವಾರು ಲೇಖನಗಳಿವೆ. ಅಂತೆಯೇ ಅವರ ಕಾವ್ಯಕ್ಕಿರುವ ಸಮಕಾಲೀನತೆಯ ಗುಣವನ್ನು ಕೆಲ ಲೇಖನಗಳು ಪ್ರಸ್ತಾಪಿಸುತ್ತವೆ. ಉದಾಹರಣೆಯಾಗಿ ಅಪ್ಪಗೆರೆ ಸೋಮಶೇಖರ ಅವರು ಬೇಂದ್ರೆ ಕಾವ್ಯಕ್ಕೆ "ರಾಷ್ಟ್ರೀಯತೆಯನ್ನು ವಿಶ್ವಾತ್ಮಕತೆಯನ್ನಾಗಿ ನೋಡುವ ಮತ್ತು ವಿಶ್ವಾತ್ಮಕತೆಯನ್ನು ರೂಪಾಂತರಿಸುವ ಶಕ್ತಿಯಿದೆ" ಎಂದು ವ್ಯಾಖ್ಯಾನಿಸುತ್ತಾ, ಅವರ ಕಾವ್ಯಪ್ರಪಂಚವು ಆಗ ತಾನೆ ರೂಪುಗೊಳ್ಳುತ್ತಿರುವ ರಾಷ್ಟ್ರೀಯತೆಯ ಪರಿಕಲ್ಪನೆಗೆ ಮುಖಾಮುಖಿಯಾಗಿದೆ." ಎಂದು ಅಭಿಪ್ರಾಯಪಡುತ್ತಾರೆ. ಭಾರತೀಯ ರಾಷ್ಟ್ರೀಯತಾವಾದವನ್ನು ಬೇಂದ್ರೆ ಕಾವ್ಯ ಸಂಕುಚಿತಗೊಳಿಸಿ ನೋಡಿಲ್ಲ ಎಂದು ವಾದಿಸುವ ಈ ಲೇಖನವು ಕನ್ನಡ ರಾಷ್ಟ್ರೀಯತೆಯನ್ನು ಸಹ ಬೇಂದ್ರೆಯವರು ಭಾರತೀಯ ರಾಷ್ಟ್ರೀಯತೆಯ ಪ್ರಜ್ಞೆಯ ಜೊತೆಗೆ ಹೋಲಿಸಿದ್ದಾರೆ ಎಂದು ವಾದಿಸುತ್ತಾರೆ. ಉಗ್ರ ರಾಷ್ಟ್ರೀಯತೆಯ ಈ ಹಿಂಸಾತ್ಮಕ ದಿನಗಳಲ್ಲಿ ಬೇಂದ್ರೆಯವರ ಕಾವ್ಯಪ್ರಪಂಚಕ್ಕಿರುವ ಈ ಬಗೆಯ ಉದಾರವಾದಿ ನೆಲೆಯನ್ನು ಲೇಖಕರು ಚರ್ಚಿಸಿರುವುದು ಹೆಚ್ಚು ಅರ್ಥಪೂರ್ಣವಾಗಿದೆ.


'ಬೇಂದ್ರೆ : ಎದೆಯ ದನಿ' ಶೀರ್ಷಿಕೆಯಲ್ಲಿ ಇವರ ಕಾವ್ಯದ ಕುರಿತು ಜಯಂತ ಕಾಯ್ಕಿಣಿ, ಡಿ.ಎಸ್. ನಾಗಾಭೂಷಣರಂತಹ ಪ್ರಸಿದ್ಧ ಲೇಖಕರ ಜೊತೆಗೆ ಹೊಸ ತಲೆಮಾರಿನ ಯುವ ಲೇಖಕರ ಧ್ವನಿಯನ್ನು ಇಲ್ಲಿ ಸಂಕಲಿಸಲಾಗಿದೆ. ಯುವ ಲೇಖಕ/ಕಿಯರು ಬೇಂದ್ರೆಯಂತಹ ಮೇರು ಲೇಖಕರನ್ನು ಓದಿಕೊಂಡು ಬೆಳೆಯುತ್ತಿರುವುದು ಸಂತಸದ ಸಂಗತಿಯೇ ಸರಿ. ಆದರೆ, ಕೆಲ ಲೇಖನಗಳು ವೈಯಕ್ತಿಕ ನೆಲೆಯಲ್ಲಿವೆ ಮತ್ತು ಕೆಲ ಲೇಖನಗಳು ಬೇಂದ್ರೆ ಕಾವ್ಯ ಪ್ರಪಂಚವನ್ನು ತೆಳುವಾಗಿ ನೋಡಿವೆ. ಈ ಭಾಗವು ಬೇಂದ್ರೆಯವರೊಂದಿಗಿನ ಒಡನಾಟದ ಆಪ್ತ ಚಿತ್ರಣವನ್ನು ಸಹ ನೀಡುತ್ತದೆ. ಡಿ ಎಸ್ ನಾಗಭೂಷಣ ಅವರು ಕಳೆದುಹೋದ ಬೇಂದ್ರೆಯವರ ಧಾರವಾಡದ ಅನುಭವವನ್ನು ವಿಷಾದದಿಂದ ದಾಖಲಿಸಿದರೆ, ನಾಗರಾಜ ವಸ್ತಾರೆಯವರು ಗಂಗಾವತರಣದ ಕೆಲ ಸಾಲುಗಳನ್ನು ಉಲ್ಲೇಖಿಸುತ್ತಾ, 'ಧ್ವನಿ' ಪ್ರಪಂಚವು ಸೃಷ್ಟಿಸುವ ಅದ್ಭುತ ಲೋಕವನ್ನು ಎತ್ತಿ ತೋರಿಸಿದ್ದಾರೆ. ಆದರೆ ಕೇವಲ ಕೆಲ ಸಾಲುಗಳು ಸೃಷ್ಟಿಸುವ ಮಾಯಾಲೋಕದ ಮೂಲಕ ಬೇಂದ್ರೆ ಕಾವ್ಯಪ್ರಪಂಚವನ್ನು ಅನಾವರಣ ಮಾಡುವುದು ಅಷ್ಟು ಪರಿಣಾಮಕಾರಿಯಲ್ಲ ಎಂಬುದು ನನ್ನ ಅಭಿಪ್ರಾಯ.

ಒಟ್ಟಾರೆಯಾಗಿ, ಬೇಂದ್ರೆ ಕಾವ್ಯಕ್ಕಿರುವ ವಿಭಿನ್ನ ನೆಲೆಗಳನ್ನು ದಾಖಲಿಸುವ ಈ ವಿಮರ್ಶಾ ಸಂಕಲನ 'ಕಂಡವರಿಗಷ್ಟೇ' ಅಲ್ಲ 'ಕಾಣದವರಿಗೂ' ಬೇಂದ್ರೆ ಕಾವ್ಯದ ಓದಿಗೆ ಪ್ರೇರೇಪಿಸಬಲ್ಲದು. ಹೊಸ ಬಗೆಯ ಸಿದ್ಧಾಂತಗಳ ಮೂಲಕ ನಮ್ಮ ಲೇಖಕರನ್ನು ಮರುಶೋಧ ಮಾಡುತ್ತಿರುವ ದಿನಗಳಲ್ಲಿ ಈ ಪುಸ್ತಕವು ಕನ್ನಡ ವಿಮರ್ಶಾ ಲೋಕಕ್ಕೆ ಇನ್ನೊಂದು ಅರ್ಥಪೂರ್ಣ ಸೇರ್ಪಡೆಯಾಗಿದೆ. ಆದರೆ ಲೇಖನಗಳ ವಿಂಗಡಣೆಗೆ ಇನ್ನೂ ಹೆಚ್ಚಿನ ಸೈದ್ಧಾಂತಿಕ ವಿಸ್ತಾರ ಇರಬೇಕಾಗಿತ್ತು ಎಂದೆನಿಸುತ್ತದೆ.

**–ಟಿ. ಅವಿನಾಶ**

ಪು: ಬ್ರಹ್ಮ (ಕಾದಂಬರಿ) ಲೇ: **ಗೋಪಾಲಕೃಷ್ಣ ಪೈ ಪ್ರ: ವಸಂತ ಪ್ರಕಾಶನ, ಬೆಂಗಳೂರು**((೦೮೦–೨೨೪೪೩೯೯೬) ಪು: **೨೯೪ ಬೆ: ರೂ. ೨೫೦/-**

### ಹೊಸ ಬೆಳಕಿನಲ್ಲಿ ಭಾರತ ಕಥನ




ನಮ್ಮ ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳನ್ನು ಮತ್ತೆ ಮತ್ತೆ ನೋಡುವ, ತಮಗೆ ಬೇಕಾದಂತೆ ಬಗ್ಗಿಸಿಕೊಳ್ಳುವ ಪ್ರಯತ್ನ ನಿರಂತರವಾಗಿ ನಡೆದುಕೊಂಡು ಬಂದಿದೆ. ಪ್ರತಿಯೊಂದು ತಲೆಮಾರೂ ತನ್ನ ಕಾಲದ ಅನುಭವ ಮತ್ತು ಅರಿವಿನ ಬೆಳಕಿನಲ್ಲಿ ಪುರಾಣ, ಇತಿಹಾಸ ಮತ್ತು ಪರಂಪರೆಗಳನ್ನು ಮತ್ತೆಮತ್ತೆ ನೋಡುವ, ಮಾರ್ಪಡಿಸಿಕೊಳ್ಳುವ, ಹೊಸಹೊಸ ಅರ್ಥ, ಧ್ವನಿ ಸಾಧ್ಯತೆಗಳನ್ನು ಕಂಡುಕೊಳ್ಳುವ ಪರಿಪಾಠ ಎಲ್ಲ ದೇಶಗಳಲ್ಲಿಯೂ, ಭಾಷೆಗಳಲ್ಲಿಯೂ ನಡೆದುಬಂದಿದೆ. ಇಂಥ ಪ್ರಯತ್ನಗಳಲ್ಲಿ ಮಹಾಕಾವ್ಯಗಳ, ಪುರಾಣಗಳ ಮೂಲಸ್ವರೂಪದಲ್ಲಿ ಬದಲಾವಣೆಯಾಗದಿದ್ದರೂ ಇವುಗಳ ಒಳನೇಯ್ಗೆಯಲ್ಲಿ, ವಿನ್ಯಾಸಗಳಲ್ಲಿ, ಪಾತ್ರಗ್ರಹಿಕೆಯಲ್ಲಿ ಬದಲಾವಣೆಗಳು, ರೂಪಾಂತರಗಳು ಆಗಿ ಹೊಸ ಅರ್ಥಸಾಧ್ಯತೆಗಳು ದಕ್ಕುವುದು ಉಂಟು. ಹೊಸಬೆಳಕಿನಲ್ಲಿ ವರ್ತಮಾನದ ಬದುಕಿಗೆ ಪುರಾತನ ಕೃತಿಗಳು ಹತ್ತಿರವಾಗುತ್ತವೆ.

ಇಂಥ ಪ್ರಯತ್ನಗಳು ನಡೆದಾಗ, ವ್ಯಾಸ ವಾಲ್ಮೀಕಿಯರ ಈ ಮಹಾಕಾವ್ಯಗಳು ತಮ್ಮ ಮೂಲಸ್ವರೂಪದಲ್ಲಿಯೇ ಉಳಿದುಕೊಂಡಿರುತ್ತವೆ ಎಂದು ಹೇಳಲಾಗದು. ಈ ಮಹಾಕವಿಗಳ ಹೆಸರಿನಲ್ಲಿ ಕೆಲವು ಹಿತಾಸಕ್ತಿಗಳು ಪ್ರಕ್ಷಿಪ್ತಗಳನ್ನು ಸೇರಿಸಿರುವುದು ಅಸಂಭವವೇನಲ್ಲ. ಇಂಥ ಪ್ರಕ್ಷಿಪ್ತಗಳನ್ನು ಕತ್ತರಿಸಿಹಾಕಿ ಹೊಸನೋಟವನ್ನು ಪ್ರತಿಭಾವಂತರು ಕೊಟ್ಟಿರುವುದೂ ಇದೆ. ಜಡ–ಚೇತನಗಳ ವಿಭಜನೆಯನ್ನೊಪ್ಪದ ಕುವೆಂಪು ಅಹಲ್ಯೆ ಪ್ರಸಂಗಕ್ಕೆ ಬೇರೆಯೇ ಅರ್ಥ, ಧ್ವನಿಯನ್ನು ತಂದಿರುವುದನ್ನು ಗಮನಿಸಬಹುದು. ಶಂಬೂಕನ ಪ್ರಸಂಗವೂ ಕುವೆಂಪು ಕೈಯಲ್ಲಿ ಬದಲಾವಣೆಯನ್ನು ಪಡೆದಿದೆ. ಇನ್ನೂ ಕೆಲವು ಉದಾಹರಣೆಗಳು ಕುವೆಂಪು ಅವರಲ್ಲಿಯೇ ಸಿಕ್ಕುತ್ತವೆ.

ಕಾದಂಬರಿಕಾರರಾದ ಗೋಪಾಲಕೃಷ್ಣ ಪೈ ಅವರ ಹೊಸ ಕಾದಂಬರಿ 'ಬ್ರಹ್ಮ' ಇಂಥ ಒಂದು ಪ್ರಯತ್ನದಲ್ಲಿ ಮೈತಾಳಿದ ಕೃತಿ. ವ್ಯಾಸಮಹರ್ಷಿಯ ಮಹಾಭಾರತಕ್ಕೆ ತಾವು ಮತ್ತೆ ಹೊರಳಲು ಕಾರಣವೇನು ಎಂಬುದನ್ನು ಪೈ ಅವರು ಹೇಳಿಲ್ಲ. ಆದರೆ ಅರ್ಪಣೆಯ ಪುಟದಲ್ಲಿ ಪರೋಕ್ಷ ಸೂಚನೆಗಳಿವೆ. '..ಪ್ರತಿಯೊಂದು ಪೌರಾಣಿಕ ಪಾತ್ರವನ್ನೂ ವಿಶ್ಲೇಷಿಸುತ್ತಾ, ಆ ಪಾತ್ರಗಳಾಗಲೀ, ಘಟನೆಗಳಾಗಲೀ ನಾವು ತಿಳಿದುಕೊಂಡಷ್ಟೇ ಅಲ್ಲ, ಅದರಾಚೆಗೂ ಧ್ವನಿ ವಿಸ್ತಾರಗಳಿವೆ ಎಂಬ ಅರಿವನ್ನು ಮೂಡಿಸುವ ಕಾಯಕ ಇಂದು

ನಿನ್ನೆಯದಲ್ಲ, ನಾನು ಅರ್ಥಮಾಡಿಕೊಳ್ಳಲು ಆರಂಭಿಸಿದ ಬಾಲ್ಯದ ದಿನಗಳಿಂದ ಹಿಡಿದು ಈಗಲೂ ನಡೆಯುತ್ತಿದೆ?'

'ಅದರಾಚೆಗೂ' ಇರುವ ಧ್ವನಿವಿಸ್ತಾರಗಳನ್ನು ಹಿಡಿಯಲು ಪೈ ಈ ಕೃತಿಯಲ್ಲಿ ಅವಲಂಬಿಸಿರುವ ಮಾರ್ಗ 'ಪ್ರಜ್ಞೆ'ಯದು. ಪುರಾಣ, ಮಹಾಕಾವ್ಯಗಳಿಗೆ ಎದುರಾದಾಗ ಪ್ರಜ್ಞೆಯ ಮಾರ್ಗ ಬಹಳ ಇಕ್ಕಟ್ಟಿನ, ಮಿತಿಗಳ ಮಾರ್ಗವಾಗಿಯೂ ತೋರಬಹುದು. ಆದರೆ ಈ ಮಾರ್ಗ ತರ್ಕದ ಕಡೆಗೆ, ಅನುಭವದ ಬೆಳಕಿನಲ್ಲಿ ಕಂಡುಕೊಳ್ಳುವ ಅರಿವಿನ ಕಡೆಗೆ ಚಲಿಸುವುದರಿಂದ ವರ್ತಮಾನದ ಬದುಕಿಗೆ ತೀರ ಪ್ರಸ್ತುತವಾಗಿರುವಂತೆ ಕಾಣಿಸುತ್ತದೆ. ಹೀಗಾಗಿಯೇ ಇಲ್ಲಿ ಪುರಾಣ, ಇತಿಹಾಸ ಮತ್ತು ವರ್ತಮಾನಗಳು ಬದಲಾಗುತ್ತ, ಒಂದು ಇನ್ನೊಂದಾಗುತ್ತ ಸಾಗುತ್ತವೆ.

ಮಹಾಭಾರತ ಒಂದು ಕಾಲಘಟ್ಟದಲ್ಲಿ ಆಗಿ ಹೋಗಿರುವ ಇತಿಹಾಸವಾಗಿರಬಹುದೇ? ವ್ಯಾಸರು ಕಟ್ಟಿದ ಕತೆ ಸೃಜನಶೀಲತೆಯ ಆಚೆಗೆ ಇರಬಹುದಾದ ಇತಿಹಾಸವನ್ನು ಹುಡುಕಿದ ಪ್ರಯತ್ನವಾಗಿರಬಹುದೇ ಇತ್ಯಾದಿ ಪ್ರಶ್ನೆಗಳು 'ಬ್ರಹ್ಮ'ದ ಹಿಂದೆ ಕ್ರಿಯಾಶೀಲವಾಗಿರುವಂತೆ ಕಾಣುತ್ತದೆ. ಈ ಕಾರಣದಿಂದಾಗಿಯೇ ಪೈ, ಮಹಾಭಾರತ ಕಥನವನ್ನು ಆಧುನಿಕ ವಿಚಾರಧಾರೆ ಮತ್ತು ಇತಿಹಾಸದ ಬದುಕಿನ ವಿನ್ಯಾಸಗಳ ಚೌಕಟ್ಟಿಗೆ ತಂದು ಜೋಡಿಸಲು ನೋಡುತ್ತಾರೆ. ಕಲ್ಪನಾವಿಲಾಸವನ್ನು ಬದಿಗೆ ಸರಿಸಿದಾಗಲೂ ಈ ಕಥನದ ಆಖ್ಯಾನಗಳು ನಮ್ಮ ಕೈಎಟುಕಿಗೆ ನಿಲುಕಬಹುದೇ ಎಂದೂ ನೋಡುತ್ತಾರೆ. ವಿಶ್ವಾಮಿತ್ರರು ಸೃಷ್ಟಿಸಿದ ತ್ರಿಶಂಕುಸ್ವರ್ಗ ಕೇವಲ ಕಾಲ್ಪನಿಕವಾಗಿರಬೇಕಾಗಿಲ್ಲ ಎಂದು ಹೇಳಲು ಇಲ್ಲಿ ಮಾಡಿಕೊಂಡಿರುವ ಬದಲಾವಣೆ ಪ್ರಜ್ಞೆಮಾರ್ಗದ ಮಿತಿಯನ್ನು ಹೇಳುತ್ತದೆ. ಆದರೆ ಪೈ ಈ ಪ್ರಸಂಗವನ್ನು ಇನ್ನೊಂದು ಉದ್ದೇಶಕ್ಕೆ ಬಳಸಿಕೊಳ್ಳುತ್ತಾರೆ: ಪ್ರಭುತ್ವದ ಹಿಂಸೆಯ ಆತ್ಯಂತಿಕ ಸ್ವರೂಪ ಸೃಷ್ಟಿಸುವ ನರಕ ವಿಶ್ವಾಮಿತ್ರನನ್ನು ಅಲ್ಲಾಡಿಸಿ ಕಾಡುತ್ತದೆ. ಅವನ ಮನಸ್ಸನ್ನು ಬೇರೊಂದು ದಿಕ್ಕಿಗೆ ತಿರುಗಿಸುತ್ತದೆ. ಇದು ವಿಶ್ವಾಮಿತ್ರನ ಬದುಕಿನ ಬಹುದೊಡ್ಡ ತಿರುವಿಗೂ ಕಾರಣವಾಗುತ್ತದೆ. ಇದು ಪೈ ಅವರ ಶಕ್ತಿಯಾಗಿಯೂ ಕಾಣಿಸುತ್ತದೆ.

ಇನ್ನೊಂದು ಮುಖ್ಯ ಪ್ರಶ್ನೆಯನ್ನೂ ಪೈ ಅವರ ಈ ಕೃತಿ ಮೇಲಿಂದಮೇಲೆ ಮಥಿಸುತ್ತದೆ. ಸೃಜನಶೀಲಕ್ರಿಯೆ ಎನ್ನುವುದು ವ್ಯಕ್ತಿಯ ಅಂತರಂಗದ ಅರಿವಿನ ಶಕ್ತಿಯಾಗಿರುವಂತೆಯೇ, ಹೊರಜಗತ್ತಿನ ಒಡನಾಟದಲ್ಲಿ, ಸಮುದಾಯದ ಜೊತೆಗಿನ ಸಂವಾದದಲ್ಲಿ ವ್ಯಕ್ತಿ ಕಂಡುಕೊಂಡ ಅನುಭವದ ಫಲವೂ ಆಗಿರುತ್ತದೆ ಎಂಬುದನ್ನು ಈ ಕೃತಿ ಹಲವು ಮಜಲುಗಳಲ್ಲಿ ತೋರಿಸುತ್ತದೆ. ಲೋಕಸಂಚಾರದ ಮೂಲಕ ಪರಾಶರ ಮತ್ತು ದ್ವೈಪಾಯನರು(ವ್ಯಾಸ) ಪಡೆದುಕೊಂಡ ಅನುಭವ ಹೇಗೆ ಮಹಾಭಾರತ ಕಥನಕ್ಕೆ ಭೂಮಿಕೆಯನ್ನು ಒದಗಿಸುತ್ತದೆ ಎಂಬುದನ್ನು ಚಿತ್ರಿಸುತ್ತದೆ. ಸಮುದಾಯಕ್ಕೆ ವಿಮುಖವಾಗಿ ನಿಂತು ವ್ಯಕ್ತಿಪ್ರಜ್ಞೆಯನ್ನೇ ನಂಬಿದ ಮನು ರಚಿಸುವ ಕೃತಿ ಸಮಾಜದ ವಿಘಟನೆಗೆ ಕಾರಣವಾಗುವುದನ್ನೂ ತೋರಿಸುತ್ತದೆ.

ಸಾಮಾನ್ಯ ಜನ ತಮ್ಮ ಬದುಕಿನ ಮೌಲ್ಯಗಳನ್ನು, ನಂಬಿಕೆಗಳನ್ನು ಸಹಜರೀತಿಯಲ್ಲಿ ಕಾಪಿಟ್ಟುಕೊಳ್ಳುವ ರೀತಿಯನ್ನು ಇಲ್ಲಿನ ಕಥನ ಸಮರ್ಥ ರೀತಿಯಲ್ಲಿ ತೋರಿಸುತ್ತದೆ.ಪುರಾಣವಾಗಲಿ, ಇತಿಹಾಸವಾಗಲಿ, ವರ್ತಮಾನವಾಗಲಿ ಮಹಿಳೆಯನ್ನು ಕಡೆಗಣಿಸಿರುವ, ಶೋಷಿಸಿರುವ ರೀತಿಯನ್ನು ಜಾಬಾಲಾ, ಮೇನಕೆ, ಪಿಂಜಲಾ, ಕಾಳಿ, ಮೈತ್ರೇಯಿ, ವಿಶ್ವಾಮಿತ್ರನ ತಾಯಿ– ಇಂಥ ಪಾತ್ರಗಳು ಹೃದಯಕ್ಕೆ ನಾಟುವಂತೆ ಚಿತ್ರಿಸುತ್ತವೆ.


ಇನ್ನಷ್ಟು ಸೂಕ್ಷ್ಮವಾಗಿ ನೋಡಲಾಗದೆ ಹೋಗಿರುವ ಸಂಗತಿಗಳೂ ಇಲ್ಲಿವೆ. ಮನು ಬರೆದ ಶಾಸ್ತ್ರಗ್ರಂಥ, ಮನುಧರ್ಮವಾಗಿ ವಿಶ್ವಾಮಿತ್ರನ ರಾಜ್ಯದಲ್ಲೇ ಬೇರುಬಿಡುವ ರೀತಿ , ಈ ಗ್ರಂಥವನ್ನು ಬರೆದ ಹಿನ್ನೆಲೆಯ ಸಂಗತಿಗಳು, ಮನುವಿನ ಮನೋಧರ್ಮ, ಚಿಂತನಕ್ರಮ ಪರಿಣಾಮಕಾರಿಯಾಗಿ ಚಿತ್ರಿತವಾಗಿಲ್ಲ. ಚಾರ್ವಾಕರ ವಿಚಾರಗಳ ಮಂಥನವೂ ಇನ್ನಷ್ಟು ಗಾಢವಾಗಿ ನಡೆಯಬೇಕಾಗಿತ್ತು. ಇಂಥ ಕೊರತೆಗಳು ಅಲ್ಲಲ್ಲಿ ಕಾಣಿಸುತ್ತವೆ. ಇನ್ನಷ್ಟು ಸಾವಧಾನವಾಗಿ ನೋಡಿದ್ದರೆ ಇಂಥ ಕೊರತೆಗಳನ್ನು ಮೀರಬಹುದಿತ್ತು. ಬರವಣಿಗೆಯ ಚುರುಕು, ಹಗುರ ಶೈಲಿ, ಕಾವ್ಯದ ಮಿಂಚು, ಆಕರ್ಷಕ ಕಥಾನಿರೂಪಣೆ ಪೈ ಅವರ ಕಥನಕಲೆಯ ಹೆಚ್ಚುಗಾರಿಕೆಗಳು.

–ಜಿ.ಪಿ. ಬಸವರಾಜು

ಪು: ಹರಿಲಾಲ್(ರಾಷ್ಟ್ರಪಿತನ ನತದೃಷ್ಟ ಮಗ) ಲೇ: ಟಿ.ಎನ್. ವಾಸುದೇವಮೂರ್ತಿ ಪ್ರ: ಗೀತಾಂಜಲಿ ಪ್ರಕಾಶನ ಶಿವಮೊಗ್ಗ(೯೪೪೯೮೮೬೩೯೦) ಪು: ೨೦೪ ಬೆ: ೧೮೦/-

## ಹರಿಲಾಲನ ನೆಪದಲ್ಲಿ...

ಇದು ಮಹಾತ್ಮ ಗಾಂಧಿಯವರ ಹಿರಿಯ ಮಗ ಹರಿಲಾಲನ ಬದುಕಿನ ಕುರಿತ ಪುಸ್ತಕ. ಕೃತಿಕಾರರೇ ಬರೆದಿರುವ ಮುನ್ನುಡಿಯಲ್ಲಿ ಪ್ರಾಮಾಣಿಕ ಪ್ರಯತ್ನದಂತೆ ತೋರುವ ಕೆಲವು ಮಾತುಗಳಿದ್ದರೂ ಈ ಕೃತಿಯ ನಿಗೂಢ ರಾಜಕೀಯ ಕಾರ್ಯಸೂಚಿ ಅಷ್ಟು ಸರಳವಾಗಿಲ್ಲ. "ಎಲ್ಲಕ್ಕಿಂತ ಮಿಗಿಲಾಗಿ ಹರಿಲಾಲ್ ನೆಲೆಯಲ್ಲಿ ನಿಂತು ಗಾಂಧಿಯ ಅಂತರ್ಯವನ್ನು ಇನ್ನೂ ಸಮೀಪದಿಂದ, ಸಹಾನುಭೂತಿಯಿಂದ ನೋಡುವುದು ಈ ಕೃತಿಯ ಮುಖ್ಯ ಆಶಯವಾಗಿದೆ. ಒಬ್ಬ ಮಗನ ನೆಲೆಯಲ್ಲಿ ನಿಂತು ನೋಡಿದಾಗಲಷ್ಟೇ ರಾಷ್ಟ್ರಪಿತನ ವಿಶ್ವರೂಪದ ಸಮೀಪದರ್ಶನ ನಮಗಾಗಬಲ್ಲದು" –ಎಂಬ ಮಾತಿನಲ್ಲಿರುವ




ವ್ಯಂಗ್ಯ ಪುಸ್ತಕದುದ್ದಕ್ಕೂ ಬೇರೆಬೇರೆ ರೂಪದಲ್ಲಿ ಹರಿದಿದೆ.

ಲೇಖಕರ ಮಾತಿನ ಪ್ರಕಾರ ಕೃತಿಯನ್ನು ಕಟ್ಟಿರುವ ಮುಖ್ಯ ನಂಬಿಕೆಗಳಿವು: 'ಗಾಂಧೀಜಿ ಮಗನನ್ನು ನಿರ್ಲಕ್ಷಿಸಿದರು. ಮಗನ ನೆನಪಿನ ಕುರುಹುಗಳನ್ನು ನಾಶಪಡಿಸಬೇಕು ಎಂದು ಆಜ್ಞಾಪಿಸಿದ್ದರು. ತಾನು ಸರಿದಾರಿಯಲ್ಲಿಯೂ, ಮಗ ತಪ್ಪುಹಾದಿಯಲ್ಲಿದ್ದಾನೆಂದೂ ಅವರು ದೃಢವಾಗಿ ನಂಬಿಕೊಂಡಿದ್ದರು. ಈ ತಲೆಬುಡ ಇಲ್ಲದ ನಂಬಿಕೆಯನ್ನು ಸಂಗಡಿಗರ ತಲೆಗೂ ತುಂಬುತ್ತಿದ್ದರು. ಇದುವೆ ಗಾಂಧಿಯ ದುರಂತ. ಈ ದುರಂತದ ಫಲವನ್ನು ಉಂಡವನು ಹರಿಲಾಲ. ಹರಿಲಾಲ ಗಾಂಧಿಯಷ್ಟು ಕಠೋರ ಸಾಧಕನಲ್ಲ, ಆದರೆ ಗಾಂಧಿಗಿಂತ ಶ್ರೇಷ್ಠಮಟ್ಟದ ಆಧ್ಯಾತ್ಮಿಕ ಜಿಜ್ಞಾಸು. ಗಾಂಧಿ ವಿರಕ್ತಿ ಸಾಧಿಸಿಕೊಳ್ಳಲು ಕಸರತ್ತು ನಡೆಸುತ್ತಿದ್ದ ವಿಲಕ್ಷಣ ತಂದೆ. ಹರಿಜನರಿಗೆ ಪ್ರತ್ಯೇಕ ಮತಕ್ಷೇತ್ರದ ಅಗತ್ಯವಿಲ್ಲ ಎಂದು ತಮಗೆ ಅನ್ನಿಸಿದ ಮಾತ್ರಕ್ಕೆ ಸತ್ಯವನ್ನು ಎತ್ತಿ ಹಿಡಿದಂತಾಗುತ್ತದೆ ಎಂದು ಭಾವಿಸಿ ಆಮರಣಾಂತ ಉಪವಾಸ ವ್ರತ ಕೈಗೊಂಡ ಗಾಂಧಿ ಒಬ್ಬ ಸರ್ವಾಧಿಕಾರಿ. ತಂದೆ ಮಕ್ಕಳ ತಿಕ್ಕಾಟ ಎರಡು ಘನವಾದ ವ್ಯಕ್ತಿತ್ವಗಳ ನಡುವಿನ ಘರ್ಷಣೆಯಾಗಿತ್ತು. ಎರಡು ವಿಭಿನ್ನ ಸಿದ್ಧಾಂತಗಳ ನಡುವಿನ ಭಿನ್ನಾಭಿಪ್ರಾಯವಾಗಿತ್ತು, ಒಬ್ಬರ ಪಾಲಿನ ಸತ್ಯಾಗ್ರಹ ಮತ್ತೊಬ್ಬನ ಪಾಲಿನ ಹಟಮಾರಿತನವಾಗಿತ್ತು' ಇತ್ಯಾದಿ ಇತ್ಯಾದಿ.

ಆಕರ್ಷಕವಾದ ಭಾಷೆಯಿಂದ ವಾಕ್ಯವಾಕ್ಯಗಳನ್ನೂ ವ್ಯಾಖ್ಯಾನೋದ್ಯಮದಲ್ಲಿ ತೊಡಗಿಸಿ, ಪುಸ್ತಕವನ್ನು 'ಕುರ್ಕುರೆ' ತಿಂಡಿಯಂತೆ ತಯಾರಿಸಿರುವ ಕೃತಿಕಾರರು ಇವೆಲ್ಲವನ್ನು ಗಾಂಧೀವಿರೋಧದ ಪ್ಯಾಕೆಟ್‌ನಲ್ಲಿ ತುಂಬಿಸಿದ್ದಾರೆ. ಗಾಂಧೀಚಿಂತನೆಯ ಕುರಿತು ಜಾಗತಿಕವಾಗಿ ನಡೆಯುತ್ತಿರುವ ಬೌದ್ಧಿಕ ವಾಗ್ವಾದಕ್ಕೆ ಹೊಸದಾಗಿ ಸೇರಿಸಬಹುದಾದ ಯಾವೊಂದು ಅಂಶವೂ ಇಲ್ಲದ ಈ ಕೃತಿ ಸತ್ಯಾನ್ವೇಷಣೆಯ ಸೋಗಿನಲ್ಲಿ ಹೊರಟಿದೆ. ಆದರೆ ಇಲ್ಲಿ ತಾನು ನಂಬಿದ್ದನ್ನು ಪ್ರತಿಪಾದಿಸುವ ಕಾರ್ಯಕರ್ತನೊಬ್ಬನ ಅಮಿತೋತ್ಸಾಹವಿದೆಯೇ ಹೊರತು ನಿಜಾನ್ವೇಷಕನೊಬ್ಬನಿಗೆ ಇರಲೇಬೇಕಾದ ಹುಡುಕಾಟದ, ಸ್ವತಂತ್ರ ಆಲೋಚನೆಯ ಮನೋಧರ್ಮವೇ ಇಲ್ಲ.

ಗಾಂಧಿಯವರ ಚಿಂತನೆ ಮತ್ತು ರಾಜಕಾರಣದ ಮಾದರಿಯನ್ನು ವಿಮರ್ಶೆಗೊಳಪಡಿಸಿ ಸೈದ್ಧಾಂತಿಕವಾಗಿ ಗಾಂಧೀ ರಾಜಕಾರಣವನ್ನು ನಿರಾಕರಿಸಿದ ಕೆಲವು ಮಾದರಿಗಳು ನಮ್ಮ ಮುಂದಿವೆ. ಅವುಗಳಲ್ಲಿ ಇಂದು ಬಲಿಷ್ಠವಾಗಿ ಕಾಣುವ ಹಿಂದುತ್ವದ ಬಲಪಂಥೀಯ ರಾಜಕಾರಣ, ಭಾರತದ ಸಂಘಟಿತ ಕಮ್ಯುನಿಸ್ಟ್ ಚಳವಳಿಯ ರಾಜಕಾರಣ, ಬಹುಜನ ಸಮಾಜದ ರಾಜಕಾರಣ ಮತ್ತು ಸ್ವಾತಂತ್ರ್ಯೋತ್ತರದಲ್ಲಿ ಗಾಂಧೀಚಿಂತನೆಯನ್ನು ನೇರವಾಗಿ ತಿರಸ್ಕರಿಸದಿದ್ದರೂ 'ಗಾಂಧೀವಾದ' ಮತ್ತು ರಾಜಕಾರಣವನ್ನು ವ್ಯವಸ್ಥಿತವಾಗಿ ಅಪ್ರಸ್ತುತಗೊಳಿಸಿರುವ ಕಾಂಗ್ರೆಸ್ ಪಕ್ಷದ ಅಸ್ತವ್ಯಸ್ತ ರಾಜಕಾರಣ ಪ್ರಮುಖವಾದವುಗಳು. ಆದರೆ ಈ ಕೃತಿಗೆ ಅಂಥ ಯಾವ ತಾತ್ವಿಕ ಭಿನ್ನಾಭಿಪ್ರಾಯಗಳಾಗಲೀ, ಗಂಭೀರ ಶೈಕ್ಷಣಿಕ ಆಸಕ್ತಿಗಳಾಗಲೀ ಇದ್ದಂತಿಲ್ಲ. ಒಂದು ವೇಳೆ ಹರಿಲಾಲನೆಂಬ ದಾರಿತಪ್ಪಿದ ಮಗನ ಅಡ್ಡಾದಿಡ್ಡಿ ಬದುಕನ್ನು ಕರುಣಾಜನಕವಾಗಿ ವರ್ಣಿಸುವುದಷ್ಟೇ ಇದರ ಉದ್ದೇಶವಾಗಿದ್ದರೂ ಆಕ್ಷೇಪವಿರುತ್ತಿರಲಿಲ್ಲ. ಆದರೆ ಇದು ಅರೆ ಸತ್ಯಗಳ (ಅಸ್ಪೃಶ್ಯನ ಮಲದ ಮಡಕೆಯನ್ನು ಸ್ವಚ್ಛಗೊಳಿಸಲು ಕಸ್ತೂರ್‌ಬಾ ನಿರಾಕರಿಸಿದ ಉನ್ನತ ವಿದ್ಯಾಭ್ಯಾಸಕ್ಕೆ ಗಾಂಧಿ ಹರಿಲಾಲನಿಗೆ ಬದಲಾಗಿ ಛಗನಲಾಲ್‌ನನ್ನು ಕಳಿಸಿದರೆಂಬ) ಜೊತೆಗೆ ಅಪವ್ಯಾಖ್ಯಾನಗಳ (ಬಾಲಕ ರಾಮದಾಸ್ ಹಣ ಕದ್ದ ಪ್ರಸಂಗ) ಮೂಲಕ ಗಾಂಧಿಯವರ ವ್ಯಕ್ತಿತ್ವವನ್ನು ವಿರೂಪಗೊಳಿಸುವುದಕ್ಕೆ ತೊಡಗಿದೆ. ಮಾತ್ರವಲ್ಲ ಮಹಾದೇವ ದೇಸಾಯಿಯವರು ಕರ್ನಾಟಕದವರೆಂಬ ತಪ್ಪು ಮಾಹಿತಿಯನ್ನೂ ಕೊಡುತ್ತಿದೆ. 'ರಾಷ್ಟ್ರಪಿತನ ವಿಶ್ವರೂಪದ ಸಮೀಪ ದರ್ಶನ'ಕ್ಕೆ ಹೊರಟ ಈ ಜೀವನಚರಿತ್ರೆ ಎಷ್ಟು ಕ್ಷುಲ್ಲಕವಾಗಿದೆಯೆಂದರೆ, ಅದು ಗಾಂಧಿಯವರು ಪರಿಕಲ್ಪಿಸಿದ 'ಸತ್ಯಾಗ್ರಹ'ವೆಂಬ ಗಹನವಾದ ತತ್ತ್ವಜ್ಞಾನದ ಮುಂದೆ 'ಹಟಮಾರಿತನ'ವೆಂಬ ವ್ಯಕ್ತಿಯ 'ಸ್ವ-ಭಾವ'ವನ್ನು ಎದುರು-ಬದುರಾಗಿಸಿ ಅದನ್ನು ಹಾಸ್ಯಾಸ್ಪದಗೊಳಿಸಲಾಗಿದೆ. ಅಥವಾ ಇದನ್ನು ಹೀಗೂ ಹೇಳಬಹುದು. ಘಟನೆಗಳನ್ನು ಆಯ್ದು ವ್ಯಾಖ್ಯಾನಗಳನ್ನು ಪೋಣಿಸುವ ಕೃತಿಕಾರರ ಕೈಚಳಕದಲ್ಲಿರುವ ಇಂಗಿತವೆಂದರೆ ಗಾಂಧಿಯದ್ದೇ ಹಟಮಾರಿತನ, ಹರಿಲಾಲನದ್ದು ಮಾತ್ರ ಸತ್ಯಾಗ್ರಹ.

ನನ್ನ ಗಮನಕ್ಕೆ ಬಂದಂತೆ ಕೃತಿಕಾರರು ಇಲ್ಲಿ ಉಲ್ಲೇಖಿಸುವ ಯಾವ ಪುಸ್ತಕವೂ ಹರಿಲಾಲನನ್ನು ಮುಂದಿಟ್ಟುಕೊಂಡು ಹೀಗೆ ವಾರೆನೋಟದಲ್ಲಿ ಗಾಂಧಿಯವರನ್ನು ಕುಬ್ಜಗೊಳಿಸುವ ಪ್ರಯತ್ನ ಮಾಡಿಲ್ಲ. ಹರಿಲಾಲ ತಮ್ಮನ್ನು ಭೇಟಿ ಮಾಡಿದ ಕೊನೆಯ ಸಲ ಗಾಂಧಿ ಹೇಳುವ 'ನನ್ನ ಕೊನೆಯ ಆಸೆ ನಿನ್ನ ತೊಡೆಯ ಮೇಲೆ ತಲೆ ಇಟ್ಟು ಪ್ರಾಣ ಬಿಡುವುದು' ಎಂಬ ಮಾತು ಅವರಿಬ್ಬರ ಸಂಬಂಧದ ಸಂಕೀರ್ಣತೆಯ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಹಾಗಾಗಿ ಈ ಕೃತಿಯಲ್ಲಿ ಗಾಂಧಿಯವರ ಸಮೀಪದರ್ಶನವಾಗುವುದಕ್ಕಿಂತಲೂ ಲೇಖಕರ ರಾಜಕೀಯ ಉದ್ದೇಶದ ಸಮೀಪದರ್ಶನವಾಗುತ್ತಿದೆ.


ಈ ಪುಸ್ತಕವನ್ನು ಓದಿದ ಬಳಿಕ ನನಗನ್ನಿಸುವುದೇನೆಂದರೆ, ನಮ್ಮ ಕಾಲದಲ್ಲಿ ದಾರಿತಪ್ಪಿದ, ಆದರೆ ನಮ್ಮವರೇ ಆಗಿರುವ ಕೆಲವು ಕಿಡಿಗೇಡಿಗಳು ಗಾಂಧಿ ಪ್ರತಿಮೆಯನ್ನೋ, ಅಂಬೇಡ್ಕರ್ ಪ್ರತಿಮೆಯನ್ನೋ ವಿರೂಪಗೊಳಿಸುವುದನ್ನು ನಾವು ನೋಡಿದ್ದೇವೆ.

ಅಂಥ ಮನಸ್ಸಿದ್ದೂ, ಬೀದಿಯಲ್ಲಿ ಅದನ್ನು ಮಾಡುವುದಕ್ಕೆ ಅಂಜುವವರು ಏನು ಮಾಡಬಹುದು ಎಂಬುದಕ್ಕೆ ಈ ಪುಸ್ತಕ ಒಂದು ತಾಜಾ ಉದಾಹರಣೆ.

-ನಿತ್ಯಾನಂದ ಬಿ. ಶೆಟ್ಟಿ

**ಪು: ಅಪೂರ್ವ ಒಡನಾಟ**(ಅಂಕಣ ಬರಹಗಳು) **ಲೇ: ಎಚ್.ಎಸ್. ಸತ್ಯನಾರಾಯಣ ಪ್ರ: ಕಣ್ವ ಪ್ರಕಾಶನ, ಬೆಂಗಳೂರು**(೦೮೦-೨೩೨೦೬೭೭೮) **ಪು: ೨೪೪ ಬೆ: ರೂ.೧೭೪/-**

## ಸಾಹಿತಿಗಳೊಂದಿಗಿನ ಒಡನಾಟದ ಸಂಭ್ರಮ




**ಈ** ಪುಸ್ತಕ ಬೇಂದ್ರೆ-ಕುವೆಂಪು ಅವರಿಂದ ಹಿಡಿದು ಕುಂವೀ-ಡುಂಡಿರಾಜರವರೆಗೆ ೫೧ ಜನ ಸಾಹಿತಿಗಳೊಂದಿಗೆ ಲೇಖಕರು ಒಡನಾಡಿದ ಅನುಭವದ ನಿರೂಪಣೆಗಳನ್ನೊಳಗೊಂಡಿದೆ. ಇವೆಲ್ಲವು "ಕವಿಸಮಯ" ಎಂಬ ಫೇಸ್ ಬುಕ್ ಅಂಕಣದಲ್ಲಿ ಪ್ರಕಟವಾದವುಗಳಂತೆ. ಸಾಹಿತಿಗಳ ಜೊತೆಗಿನ ಸತ್ಯನಾರಾಯಣರ ಒಡನಾಟ ಅವರ ಬಾಲ್ಯದಿಂದಲೇ ಶುರುವಾಗುತ್ತದೆ. ಇಂದಿನ ತಲೆಮಾರಿನ ಅದೆಷ್ಟೋ ಜನ ಬೇಂದ್ರೆ ಅವರನ್ನು ನೋಡೇ ಇಲ್ಲದಿರುವಾಗ ಇವರಿಗೆ ಅವರನ್ನು ಕಾಣುವ ಭಾಗ್ಯ ಬಾಲ್ಯದಲ್ಲೊಮ್ಮೆ ದೊರೆಯುತ್ತದೆ. ಅದಾಗಲೇ ಮುಪ್ಪು ಆವರಿಸಿದ್ದ ಬೇಂದ್ರೆ ಅವರು ಸ್ನಾನ ಪೂಜಾದಿಗಳನ್ನು ಮುಗಿಸಿ ಬಂದು ಮಂಚದ ಮೇಲೆ ಒರಗಿ ದಣಿವಾರಿಸಿಕೊಂಡ ಬಳಿಕ ಇವರನ್ನು ಮಾತಾಡಿಸಿದ್ದು, ಹಸ್ತಾಕ್ಷರ ಕೊಟ್ಟದ್ದು ಇಲ್ಲಿ ಒಂದು ಅಪೂರ್ವ ಅನುಭವವಾಗಿ ದಾಖಲಾಗಿದೆ. ಹಸ್ತಾಕ್ಷರ ಪಡೆಯಲು ಕೊಟ್ಟ ಪೆನ್ನು ಬೇಂದ್ರೆಯವರ ಕೈಯಲ್ಲಿ ಬರೆಯದೆ ಹೋದಾಗ "ತಮ್ಮಾ, ನಿನ್ನ ಪೆನ್ನು ಬಹಳ ಪತಿವ್ರತೆ ಅಂತ ಕಾಣ್ತದ" ಎಂದು ಚಟಾಕಿ ಹಾರಿಸಿದ್ದು,ಸಂದರ್ಶಕರ ಪುಸ್ತಕ ತೋರಿಸಿ "ನೀನೂ ಏನಾದರೂ ಬರಿ. ನಿನ್ನ ಹಸ್ತಾಕ್ಷರವೂ ನನಗೆ ಬೇಕು " ಎಂದು ಅವರು ತೋರುವ ದೊಡ್ಡತನ ಲೇಖಕರಿಗೆ 'ಕನಸಿನ ಪಯಣ'ವಾಗಿ ಇಲ್ಲಿ ಕಂಡಿದೆ. "

ಸಾಹಿತಿಗಳ ಸಂಪರ್ಕವನ್ನು ಎಲ್ಲರೂ ಬಯಸುತ್ತಾರಾದರೂ ಹಾಗೆ ಅದು ಎಲ್ಲರಿಗು ಸಿಕ್ಕುವುದಿಲ್ಲ. ಎಷ್ಟೋ ಜನರಿಗೆ ಅವರೊಂದಿಗೆ ಏನು ಮಾತಾಡಬೇಕೆಂದೇ ತೋಚುವದಿಲ್ಲ. ಕನಿಷ್ಠಪಕ್ಷ ಅವರ ಬರಹಗಳನ್ನಾದರೂ ಓದಿರಬೇಕಾಗುತ್ತದೆ. ತಮ್ಮ ಓದುಗರೊಂದಿಗೆ ಮಾತನಾಡುವ, ಅವರೊಂದಿಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಬಯಕೆ ಸಾಹಿತಿಗಳಿಗೂ ಇರುತ್ತದೆ ಎಂಬ ವಿಚಾರ ಇಲ್ಲಿಯ ಅನುಭವಗಳಿಂದ ತಿಳಿಯಬಹುದು. ಇದಕ್ಕೆ ಅಪವಾದ ಎಂಬಂತೆ ಕಿರಿಕಿರಿ ಮಾಡುವ ಓದುಗ ಅಭಿಮಾನಿಗಳಿಂದ ತಪ್ಪಿಸಿಕೊಳ್ಳುವ ಸದಾ ಏಕಾಂತ ಬಯಸುವ ಸಾಹಿತಿಗಳೂ ಇಲ್ಲದಿಲ್ಲ. ಉದಾ: ಎಸ್.ಎಲ್.ಭೈರಪ್ಪನವರನ್ನು ಬೆಂಗಳೂರಿನಲ್ಲಿ ಮೊದಲಸಲ ಕಂಡು "ನೀವು ಭೈರಪ್ಪನವರಲ್ಲವೆ " ಎಂದಾಗ ಅವರು ಸಿಡುಕಿನಿಂದ "ಅಲ್ಲ" ಎಂದು ಹೊರಟುಹೋದ ಪ್ರಸಂಗವು ಇಲ್ಲಿದೆ.

ಸತ್ಯನಾರಾಯಣ ಅವರ ಸಾಹಿತಿಗಳ ಭೇಟಿ ಇಲ್ಲಿ ಸಂದರ್ಶನಕಾರರಂತೆ ಉದ್ದೇಶಪೂರ್ವಕವಾಗಿರದೆ ಸಮಯಾವಕಾಶ ಒದಗಿದಂತೆ ಸಹಜವಾಗಿ ನಡೆದಿವೆ. ಆದರೆ ಅವು ತೀರಾ ಲೋಕಾಭಿರಾಮವಾಗಿ ಇರದೆ, ಚರ್ಚೆ, ಸಂವಾದ, ಕಾಲೆಳೆಯುವಿಕೆಗಳನ್ನೂ ಪಳಗೊಂಡಿವೆ, ನಿಸಾರ್ ಅಹಮದ್ ಅವರೊಂದಿಗೆ ಮಾತಾಡುತ್ತ "ಸರ್ ಚಂಪಾ ಅವರು ನೀವ್ ಬರ್ದಿರೋದು ನಾಲ್ಕೋ ಐದೋ ಒಳ್ಳೆಯ ಪದ್ಯಗಳು ಮಾತ್ರ ಅಂತ ತಮಾಷೆ ಮಾಡಿದ್ದಾರಲ್ಲ" ಎಂದದ್ದಕ್ಕೆ ನಿಸಾರ್ ಅವರು ಸಿಟ್ಟಾಗದೆ "ಅವನು ಹೇಳ್ತಾನೆ, ನಾವೆಲ್ಲ ವಾಪಾಸ್ ಹೇಳಲ್ಲ ಅಷ್ಟೇ!" ಎಂದು ಸುಮ್ಮನಾಗುತ್ತಾರೆ.


ಸಾಹಿತಿಗಳ ಒಡನಾಟದ ಅನುಭವ ಅವರ ವ್ಯಕ್ತಿತ್ವದ ಪರಿಚಯವನ್ನು ಯಥಾವತ್ತಾಗಿ ಮಾಡುತ್ತವೆ. ಗಂಭೀರತೆಯ ಸಾಕಾರಮೂರ್ತಿಯಂತಿದ್ದ ಕುವೆಂಪು ಅವರನ್ನು ಕಾಣಲು ಹೋದಾಗ ಹಣ್ಣು ಹಣ್ಣು ಮುದುಕರಾಗಿದ್ದ ಕುವೆಂಪು ಅವರನ್ನು ಇನ್ನೂ ಕಾಲೇಜು ಯುವಕರಾಗಿದ್ದ ಸತ್ಯನಾರಾಯಣ ಈಗ ನೀವೇನು ಬರೆಯುತ್ತಿರುವಿರಿ ಎಂದು ಕೇಳುತ್ತಾರೆ. ಕುವೆಂಪು ಅವರತ್ತ ದೃಷ್ಟಿಬೀರುತ್ತ "ನಾನೀಗ ಕಾವ್ಯವನ್ನು ಬರೆಯುತ್ತಿಲ್ಲ, ಬದುಕುತ್ತಿದ್ದೇನೆ" ಎನ್ನುತ್ತಾರೆ. ಅಲ್ಲದೆ "ನೀವೆಲ್ಲರೂ ನಿಮ್ಮ ನಿಮ್ಮ ಕೆಲಸದಲ್ಲೇ ದೇವರನ್ನು ಕಾಣಬೇಕು" ಎನ್ನುತ್ತಾರೆ. ಇನ್ನು ಶಿವರಾಮ ಕಾರಂತರು, ಚಿಕ್ಕಮಗಳೂರಿಗೆ ಕಾರ್ಯಕ್ರಮಕ್ಕೆ ಬಂದ ಸಂದರ್ಭ: ಭಾಷಣ ಮುಗಿಸಿ ವಿಶ್ರಾಂತಿ ಪಡೆಯಲು ರೂಮಿಗೆ ಹಿಂದಿರುಗಿದಾಗ ಜೊತೆಗಿದ್ದ ಹಿರೇಮಗಳೂರು ಕಣ್ಣನ್ "ನೀವೀಗ ಆಸರೆಗೆ ತಣ್ಣಗೆ ಏನು ತೆಗೆದುಕೊಳ್ಳುತ್ತೀರಿ?" ಎಂದು ಕೇಳಿದಾಗ ಕಾರಂತರು "ಸದ್ಯ, ಕಚ್ಚೆ ಬಿಚ್ಚೆ ಉಚ್ಚೆ ಹೊಯ್ದರೆ ಸಾಕಾಗಿದೆ" ಎಂದುದೂ ಒಂದು ರಸ-ಕ್ಷಣವಾಗಿ ಇಲ್ಲಿ ನಿರೂಪಿತವಾಗಿದೆ.

ತೇಜಸ್ವಿ, ಕಡಿದಾಳ್ ಶಾಮಣ್ಣ , ವೈದೇಹಿ, ಕೆ.ಎಸ್.ನ. ಕುರಿತ ಬರಹಗಳು ಆಪ್ತವೆನಿಸುತ್ತವೆ ಇಲ್ಲಿ ವ್ಯೆಯನ್ಕೆ , ಅ.ರಾ.ಮಿತ್ರ, ಪಾ.ವೆಂ.ಕುರಿತ ಲೇಖನಗಳಿದ್ದೂ ಮಾಸ್ತಿ, ಲಂಕೇಶ್, ಅನಂತಮೂರ್ತಿ , ಮಹಾದೇವರಂತಹ ಪ್ರಮುಖ ಲೇಖಕರ ಗೈರುಹಾಜರಿ ಎದ್ದುಕಾಣುತ್ತದೆ. ಆದರೆ ಒಬ್ಬ ವ್ಯಕ್ತಿಗೆ ಎಲ್ಲ ಲೇಖಕರ ಪರಿಚಯವಿರಬೇಕೆಂದಿಲ್ಲವಲ್ಲ? ಸತ್ಯನಾರಾಯಣ ಅವರಿಗೆ ಇಷ್ಟೆಲ್ಲ ಸಾಹಿತಿಗಳ ಸಂಪರ್ಕ ಸಾಧ್ಯವಾಗಿರುವದಕ್ಕೆ ಅವರು ಯಾವುದೇ ಗುಂಪಿಗೆ ಸೇರದಿರುವುದು ಕಾರಣವಾಗಿರಬಹುದು ಆದರೆ ಈ ಪುಸ್ತಕದ ಮುಖಪುಟಕ್ಕೆ ಇವರು ಅದರ ತುಂಬಾ ತಮ್ಮದೇ ಒಂದು ದೊಡ್ಡ ಫೋಟೋವನ್ನು ಹಾಕಿಕೊಂಡಿರುವುದು ಬೇರೆ ಏನೋ ಸಂದೇಶ ನೀಡುವಂತಿದೆ.

–ಎನ್.ಎಮ್. ಕುಲಕರ್ಣಿ

**ಪು: ಸಂತನಾಗದ ವಸಂತ**(ನಾಟಕ) **ಲೇ: ಸತ್ಯನಾರಾಯಣರಾವ್ ಅಣತಿ ಪ್ರ: ಗೀತಾಂಜಲಿ ಪ್ರಕಾಶನ, ಶಿವಮೊಗ್ಗ**(೯೪೪೯೮೮೬೩೯೦) **ಪು: ೧೨೪ ಬೆ: ರೂ ೧೦೦/-**

## ವಸಂತನೇಕೆ ಸಂತನಾಗಬೇಕು?!




**ಸ**ತ್ಯನಾರಾಯಣ ರಾವ್ ಅಣತಿ ಅವರ ಇತ್ತೀಚಿನ ಕೃತಿ'ಸಂತನಾಗದ ವಸಂತ' ಮಹಾಭಾರತದಲ್ಲಿ ಬ ರುವ ಪಾಂಡು ಮಾದ್ರಿಯ ದಾಂಪತ್ಯ ಜೀವನವನ್ನು ವಿಶ್ಲೇಷಣೆಗೆ ಒಳಪಡಿಸುವ ನಾಟಕ. ಪಾಂಡು ಮಾದ್ರಿಯ ಆಖ್ಯಾನವನ್ನು ಕುರಿತು ಕಡೆಂಗೋಡ್ಲು ಶಂಕರ ಭಟ್ಟರು (೧೯೦೪-೧೯೬೮) ರಚಿಸಿದ 'ಮಾದ್ರಿಯ ಚಿತೆ'(೧೯೩೨) ಕಥನಕವನ ತನ್ನ ವರ್ಣನೆ ಹಾಗು ಅಭಿವ್ಯಕ್ತಿಯ ತೀವ್ರತೆಯಿಂದ ಮನ ಸೆಳೆಯುತ್ತದೆ. ಬದುಕು, ಸಾವು, ವಿರಹ, ಕಾಮ ಇತ್ಯಾದಿಗಳ ಬಗೆಗಿನ ಕವಿಯ ಚಿಂತನೆ ಹಾಗು ದರ್ಶನವನ್ನು ಮೀರಿ ಹೃದಯಕ್ಕೆ ತಟ್ಟುವ ಕಲಾಕೃತಿಯ ರೂಪ ಪಡೆದಿರುವುದರಿಂದಲೇ ಅದು ಕನ್ನಡ ಕಾವ್ಯಲೋಕದಲ್ಲಿ ಚಿರಂತನ ಸ್ಥಾನ ಪಡೆದಿದೆ. ಪಾಂಡು ಮಾದ್ರಿ ಹೆಸರೆತ್ತಿದೊಡನೆ ನಮಗೆ ನೆನಪಾಗುವುದೇ ಭಟ್ಟರ 'ಮಾದ್ರಿಯ ಚಿತೆ'!

ಕಿಂದಮ ಮಹರ್ಷಿ ಮೃಗರೂಪದಲ್ಲಿ ಮೈಥುನದಲ್ಲಿ ಮೈಮರೆತಿರುವುದನ್ನು ಅರಿಯದೆ ಪಾಂಡು ಬಾಣ ಪ್ರಯೋಗಮಾಡಿ "ನಿನ್ನ ಮಡದಿಯ ಜತೆ ಮೈಥುನದಲ್ಲಿ ಮೈಮರೆತಾಗ ನಿನಗೆ ಹೀಗೆಯೇ ಸಾವು ಬರಲಿ" ಎಂದು ಅಭಿಶಪ್ತನಾದ. ಸಂನ್ಯಾಸ ದೀಕ್ಷೆ ತೊಟ್ಟು ಮಡದಿಯರೊಡಗೂಡಿ ಶತಶೃಂಗ ಪರ್ವತದಲ್ಲಿರಲು ವಸಂತ ಋತುವಿನಾಗಮನದಲ್ಲಿ ಮಾದ್ರಿಯ ಜವ್ವನಕ್ಕೆ ಮನಸೋತು ಆಕೆ ಬೇಡಬೇಡವೆಂದು ಕೊಸರಿಕೊಂಡರೂ ಕೇಳದೆ, ಋಷಿ ಶಾಪ ಮರೆತು,ಕಾಮಾತುರನಾಗಿ ಆಕೆಯನ್ನು ಆವರಿಸಿಕೊಂಡು ಭೋಗದಲ್ಲೇ ಸಾವನ್ನಪ್ಪಿದ. ಇದು ನಾಟಕದ ವಸ್ತು. ಎಂಟು ಕಪ್ಪುಬಿಳಿ ಚಿತ್ರಗಳು, ಎರಡು ಭಾಗಗಳು ಮತ್ತು ಒಂಬತ್ತು ದೃಶ್ಯಗಳನ್ನು ಒಳಗೊಂಡ ಈ ನಾಟಕದಲ್ಲಿ ಗದ್ಯವೂ ಅಲ್ಲದ,ಪದ್ಯವೂ ಅಲ್ಲದ,ಅಲ್ಲಲ್ಲಿ ಗದ್ಯ,ಅಲ್ಲಲ್ಲಿ ಪದ್ಯ,ಅಲ್ಲಲ್ಲಿ ಪದ್ಯಗಂಧಿ ಗದ್ಯಸಹಿತ ಸಂಭಾಷಣೆ ಕಂಡುಬರುತ್ತದೆ. ಇದರ ಉದ್ದೇಶ,ಪರಿಣಾಮದ ಬಗೆಗಿನ ಚರ್ಚೆ ನಾಟಕ ಆಡಿಸುವವರು ಮತ್ತು ನಾಟಕ ನೋಡುವವರು ಮಾಡಬೇಕು.ಬೇಸರದ ಸಂಗತಿ ಎಂದರೆ ನಾಟಕ ಓದಿ ಮುಗಿಸಿದ ಮೇಲೆ ಯಾವ ಒಂದು ಸಾಲೂ ಮನಸ್ಸಿನಲ್ಲಿ ಅಚ್ಚೊತ್ತಿ ಕೂರುವುದಿಲ್ಲ!

'ನಾಟಕದ ಶೀರ್ಷಿಕೆ ಚಮತ್ಕಾರಿಕವಾಗಿದೆ.ವಸಂತ ಸಂತನಾಗುವುದು ಹೇಗೆ ಸಾಧ್ಯ? ಶೃಂಗಾರವೇ ವಸಂತದ ಸ್ಥಾಯಿ ಭಾವ.ಪಾಂಡುವನ್ನು ವಸಂತದ ಜತೆ ಸಮೀಕರಿಸಿ ನೋಡಿದರೆ ಆತ ಸಂತನಾಗಿ ಬದುಕಿ ವಸಂತದಲ್ಲಿ ಪ್ರಕೃತಿಸಹಜವಾದ ಕಾಮದ ಕರೆಗೆ ಓಗೊಟ್ಟು ಕಾಮಕೇಳಿಯಲ್ಲೆ ಸತ್ತ. ಸಂತ ವಸಂತದಲ್ಲಿ ಸಂತತ್ತ್ವ ತೊರೆದು ಸತ್ತ.ಅವನ ಸಂತತ್ತ್ವ ಒಡಲೊಳಗೆ ಹೊತ್ತಿ ಉರಿಯುತ್ತಿದ್ದ ಕಾಮದ ಕೆಂಡದ ಮೇಲಿನ ಬೂದಿಯ ಹೊದಿಕೆ!ಬದುಕಿಗೆ ಗೊಡ್ಡು ಸಂತತ್ತ್ವಕ್ಕಿಂತ ವಸಂತ ತತ್ತ್ವವೆ ಮೇಲೆಂದು ಭಾವಿಸಿದ.ಇದು ಬದುಕಿನ ಸಂಭ್ರಮಾಚರಣೆ,ಸಾವಿನ ಶೋಕಾಚರಣೆಯಲ್ಲ.ಅಣತಿಯವರ ಈ ವೈಚಾರಿಕ,ಪದಾರ್ಥವಾದಿ ದರ್ಶನದಿಂದಾಗಿ ಶೀರ್ಷಿಕೆ ಮೇಲ್ನೋಟಕ್ಕೆ ಅಸಂಗತವಾಗಿ ಕಂಡರೂ ಅರ್ಥಪೂರ್ಣವಾಗಿದೆ.


ಅಣತಿಯವರ ಮಾದ್ರಿ ಈ ಕಾಲದ ಎಚ್ಚೆತ್ತ ಹೆಣ್ಣಿನಂತೆ ನಾಟಕದುದ್ದಕ್ಕೂ ತನ್ನ ವಿಧಿಯ ಬಗ್ಗೆ ಹತ್ತುಹಲವು ಪ್ರಶ್ನೆಗಳನ್ನು ಎತ್ತುತ್ತಾಳೆ. ಬಾಯ್ಮುಚ್ಚಿಕೊಂಡು ಸಹಿಸುವ ಹೆಣ್ಣಲ್ಲ ಆಕೆ. ಗಂಡನನ್ನು, ಗಂಡಸರನ್ನು ಚುಚ್ಚುವ, ಹಳಿಯುವ,ಹೀಯಾಳಿಸುವ ಆಕೆ ಹೊಟ್ಟೆಕಿಚ್ಚಿನ,ಅಲ್ಪತನದ ಗಯ್ಯಾಳಿ. ವಿಧಿಯನ್ನು ಮೀರಬಯಸುವ ಆಕೆಗೆ ಅದನ್ನು ಮೀರುವ ಯೋಚನಾ ಲಹರಿಯೂ ಇಲ್ಲ,ಕ್ರಿಯಾಶಕ್ತಿಯೂ ಇಲ್ಲ.ತನ್ನ ದುರಂತಕ್ಕೆ ಪುರುಷನಿರ್ಮಿತಿಯನ್ನು ದೂಷಿಸುವ ಮತ್ತು ಪವಾಡ , ಮಂತ್ರ ಶಕ್ತಿಯನ್ನು ಲೇವಡಿ ಮಾಡುವ ಆಕೆ ಮಕ್ಕಳನ್ನು ಪಡೆಯುವುದು ಗಂಡಸು ಕೊಟ್ಟ ಮಂತ್ರಬಲದಿಂದಲೆ! ಈ ಮಾದ್ರಿ ಸಹಗಮನ ಮಾಡದೆ ಹೊಸ ಬದುಕಿಗೆ ಮುಖ ಮಾಡುವುದು ಕಾಲೋಚಿತವಾಗಿದೆ.ಆದರೆ ಪಾತ್ರಗಳಿಗೆ ನಮ್ಮ ವೈಚಾರಿಕತೆ,ಐಡಿಯಾಲಜಿ ಅಥವಾ ದರ್ಶನವನ್ನು ಹೇರುವುದರಿಂದ ಒಂದು ಕೃತಿ ಹೊರಹೊಮ್ಮಬಹುದೇ ಹೊರತು ಕಲಾಕೃತಿಯಾಗುವುದಿಲ್ಲ. ಅಣತಿಯವರ ನಾಟಕ ನಮ್ಮನ್ನು ಕಾಡುವ ಕಲಾಕೃತಿಯಾಗುವಲ್ಲಿ ಸೋಲುತ್ತದೆ.

–ಮಹಾಬಲೇಶ್ವರ ರಾವ್

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಮಹಾವೀರ ಜಯಂತಿ ಶುಭಾಶಯಗಳು

## ನಂ ಟೀಂ

ನಂ. ೧೫೯, 'ಅಂಬರ', ೧೨ನೇ ತಿರುವು
೩ನೇ ಮುಖ್ಯ ರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ಶಿವಮೊಗ್ಗ
ಸಂಪರ್ಕ: ೯೮೪೪೫೧೮೮೬೬



*ನಮ್ ಟೀಮ್* ತಂಡದ ನಾಟಕ ಕುವೆಂಪು ರಚಿತ ಶೂದ್ರ ತಪಸ್ವಿ ನಾಟಕದ ಒಂದು ದೃಶ್ಯ. (ನಿರ್ದೇಶನ ಹೊನ್ನಾಳಿ ಚಂದ್ರಶೇಖರ್)

'ಹೊಸ ಮನುಷ್ಯ' ಓದುಗರೆಲ್ಲರಿಗೂ
'ಶುಭ ಶುಕ್ರವಾರ'ದ ಶುಭಾಶಯಗಳು



**-ಕೆ.ಟಿ. ಗಂಗಾಧರ್**
ಮತ್ತು ಕುಟುಂಬ
ಶಿವಮೊಗ್ಗ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಯುಗಾದಿ ಹಬ್ಬದ ಶುಭಾಶಯಗಳು



**ಪ್ರೊ. ರವಿವರ್ಮಕುಮಾರ್**
**ಮತ್ತು ಕುಟುಂಬ**
ಬೆಂಗಳೂರು

## ತಿಂಗಳ ಕೊನೆಯ ಸಾಲುಗಳು



ಹನಿ ಸಮುದ್ರದಲ್ಲಿ ಲೀನವಾಗುವುದೆಂಬುದು ಎಲ್ಲರಿಗೂ ಗೊತ್ತು. ಆದರೆ ಸಮುದ್ರವೇ ಹನಿಯಲ್ಲಿ ಲೀನವಾಗಬಲ್ಲುದೆಂಬುದು ಕೆಲವರಿಗೆ ಮಾತ್ರ ಗೊತ್ತು.

–ಕಬೀರ

**ಶುಭಾಶಯಗಳೊಂದಿಗೆ,**
ಎಂ. ಶ್ರೀಧರಮೂರ್ತಿ
ಮತ್ತು ಕುಟುಂಬ
ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)